Reg. No. B 1270. Monday, 5th January, 1931.

ಕಾನಡಾವೃತ್ತ

THE KANARA NEWS.

ವರ್ಷ ೧೫

ಪತ್ರದ ವರ್ಗಣಿ.
ಕುಮುಟೆಯಲ್ಲಿ ಅಗಾವು:
ರೂಪಾಯಿ 2-4-0.
ಮನೆಯಾರ್ಡರಿಯಿಂದ
ರೂ. 3-0-0.
ವ್ಹಿ. ಪಿ. ಅಂಚೆವೆಚ್ಚ ಸೇರಿ
ರೂಪಾಯಿ 3-3-0.
ಬಿಡಿ ಸಂಚಿಕೆಗೆ 0-1-0.
ಹಳೇ ಸಂಚಿಕೆಗೆ 0-2-0

नरपतिहितकर्ता द्वेष्यतां याति लोके जनपदहितकर्ता त्यज्यते पार्थिवेन्द्रैः।
इति महति विरोधे वर्तमाने समाने नृपतिजनपदानां दुर्लभः कार्यकर्ता

ಪ್ರತಿ ಸೋಮವಾರಕ್ಕೆ ಹೊರಡಿಸಲ್ಪಡುವದು

ಸಂಚಿಕೆ ೧೦

ಜಾಹೀರಾತುಗಳ ದರ.
ಕನ್ನಡ, ಇಂಗ್ಲಿಷ ಮ್ಯಾ
ಪ್ರಾಪಿನ (೧೫ ಎಸ್ ಅ
೧ ಸಾಲುಗಳವರೆಗೆ ರೂ. ೧-
ಆ ನಂತ್ರ ಪ್ರತಿಸಾಲಿಗೆ 0-2-
ಹೆಡಿಂಗದ ಸಾಲು ಎ
ಮೊತ್ತದಿರುವದೋ ಆ ಮಾ
ಡಿಂದ ಅಷ್ಟುಸಾಲುಗಳು ಹಿ
ಯಲ್ಪಡುವವು
ಬಾಕಿ ಜಾಹಿರಾತುಗಳ ಖ
ಪತ್ರದ್ವಾರ ಯಾ ಸಮಕ್ಷ ತಿ
ಸಲ್ಪಡುವದು.

—(ಕುಮುಟಾ— ಕಾನಡಾವೃತ್ತ ಸೋಮವಾರ, ತಾರೀಖು ೫ ಮಾಹೆ ಜನವರಿ ಸನ್ ೧೯೩೧ನೇ ಇಸವಿ.)

ಕೃಷ್ಣರಾವ ಕೇಶವ ಗ್ಯಾತೊಂಡೆ,
ಆಯರ್ನ ಮರ್ಚಂಟ,
ಕುಮುಟಾ (ಉ. ಕನ್ನಡ.)

ನಮ್ಮಲ್ಲಿ

ಈ ಕೆಳಗಿನ ಸಾಮಾನುಗಳು ಅಗ್ಗವಾಗಿ ರಖಂ ಆಗಿಯೂ, ಚಿಲ್ಲರೆಯಾಗಿಯೂ ಸಿಗುತ್ತವೆ - ಸ್ಟೇಶನರಿ ಹಾರ್ಡವೇರ, ಕಬ್ಬಿಣ, ಸುಗಂಧದ್ರವ್ಯ, ಔಷಧಿಗಳು ತರತರದ ಸಾಬಾಣಗಳು, ಬಣ್ಣ-ಬ್ರಶ್ಶಗಳು, ಗಾಜಿನ ಸಾಮಾನು ಇತ್ಯಾದಿ. ಕಿರಕೋಳ ವ್ಯಾಪಾರಸ್ಥರು ರೋಖ ಮಾಲನ್ನು ಕೊಂಡರೆ, ಸವಲತ್ತು ಸಿಗುತ್ತೆ. ಒಮ್ಮೆ ಗಿರಾಕಿಯಾಗಿ ಲಾಭ ಪಡೆಯತಕ್ಕದ್ದು.

ಪ್ರೆಸಿಡೆನ್ಸಿ ಪ್ರಾವ್ಹಿಡೆಂಟ ಎಂಡ್ ಜನರಲ್
ಇನ್ಸುರನ್ಸ ಕಂಪನಿ, ಲಿಮಿಟೆಡ್.
ಹೆಡ್ ಆಫೀಸ- ಅಮೃತ ಬಿಲ್ಡಿಂಗ,
ಬೆಲರ್ಡ ಇಸ್ಟೇಟ, ಫೋರ್ಟ, ಮುಂಬಯಿ.

"ಇಂಡಿಯನ್ ಇನ್ಸುರನ್ಸ ಜರ್ನಲ್" ಎಂಬ ಪತ್ರಿಕೆಯು ಸಪ್ಟಂಬರ ಸಂಚಿಕೆಯಲ್ಲಿ ಬರೆದದ್ದೇನಂದರೆ:- ಜೀವ ವಿಮೆ ಕಂಪನಿಯ ಸಾಂಪತ್ತಿಕ ಸ್ಥಿತಿಯನ್ನು ಪರೀಕ್ಷಿಸಬೇಕಾದರೆ, ವಿಮೆಯ ಲೆಖ್ಖದ ಮಾಹಿತಿಯಿದ್ದ ತಪಾಸಕರು ಮಾಡಿದ ಕಂಪನಿಯ ಸ್ಥಿತಿ-ಗತಿಯ ಪತ್ರಿಕೆಯನ್ನೋದಬೇಕು. ಪ್ರಾವ್ಹಿಡೆಂಟ ಸೊಸಾಯಿಟಿಯು [illegible] ಕ್ರಿಯಾದಗೂ ಹಾಗೆಯೇ 'ದಿ ಪ್ರೆಸಿಡೆನ್ಸಿ ಪ್ರಾವ್ಹಿಡೆಂಟ' ಕಂಪನಿಯು ಇಂಥ ಪರೀಕ್ಷೆಯಲ್ಲಿ ಈಗ ತೇರ್ಗಡೆ ಹೊಂದಿರುವದು. ಇಡೀ ಹಿಂದುಸ್ಥಾನದಲ್ಲಿ ಚಲೋ ಸಮೃದ್ಧ ಸ್ಥಿತಿಯುಳ್ಳ ಪ್ರಾವ್ಹಿಡೆಂಟ ಕಂಪನಿಯೆಂದರೆ, ಇದೊಂದೇ ಎಂದು ನಿರ್ವಿವಾದವಾಗಿ ಸಿದ್ಧವಾದ ಮಾತು. ವಿಮೆ ಇಳಿಸುವ ಜನರಿಗಾಗಿ ಈ ಕಂಪನಿಯು ಭದ್ರತೆಯ ಮಾದರಿಯನ್ನೊಂದು ಸ್ಥಾಪಿಸಿದೆಂದು ಹೇಳಬಹುದು.

-ಪುರುಷರೂ, ಮಕ್ಕಳೂ ವಿಮೆ ಇಳಿಸಬಹುದು.

ಮಿಯಮ್:- ರೂ. ೨, ೧, ೦-೮-೦.

ಯಿಂದ ಕಂಪನಿಯು ಕೆಲಸ ಮಾಡುವವ

Estab ished 1900.

ಓಂ

ದಾಸಪ್ಪಾ ಕೃಷ್ಣಪ್ಪಾ
ಧಾಕಪ್ಪನವರ ಬ್ರದರ್ಸ.

FIXED RATE.

ಇವರ ಒಂದೇ ದರದ ಜವಳಿ ಅಂಗಡಿ, ಶಿರ್ಶಿ.

ನಮ್ಮಲ್ಲಿ ಬೇರೆ ಬೇರೆ ಊರಿನ ಹೊಸ ಹೊಸ ನಮೂನೆವಾರ ಸೀರೆಗಳೂ, ತರತರದ ಪಕ್ಕಾ ರೇಶ್ಮೆಯ ಖಣಗಳೂ, ಕೋಟಿಂಗ ವ ಶರ್ಟಿಂಗ ಫ್ಯಾಶನೇಬಲ್ ಬಟ್ಟೆಗಳೂ, ಅಂದ ಚಂದ ಜರಿಯ ವಸ್ತ್ರಗಳೂ, ಜರೀ ರುಮಾಲು, ಉಪ್ಪರ್ಣೆ, ಟೊಪ್ಪಿಗಳೂ, ಧೋತರ ಜೋಡುಗಳೂ ಮುಂತಾದ ಎಲ್ಲಾ ತರದ ಜವಳಿಯೂ, ಕಬ್ಬಿಣದ ಮಜಭೂತ ಟ್ರಂಕುಗಳೂ, ಛತ್ರಿಗಳೂ ವಗೈರೆ ಎಲ್ಲಾ ತರದ ಮಾಲು ಅಬಾಲವೃದ್ಧರಿಗೂ ಮೋಸ ಹೋಗುವ ಏನೊಂದೂ ಭಯವಿಲ್ಲದೆ ಸೋಯಿ ದರದಿಂದ ಸಿಗುವದು. ರೋಖ ವ್ಯಾಪಾರಕ್ಕೆ ಕಮೀಶನ್ ದೊರೆಯುವದು.

Tel-"HONESTY." **D. K. DHAKAPPA BROS.**
Cloth Merchants,
SIRSI. N. Kanara

ಹೊಸ ಮಾಲು

ದರ ಅಗ್ಗ.

ಆರ್ಯಧನ್ವಂತರಿ ಔಷಧಾಲಯ, ಕುಮುಟಾ

ನಮ್ಮಲ್ಲಿ ಆಯುರ್ವೇದ ಪದ್ಧತಿಯಿಂದ ಶಾಸ್ತ್ರೋಕ್ತ ತಯಾರಿಸಿದ ಔಷಧಗಳು ಮಾರಾಟಕ್ಕೆ ಸಿದ್ಧವಿರುವವು ಬೇಕಾದವರು ತರಿಸಿಕೊಂಡು ಅನುಭವ ಪಡೆಯಬೇಕು.

ಚ್ಯವನಪ್ರಾಶಾವಲೇಹ	ರತ್ತಲ ೧ಕ್ಕೆ .	ರೂ ೨-೮-೦
ಅಶ್ವಗಂಧಿಮಿಶ್ರ ಕುಷ್ಮಾಂಡ ಪಾಕ-	ರತ್ತಲಕ್ಕೆ	ರೂ ೨-೮-೦
ಮಹಾ ನಾರಾಯಣ ತೈಲ	- ೬೦ ತೊಲೆ ಬಾಟ್ಲಿಕ್ಕೆ .	ರೂ ೬-೦-೦
ಹಿಮಸಾಗರ ತೈಲ	೬೦ ತೊಲೆಗೆ	ರೂ ೬-೦-೦
ಬೃಹತ್ ಭೃಂಗರಾಜ ತೈಲ--	೬೦ ತೊಲೆಗೆ	ರೂ ೩-೦-೦

ಆರ್ಡರಿನ ಜೊತೆಗೆ ಅರ್ಧ ಹಣ ಕಳಿಸಬೇಕು ರೋಗಿಗಳು ತಮ್ಮ ಪ್ರಕೃತಿಮಾನ ಸವಿಸ್ತರವಾಗಿ ಬರೆದು ತಿಳಿಸಿದಲ್ಲಿ ಯೋಗ್ಯ ಔಷಧಗಳು (ಅನುಪಾನ ಸಹಿತ) ಕಳುಹಿಸಿಕೊಡಲಾಗುವವು

ನಮ್ಮ ಪತ್ತೆ- **ಪಿ. ಅಚ್ಯುತ ಪಂಡಿತ,**
ಆರ್ಯಧನ್ವಂತರಿ ಔಷಧಾಲಯ, ಕುಮುಟಾ.

ಜಿಲ್ಲೆಯ ಸಮಾಚಾರ.

"[illegible]ಟು ಎಲ್ಲಿಟ್ಟಿದ್ದೀ? ತೋರಿಸು."

[illegible]ಪುರ ತಾಲೂಕಿನ ಹೇರೂರ ಸೀಮೆಯಲ್ಲಿ ಭಯಂಕರ ದರೋಡೆ!

೧೮ರ ಸೀಮೆಯ ಹರಡಿಬೈಲ ಗ್ರಾಮದಲ್ಲಿ ತಾ ೨೩ [illegible] ಯಂಕಾಲ ಹಾಸು ರಾತ್ರಿಗೆ ಭಯಂಕರ ದರೋಡೆ [illegible] ರಾ। ಗಣಪಯ್ಯ ಹೆಗಡೆಯವರು ಮನೆ ಹಂಗಸ [illegible] ಳ್ಳೆಳಾಗಿನ ಅಂಗ [illegible] ಅಲ್ಲಿದ್ದ [illegible] ಕಾಮಗಳನ್ನು ಮಾಡುತ್ತ [illegible] ಲಿಯುತ್ತಿದ್ದರು [illegible] ಯ್ಯ ಹೆಗಡೆಯೊಬ್ಬರೇ ಮನೆಯ ಗಂಡಸರು [illegible] ದರೋಡೆಯ [illegible] ಬಂದರು, ಎಲ್ಲ [illegible] ಕೊಂಡಿದ್ದರು [illegible] ಕೈಗೆ ಹಿಡಿದ [illegible] ಮೇಲಿನ ಅಂಗ [illegible] ಕಾಲು ಕಟ್ಟಿದ್ದು ಮನೆಯ ಮಾನರಾದ ರಾ। ಗಣಪಯ್ಯ ಹೆಗಡೆರ ಕುತ್ತಿಗೆ ಹಿಡಿ [illegible] ರಿದರು [illegible] ಸರಕಾರ [illegible] ಎಲ್ಲಿ ಹೋದ ನಿನ್ನ ಗಾಂಧಿ [illegible] ಗಂಟು ಎಲ್ಲಿಟ್ಟಿದ್ದೀ ತೋರಿಸು" ಹೀಗೆ ಅಂದು ಮನೆ ಒಳನುಗ್ಗಿದರು ಮನೆ [illegible] ಬಂದು ರಾ। [illegible]ಯ್ಯ ತಿಮ್ಮಪ್ಪ ಹೆಗಡೆಯರು, [illegible] ರಾ। ಗಣಪಯ್ಯ [illegible] ಹೆಗಡೆರು. ಹೀಗೆ ಕಳ್ಳರ ಒಳನುಗ್ಗಿ ಲೂಟಿ ಮಾಡುತ್ತಿರುವಾಗ ಸುಬ್ಬಯ್ಯ ಹೆಗಡೆ [illegible] ರು ಬಂದು ತಲ್ಪಿದರು [illegible] ಅಜ್ಜ ಬಂದ ಅಜ್ಜ ಬಂದ" ಎಂದು ಕಳ್ಳರು ಬೊಬ್ಬಿರಿದು ಮುದುಕರಿಗೆ ಮುತ್ತಿದರು ಮುದುಕರು ಹೇರೂರಿನಿಂದ ಆಗಲೇ ಬಂದು ತಲ್ಪಿದರು ಅವರ ಕೈಯಲ್ಲಿ ಸೂಡಿಯಿತ್ತು, ಬೆಳಕಿಗಾಗಿ ಅವರು [illegible] ರಿದ್ದರು ಆದರಿಂದ ಕಳ್ಳನ ಮೋರೆಯ ಮೇಲೆ ಅವರು ತೂಡೆದರು ಕೈಯಲ್ಲಿಬಂದು ದಂಟು ಗೋಲಿತ್ತು, ಆದರಿಂದ ಹೊಡೆಯಬೇಕನ್ನುವಷ್ಟರಲ್ಲಿ ಕಳ್ಳರು ಸೂಡಿ ಕಸಕೊಂಡ [illegible] ದೊಣ್ಣೆ ಕಸಕೊಂಡರ, ಕಣ್ಣು ಕಟ್ಟಿದರು, ಕೈ ಕಟ್ಟಿದರು "ಗಂಟು ಎಲ್ಲಿಟ್ಟಿದ್ದೀ' ತೋರಿಸು" ಎಂದು [illegible] ಹಿಡಿ ನೂಕಿದ [illegible] ಮನೆ ಒಳಗೆ [illegible] ನಡುವೆ [illegible] ಎಂಬುದಾಗಿ ರಾ। ಸುಬ್ಬಯ್ಯ ಹೆಗಡೆ [illegible] ಆ ಬುದ್ಧಿ [illegible] ವ್ಯವಸ್ಥೆಯಾಗಿದೆ ಮತ್ತೆಲ್ಲಿದೆ ಹೇಳ" ಎಂದರ ಇದ್ದಷ್ಟೇ ಇಲ್ಲಿ, ಮತ್ತೆ [illegible] ಇಲ್ಲ" ವೆಂದು ರಾ। ಹೆಗಡೆರು [illegible] ಮಾಡಿದರು ಕಳ್ಳರೊ [illegible] ಕರೆದು [illegible] ಅದ ಎಂತ ನೀವು ಹೇಳಿದಿರಿ [illegible] ಮಾಡಿಸಿ," ಹೀಗೆಂದು ಮತ್ತೆ ತೋರಿಸ [illegible] ಎಂದು [illegible] ಅಷ್ಟರಲ್ಲಿ ಬಂದು [illegible] ಕಳ್ಳರು ಅಂಗಳದಲ್ಲಿ [illegible] ಬಂದ [illegible] ಕಳ್ಳರು [illegible] ಹೇಳಿ [illegible] ನನ್ನ [illegible] ಇದೆ [illegible] ಉಂಟು ಕಳ್ಳ [illegible] ಅದೆ [illegible]" ಹೀಗೆಲ್ಲ ಮಾತ [illegible] ಎಲ್ಲೂ [illegible] ಹುಡಿ ಹಿಡಿದು [illegible] ಗಣಪಯ್ಯ ಹೆಗಡೆರೂ ಸುಬ್ಬಯ್ಯ ಹೆಗಡೆರೂ ಮೊಟ್ಟ ಮೊದಲ [illegible] ಜನರನ್ನು [illegible] ತುಕ್ಕ ಕಾಲು ಬಿಡಿಸಿಕೊಂಡರು ಇಡೀ ರಾತ್ರಿ ನಿದ್ದೆಯೇ ಇಲ್ಲ [illegible] ಬೆಳಗಾಯಿತು. ಎಲ್ಲರಿಗೂ ಪೆಟ್ಟು ಬಿದ್ದಿದ್ದ. ರಾ। ಗಣಪಯ್ಯ ಹೆಗಡೆಯವರಿಗೆ ಸ್ವಲ್ಪ ಹೆಚ್ಚು ಪೆಟ್ಟು. ಅವರ ೬೦ ವರ್ಷದ ಮಗನಿಗೆ ವಿಪರೀತ ಪೆಟ್ಟು. [illegible] ರಕ್ತ [illegible] ಮುಂಜಾವು [illegible] ಹೊತ್ತು [illegible]; [illegible] ಲಕೋಣೆಯ ರಾ। ತಿಮ್ಮಯ್ಯ [illegible] ಹೆಗಡೆಯವರು [illegible] ಹೋಗಿದ್ದರು [illegible] ಬಾಗಿಲಿನಿಂದ [illegible] ಕಳ್ಳರು ಹಿಂಬದಿಯಿಂದ ಬಂದರು, [illegible] ಹಾಕಿ ಗುದ್ದಿದರು ಕೈಕಾಲು ಕಟ್ಟಿದರು [illegible] ಊರಿಗೆ ನೀನೇ ದೊಡ್ಡ [illegible]" ಎಂದು [illegible] ಎತ್ತರದ ದರೆಯ ಮೇಲಿಂದ [illegible] ದಲ್ಲಿ ಬಗೆದರು [illegible] ವಂಟಿ [illegible] ಹೋಗಾರದ [illegible] ರಾ। ತಿಮ್ಮಪ್ಪ ಹೆಗಡೆ [illegible] ವರ್ಷ [illegible] ಎಡೆ [illegible] ಮನೆಗೆ [illegible] ಅವರು [illegible] ಕೈಕಾಲು [illegible] ದಾರ [illegible] ಕಳ್ಳಿಗೆ ಬಂದಿದ್ದ [illegible] ಹೇಳಿದರು. ಮನೆಗಳಿಗೆ [illegible] ಹೇಳಿದರು.

ಈ ಸೀಮೆಯ [illegible] ರಾತ್ರಿ [illegible] ಆರೋಪಿಯಾಗಿದ್ದಂತೆ ಅವರು ದರೋಡೆಯಾಗಿ [illegible] ಹೋಗಿ [illegible] ವಾರ್ತೆಯಲ್ಲ [illegible] ನೀರು [illegible] ದು ಹೋದ ವಾರ್ತೆಯಿದೆ

ಮನೋಹರವಾದ ಕೂದಲನ್ನು ಚನ್ನಾಗಿ ಸಾಕಬೇಕು.

ಆದರೆ, ಕೆಲವು ಸ್ತ್ರೀಯರು ಯಾವಾಗಲೂ ತಮ್ಮ ಕೂದಲುಗಳ ದುರ್ಲಕ್ಷ ಮಾಡುತ್ತಾರೆ, ಕೂದಲು ಮನೋಹರವಾಗಿರಬೇಕೆಂದರೆ, ನಿವು ದಿನಾ ಅ [illegible] ಲಕ್ಷಕೊಡಬೇಕು. ಕೂದಲುಗಳನ್ನು ಅಲಕ್ಷ ಮಾಡಿದರೆ, ಅವು [illegible] ಉದುರುವವು. ನೀವು ಅವಕ್ಕೆ ಚಲೋ 'ಕೂದಲೆಣ್ಣೆ' ಕೊಡಬೇಕು. ಶ್ರೇಷ್ಠವಾದ ಕೂದಲೆಣ್ಣೆ ಯಾವದು?

ಕಾಮಿನಿಯಾ ಆಯಿಲ್. (ರಜಿಸ್ಟರ್ಡ

ದಿನಾ ಮುಂಜಾನೆ ಅಥವಾ ಸಂಜೆ ಎಣ್ಣೆಯನ್ನು ಚನ್ನಾಗಿ [illegible] ತಿಕ್ಕಿದ ಕೂಡಲೆ ತಲೆಯ ಹೊಟ್ಟು ಹೋಗುತ್ತದೆ, ಕೇಶರಂಧ್ರಗಳು ತರೆದು ಎಣ್ಣೆಯಿಂದ ತಲೆಗೆ ತಂಪು ದೊರಕಿ ಕೂದಲುಗಳ ಬೇರುಗಳಿಗೆ [illegible] ಹೀಗೆ ಒಕ್ಕಿದ ಚೈತನ್ಯವು ಕೂದಲುಗಳಿಗೆ ಮುಟ್ಟಿ ನಿಮ್ಮ ಕೂದಲು [illegible] ಬೆಳೆಯುತ್ತವೆ.

ಎಲ್ಲಾ ಚಲೋ ಅಂಗಡಿಕಾರರಲ್ಲಿ

ಈ ತೈಲವು ದೊರೆಯುತ್ತದೆ.

ಅಥವಾ

ನಮಗೇ ಬರೆದು ತರಿಸಿಕೊಳ್ಳಿರಿ.

ಬಾಟ್ಲಿ ೧ಕ್ಕೆ	ರೂ	೧—೦—೦
ಅಂಚೆವೆಚ್ಚ	,,	೦—೬—೦
೩ ಬಾಟಲಿಗಳಿಗೆ	,,	೨—೧೦—೦
ಅಂಚೆವೆಚ್ಚ	,,	೦—೧೩—೦

ನಿಮ್ಮ ಅಂಗಡಿಕಾರರಿಂದ

ತರಿಸಿಕೊಳ್ಳಿರಿ

೧ ಟಿನ್ಸಿಗೆ	ರೂ	೨—೦—೦
೨ ಟಿನ್ಸಿಗೆ	"	೧ ೪ ೦
ಡ್ರಾಮಿಗೆ	,,	೦—೧೨—೦
ಅಂಚೆವೆಚ್ಚ	,,	೦—೬—೦

ಒಟ್ಟೋ-ದಿಲ್ ಬಹಾರ

ಹೇಳಲಿಕ್ಕೆ ಮರೆಯಬೇಡಿರಿ!

"ಹೂದೋಟವೆಲ್ಲ ಒಂದೇ ಬಾಟ್ಲಿಯಲ್ಲಿ!"

[illegible] ಸುಗಂಧದ್ರವ್ಯದಲ್ಲಿ ಇವನ್ನು [illegible] ಎಲ್ಲಾ ಹೂವುಗಳ [illegible] ಒಂದೇ ಸುಗಂಧದ್ರವ್ಯದಿಂದ [illegible] ಬಹುದು.

ಒಟ್ಟೋ-ದಿಲ್ ಬಹಾರ್! (ರಜಿಸ್ಟರ್ಡ

ಪೇಟೆಯಲ್ಲಿ ಅನೇಕ ಸಾವಿರಾರು ಸುಗಂಧ ದ್ರವ್ಯಗಳು ಸಿಗುತ್ತವೆ [illegible] ಅವುಗಳಲ್ಲಿ ಹೂವಿನ ಸಹಜ ಪರಿಮಳ [illegible] ಅವುಗಳಲ್ಲಿ ಆಲ್ಕೋಹೋಲ ಯಾನೆ ಮದ್ಯವು ಸೇರಿರುತ್ತದೆ ಇದರಿಂದ ಹೂವಿನ ಸಹಜ ಪರಿಮಳವು [illegible] ಒಟ್ಟೋ-ದಿಲ್ ಬಹಾರದಿಂದ ಶಾಶ್ವತವಾದ ಹೂವಿನ ಸುಗಂಧವನ್ನು ಅನುಭವಿಸಬಹುದು. ಇದಕ್ಕೆ ಮದ್ಯದ [illegible]

THE ANGLO INDIAN DRUG & CHEMICAL CO.

POST [illegible]

ಪ್ರಾಸಂಗಿಕ ವಿಷಯ.

ಖಾನೇಸುಮಾರಿಯ ಹೇತು.

ಪುರಾತನ ಕಾಲದಲ್ಲಿ ಖಾನೇಸುಮಾರಿಯಾಗುತ್ತಿತ್ತು. ಎಷ್ಟರ ಲೆಖ್ಖ ವಾಗುತ್ತಿದ್ದಿಲ್ಲ. ಕರ ಬಾಬೆಗಳ ಲೆಖ್ಖ ಮಾತ್ರ ಆಗುತ್ತಿತ್ತು. ಅರಸರಿಗೆ ಸೈನ್ಯಬಲದ ಲೆಖ್ಖ ತಿಳಿಯಬೇಕೆಂಬದೇ ಹೇತು. ಸುಧಾರಣೆಯಾದ ಈಗಿನ ಖಾನೇಸುಮಾರಿಯ ಹೇತುವಿನ ವ್ಯಾಪ ಬೆಳೆಯಿತು. ಖಾನೇಸುಮಾರಿಯಲ್ಲಿ ಜನರ ಆಯುಃಪ್ರಮಾಣ ಗೊತ್ತಾಗುತ್ತದೆ. ಸಾಯುವ ರೋಗಗಳ ಉಲ್ಲೇಖವಾಗುತ್ತದೆ. ಇವುಗಳ ಲೆಖ್ಖದಿಂದ ರಾಜ್ಯಕರ್ತರು ಔಷಧೋಪಚಾರ, ಆರೋಗ್ಯಪಾಲನದ ಹೊಸ ಉಪಕ್ರಮ ಕೈಕೊಳ್ಳಬೇಕೆಂಬ ಉದ್ದೇಶ; ಶಿಕ್ಷಿತರೆಷ್ಟು, ಅಶಿಕ್ಷಿತರೆಷ್ಟು? ಎಂಬ ಲೆಖ್ಖದ ಮೇಲಿಂದ ಶಿಕ್ಷಣದ ವ್ಯಾಪ ಬೆಳೆಸಬೇಕೆಂದು ಹೇತು, ಉದ್ದಿಮೆಯವರೆಷ್ಟು, ಯಾವ ಯಾವ ಉದ್ದಿಮೆಯವರು ಎಂಬ ಲೆಖ್ಖದ ಮೇಲಿಂದ ದೇಶದಲ್ಲಿ ನಡೆಯುವ ಕೈಗಾರಿಕೆಗಳ್ಯಾವವು? ಹೊಸ ಕೈಗಾರಿಕೆಗಳನ್ನು ಯಾವ ಯಾವ ಜನಗಳಲ್ಲಿ ಹಬ್ಬಿಸಬಹುದು? ಎಂಬದನ್ನೂ ರಾಜ್ಯಕರ್ತರು ಆಲೋಚಿಸಬೇಕೆಂಬ ಹೇತು, ಖಾನೇಸುಮಾರಿಯ ಹೇತುಗಳು ಇವು. ಇವು ಹಿಂದಿನ ಖಾನೇಸುಮಾರಿಗಳಿಂದ ಎಷ್ಟರ ಮಟ್ಟಿಗೆ ಸಾಧ್ಯವಾಗಿವೆ ಎಂಬದನ್ನು ರಾಜ್ಯಕರ್ತರೂ, ಪ್ರಜೆಗಳೂ ವಿಚಾರಿಸತಕ್ಕ ವಿಷಯ.

⁂

ಸರಕಾರಿ ಖರ್ಚು ಕಡಿಮೆ ಮಾಡುವ ಬಗೆ.

ಹಿಂದುಸ್ಥಾನ ಸರಕಾರದ ರಾಜ್ಯ ಖರ್ಚು ಬಾಯಿಗೂಡದಾಗಿದೆ. ಖರ್ಚಿನಷ್ಟು ಜಮೆಯಿಲ್ಲದೆ ಸರಕಾರಕ್ಕೆ ತೊಂದರೆ. ಸರಕಾರಿ ನೌಕರಿಗಾಗಿ ಉತ್ಪನ್ನದ ಮುಕ್ಕಾಲು ಪಾಲು ಪಗಾರ ಕೊಡಬೇಕಾಗುತ್ತದೆ. ೩ ಕೋಟಿ ೨೮ ಲಕ್ಷ ಪವನು ಇಂಗ್ಲಿಷ ನೌಕರರಿಗೆ ಪಗಾರ ಸಿಗುತ್ತದಾಗಿ ಬ್ರಿಟಿಶ ಪಾರ್ಲಿಮೆಂಟಿನ ಸಭಾಸದರಾದ ಫೆನರ ಬ್ರೋಕ್ವೇಯವರು ತಮ್ಮ ಪುಸ್ತಕದಲ್ಲಿ ಬರೆದಿದ್ದಾರೆ. ವರ್ಷಕ್ಕೆ ೨೪೦೫೦ ರೂಪಾಯಿ ಪಗಾರ ಪಡೆಯುವವರು ೩೫೦ ಮಂದಿಗಳು. ೩೦೧೫೦ ರಿಂದ ೬೧೭೫೦ರ ವರೆಗೆ ಪಗಾರ ಪಡೆಯುವವರು ಪ್ರತಿ ಪ್ರಾಂತದಲ್ಲಿ ೧೧ರಿಂದ ೩೫ ಮಂದಿಗಳು. ಹಿಂದುಸ್ಥಾನದಲ್ಲಿ ೧೦ ಪ್ರಾಂತಗಳಿವೆ. ಇವರಿಗೆ ಇದಲ್ಲದೆ ತರತರದ ಭತ್ತೆಗಳು ಸಿಗುತ್ತವೆ. ಗವ್ಹರ್ನರರಿಗೆ ಅವರ ಖರ್ಚಿಗಾಗಿ ವರ್ಷಾವಧಿನ ರೂ. ೧೫೬೦೦ ರಿಂದ ರೂ. ೭೩೫೦೦ರ ವರೆಗೆ ಸಿಗುತ್ತವೆ. ಅಲ್ಲದೆ, ಪಗಾರ ಬೇರೆ! ಗವ್ಹರ್ನರ ಜನರಲ್‌ರಿಗೆ ರಜಾ ದಿನಗಳಲ್ಲಿ ೫೮೫೦ ರೂಪಾಯಿ ಸಿಗುತ್ತವೆ, ಗವ್ಹರ್ನರರಿಗೆ ರೂ. ೩೯೦೦ ಕಾರ್ಯಕಾರಿ ಮಂಡಳದವರಿಗೆ ರೂ. ೧೭೭೮ ರಿಂದ ರೂ. ೨೩೫೦, ಈ ಲೆಖ್ಖ ವೆಚ್ಚ ರಜಾ ದಿನಗಳದು. ಹಿಂದುಸ್ಥಾನದ ಕೋಶದೊಳಗಿಂದ ಸೈನ್ಯ ಖಾತೆಗೆ [illegible] ಕೋಟಿ, ೩೭ ಲಕ್ಷ, ೩೧ ಸಾವಿರ ಪವನು ಖರ್ಚಾಗುತ್ತವೆ. ಗೌರ ಸೈನಿಕನ ಪಗಾರು ಹಿಂದೀ ಶಿಪಾಯಿ [illegible]. ಗೌರ ಸೈನ್ಯಾಧಿಕಾರಿಯ ಪಗಾರು ೬ ಅಧಿಕಾರಿಗಳಷ್ಟು! ಒಬ್ಬ ಹಿಂದೀ ಅಧಿಕಾರಿ [illegible] ಶಿಪಾಯಿಗಳಷ್ಟು! ಹೀಗೆ [illegible] ವರ್ಷಕ್ಕಾಗಿ ಸರಕಾರವು ಹಲಕೆಲವು ಮೇ[illegible]—ಕಾರಕೂನರ ಸಂಬಳವನ್ನು ಕಡಿಮೆ ಮಾಡುವದರಿಂದ ಪ್ರಯೋಜನವಿಲ್ಲ. ರುಮಾನಿಯಾ ಸರಕಾರದಲ್ಲೂ ಉತ್ಪನ್ನ ಕಡಿಮೆ, ಖರ್ಚು ಹೆಚ್ಚಾಗಿದೆ. ಅಲ್ಲಿಯ ಸರಕಾರವು ಕೈಕೊಂಡ ಉಪಾಯ ನಮ್ಮ ಹಿಂದುಸ್ಥಾನ ಸರಕಾರಕ್ಕೆ ಬೋಧಪ್ರದವಿದೆ. ಕಳೆದ ಡಿಶಂಬರ ತಿಂಗಳಲ್ಲಿ ಪಾರ್ಲಿಮೆಂಟಿನ ಸಭೆ ನಡೆಯಿತು. ಆಗ ಅಲ್ಲಿಯ ಸರಕಾರವು ಹೆಚ್ಚು ದೊಡ್ಡ ಅಧಿಕಾರಿಗಳ ಸಂಬಳವನ್ನು ಪಂಚಮಾಂಶದಿಂದ ಇಳಿಸಿ, ಜನತಾ-ಜೀವನ ಬಾಯಿಗೂಡಿಸುವ ಉಪಾಯ ಮಾಡಿದೆ. ಅರಸರಾದ ಕರೋಲರವರಿಗೆ ಸಿಗುವ ರಾಜಮಂದಿರದ ಖರ್ಚು ಇದೇ ಪ್ರಮಾಣದಿಂದ ತಗ್ಗಿಸಲ್ಪಡುವದು.

⁂

ಬದಮಾಶ್‌ರ್ಯಾರು?

ಪಂಜಾಬ ಪ್ರಾಂತದ ಕಾಂಗ್ರಾ ಪಟ್ಟಣದಲ್ಲಿ ಪೋಲೀಸರು ೧ನೇ ರಿಜಿಸ್ಟರನ್ನಿಟ್ಟಿದ್ದಾರೆ. ಇದರೊಳಗೆ ಬದಮಾಶ್ ಯಾನೆ ಅಧಮರ, ಕಳ್ಳ-ಸುಳ್ಳರ, ಕೊಲೆಕೋರರ ಹೆಸರುಗಳು ನಮೂದಿಸಲ್ಪಡಬೇಕು. ಲಾಹೋರದ 'ವಂದೇ ಮಾತರಮ್' ಪತ್ರಿಕೆಯ ಶ್ರೀ|| ರಾಮಚಂದ್ರರವರೂ ಅವರ ತಮ್ಮ ಗಣೇಶಚಂದರರವರೂ ಈ ರಿಜಿಸ್ಟರಿನಲ್ಲಿ ದಾಖಲ ಮಾಡಲ್ಪಟ್ಟಿದ್ದಾರೆ. ಡಿಶಂಬರ ೫ನೇ ತಾರೀಖಿಗೆ ಶ್ರೀ|| ಗಣೇಶಚಂದರರವರಿಗೆ ಪೋಲೀಸರ ನೋಟೀಸು. ಇನ್ಸ್ಪೆಕ್ಟರ ಜನರಲ್‌ರು ಬರುತ್ತಾರೆ, ಕಾರಣ ರಾಮಚಂದ್ರರೊಡನೆ ಹಾಜರಾಗತಕ್ಕದ್ದು. ರಾಮಚಂದ್ರರವರು ಕಾಂಗ್ರೆಸ ಪಕ್ಷದಲ್ಲಿರಲಿಲ್ಲ. ಅವರು ಲಾಹೋರಿನಲ್ಲಿಯೇ ಕುಳಿತುಕೊಳ್ಳುತ್ತಾರೆ. ಗಣೇಶಚಂದರರವರು ಹಾಜರಾದರು. "ಬದಮಾಶ್ ರಾಮಚಂದ್ರ ಸಹಿ ಆಯಿತು" ಎಂಬದಾಗಿ ಫೌಜದಾರರು ಕೇಳಿ, ಗಣೇಶಚಂದರವರಿಗೆ ಅವರು ಮಾಡಿದ ಅಪರಾಧಗಳನ್ನು ಒಂದೊಂದಾಗಿ ವಿವರಿಸಿದರು (೧) ತಮ್ಮ ಇಜನ್ ಗ್ರಾಮದಲ್ಲಿ ಸ್ವಾತಂತ್ರ್ಯ ದಿನ ಜನವರಿ ೨೬ನೇ ತಾರೀಖಿಗೆ ರಾಷ್ಟ್ರಧ್ವಜವನ್ನೇರಿಸಿದರು, (೨) ಭಾಷಣ ಮಾಡಿ ರಾಷ್ಟ್ರೀಯ ಸಭೆಯ ಪ್ರಚಾರ ಮಾಡಿದರು, (೩) ರಾಷ್ಟ್ರೀಯ ಸಭೆಯು ವಿಧಿಸಿದ ಖಾದಿ ಉಡಿಗೆ-ತೊಡಿಗೆಗಳನ್ನು ಧರಿಸಿದರು, (೪) ರಾಮಚಂದ್ರನ ತಮ್ಮಂದಿರಾಗಿ ಹುಟ್ಟಿದರು. ಹೀಗೆ ೪ ಅಪರಾಧಗಳನ್ನು ಮಾಡಿದ ಗಣೇಶಚಂದರರಿಗೆ ಬದಮಾಶ್ ರಿಜಿಸ್ಟರದಲ್ಲಿ ದಾಖಲ ಮಾಡಿದ್ದು ಯೋಗ್ಯವಾಯಿತೆಂದು ಅಭಿಪ್ರಾಯಪಟ್ಟು, ಆ ದಾಖಲೆಯನ್ನು ಸ್ಥಿರಪಡಿಸಿದರು. ಇನ್ನುಮುಂದೆ ರಾಷ್ಟ್ರೀಯ ಸಭೆಯ ಪ್ರಚಾರ ಮಾಡಬಾರದಾಗಿಯೂ ವಿಧಿಸಿದರು. ರಾಮಚಂದ್ರನು ಇದೇ ಪ್ರಕಾರ ವರ್ತಿಸುತ್ತಿದ್ದಾನೆಂದು ಇನ್ಸ್ಪೆಕ್ಟರ ಜನರಲ್‌ರು ಅಭಿಪ್ರಾಯಪಟ್ಟು, ಆತನ ಹೆಸರೂ ಬದಮಾಶ್ ರಿಜಿಸ್ಟರದಲ್ಲಿ ದಾಖಲಾಗಲರ್ಹವಾಗಿದೆಂದು ಅಭಿಪ್ರಾಯ ಕೊಟ್ಟರು.

⁂

ಸತ್ಯ ಸುದ್ದಿಗಳಿಗೆ ಪ್ರತಿಬಂಧ.

ಲಂಡನಿನ 'ಮೋರ್ನಿಂಗ ಪೋಸ್ಟ' ಪತ್ರಿಕೆಯು ಸರಕಾರಿ ಪಕ್ಷದ್ದೆಂದು ಹೇಳಬಹುದು, ರಾಷ್ಟ್ರೀಯ ಸಭೆಯ ಪಕ್ಷಪಾತಿ ಅಲ್ಲೇ ಅಲ್ಲ! ಈ ಪತ್ರಿಕೆಯು ದಿಲ್ಲಿ, ಮುಂಬಯಿ ಪಟ್ಟಣಗಳಲ್ಲಿ ಮಾಧವರಾಯರನ್ನು ಸುದ್ದಿಗಾರರನ್ನಾಗಿ ನೇಮಿಸಿಕೊಂಡಿದೆ. ಶ್ರೀ|| ಮಾಧವರಾಯರು ಸ್ವತಂತ್ರ ವೃತ್ತಿಯ ಮತ್ತು ಪತ್ರಿಕೋದ್ಯೋಗದಲ್ಲಿ ದುಡಿಯುವವರು. ಹಿಂದುಸ್ಥಾನ ಸರಕಾರದ ಪ್ರಭಾಷಕರಾದ ಮಿ|| ಕೋಟಮನರು [illegible] ಸಂಬಂಧಕ್ಕೆ ಲಂಡನಿನಿಂದ ಮಾಡಿದ ಒಂದು ತಂತೀವಾರ್ತೆಯನ್ನು ಶ್ರೀ|| ಮಾಧವರಾಯರು 'ಮೋರ್ನಿಂಗ ಪೋಸ್ಟ'ಗೆ ತಿಳಿಸಿದರು: 'ರೌಂಡ ಟೇಬಲ್ ಪರಿಷತ್ತಿನಲ್ಲಿ ಹಿಂದೂ-ಮುಸಲ್ಮಾನರೊಳಗೆ ಐಕ್ಯವಾಗುವ ಲಕ್ಷಣವಿಲ್ಲ. ಬ್ಯಾರಿಸ್ಟರ ಜಿನ್ನಾರವರು [illegible] ಹಟ ಹಿಡಿದಿದ್ದಾರೆ,' ಹೀಗೆ ಹೇಗಿದ ತಂತಿ! "ಈ ವಾರ್ತೆ ನಿಮಗೆಲ್ಲಿ ಸಿಕ್ಕಿತು?" ಎಂಬದಾಗಿ ಶ್ರೀ|| ಮಾಧವರಾಯರಿಗೆ ಹಿಂದುಸ್ಥಾನ ಸರಕಾರದ ಸೆಕ್ರೆಟರಿಗಳಾದ ಮಿ|| ಬೆನೆಟ್‌ರವರು ಪ್ರಶ್ನಿಸಿದರು. ಸ್ಪಷ್ಟ ಉತ್ತರ ಹೇಳಲು ಮಾಧವರಾಯರು ಒಪ್ಪಲಿಲ್ಲ. "ಇಂಥ ವಾರ್ತೆಗಳಿಂದ ಇಡೀ ಕಾರ್ಯವನ್ನ ಬುಡ-ಮೇಲಾಗುತ್ತದೆ, ನೀವು ಕಾಂಗ್ರೆಸ್ಸಿನ ಕಡೆಯವರಾಗಿ ಹಿಂದುಸ್ಥಾನ ಸರಕಾರಕ್ಕೆ ಅನುಕೂಲರಾಗಿ ವರ್ತಿಸದಿದ್ದರೆ, ನಿಮಗೆ ಪತ್ರಿಕಾ ಪ್ರತಿನಿಧಿಗಳೆಂಬವರಿಂದ ಇರುವ ಹಕ್ಕುಗಳು ಸೆಳಕೊಳ್ಳಲ್ಪಡುವವು," ಎಂಬದಾಗಿ ಬೆನೆಟ್‌ರವರು ಗದ್ದರಿಸಿದರು. ಶ್ರೀ|| ಮಾಧವರಾಯರು ಕಡೆಯಲ್ಲಿ 'ನಾನು ನನ್ನ ಪತ್ರಿಕೆಯ ಸೇವಕ, ಅದಕ್ಕೆ ಬೇಕಾದ ವಾರ್ತೆಯನ್ನು ಬೇಕಾದ ಕಡೆಯಿಂದ ಸಂಗ್ರಹಿಸಿ ಕಳಿಸುವ ಕೆಲಸ ನನ್ನದು, ನೀವು ಬೇಕಾದ್ದನ್ನು ಮಾಡಬಹುದು,' ಎಂದು ಶ್ರೀ|| ಮಾಧವರಾಯರು ನಿರ್ದಾಕ್ಷಿಣ್ಯದಿಂದ ನುಡಿದರು. ಈ ಸಂಗತಿಯನ್ನೆಲ್ಲ 'ಮೋರ್ನಿಂಗ ಪೋಸ್ಟ' ಪತ್ರಿಕೆಯು ಪ್ರಕಟಿಸಿ ಹಿಂದುಸ್ಥಾನ ಸರಕಾರದ ಕಣ್ಣು-ಮುಚ್ಚಾಳೆಯ ಆಟವನ್ನು ಬಲವಾಗಿ ನಿಷೇಧಿಸಿದೆ.

⁂

ಧನುರ್ಮಾಸದ ಊಟ, ಪೋಲೀಸರ ಲೂಟಿ!

ಮದ್ರಾಸ ಪ್ರಾಂತದ ಪೆದ್ದಾಪುರಮ್‌ದಲ್ಲಿ ಶ್ರೀ|| ನಾರಾಯಣ ಮೂರ್ತಿಯವರು ಪ್ರತಿ ವರ್ಷದಂತೆ ಧನುರ್ಮಾಸದ ವನಸಂತರ್ಪಣೆಯನ್ನು ತಮ್ಮ ಉಪವನದಲ್ಲಿ ಜರುಗಿಸಿದರು. ಪೆರಿಶ್ವರ ಸ್ವಾಮಿ, ಪೆದ್ದಾಪುರಮ್ ಮ್ಯುನಸಿಪಾಲಿಟಿಯ ಚೇರಮನ್‌ರಾದ ರಾ|| ದೊರೆಯಪ್ಪ, ಸಾವುಕಾರರಾದ ಶ್ರೀ|| ವೆಂಕಟನಾರಾಯಣಯ್ಯ, ವಿದ್ಯಾಸಂಪನ್ನರಾದ ಶ್ರೀ|| ಕೃಷ್ಣರಾವ್, 'ಕಾಂಗ್ರೆಸ್' ಪತ್ರಿಕೆಯ ಸಂಪಾದಕರಾದ ಶ್ರೀ|| ಲಿಂಗರಾಜು, ಡಾ|| ಪರಬ್ರಹ್ಮ ರಾಮರಾವ್ ಮೊದಲಾದ ಮಹನೀಯರನ್ನು ಸಮಾರಂಭಕ್ಕೆ ನಿಮಂತ್ರಿಸಿದ್ದರು. ಬಹುತರವಾಗಿ ರಾಷ್ಟ್ರೀಯ ಸಭೆಯ ಪಕ್ಷಪಾತಿಗಳೇ ಹೆಚ್ಚು. [illegible] ಸಂತರ್ಪಣೆಯಾಯಿತು. ಆ ವೇಳೆ ಫೋನೋಗ್ರಾಫಿನ ಸಂಗೀತವಾಯಿತು. ಬಳಿಕ ಇಸ್ಪೀಟ ಆಟ, ಪ್ರಚಲಿತ ವಿಷಯಗಳ ಮೇಲೆ ಸಂಭಾಷಣೆ, ಹೀಗೆ ನಡೆದು, ೩ ಘಂಟೆಗೆ ಮಹಾನುಭಾವರು ಚಹ ಕುಡಿಯುತ್ತಿದ್ದರು. ಚಹದ ಕಪ್ಪು ಬಾಯಿಗೆ ಮುಟ್ಟಿರುವದೋ ಇಲ್ಲವೋ! ಅಷ್ಟರಲ್ಲಿ ಪೆದ್ದಾಪುರಮ್‌ದ ಪೋಲೀಸ ಸುಪರಿಂಟೆಂಡೆಂಟರು ಧಕ್ಕನೆ ಬಂದು ಮುತ್ತಿಗೆ ಹಾಕಿ ಹುಮ್ಮಳೇ ಚದರಿ ಹೋಗಲು ಅವರಿಗೆ ಆಜ್ಞಾಪಿಸಿದರು. ಹೋಗುವ ಹಾದಿಯಲ್ಲಿ ಪೋಲೀಸರು ತಮ್ಮ ಮೋಟಾರಿಟ್ಟಿದ್ದರು. ಹೋಗಲು ಉಪಾಯವಿರಲಿಲ್ಲ. ಜನರು ಗಾಬರಿಯಿಂದ ಸಿಕ್ಕ ಕಡೆಯಿಂದ ಹಾರಿಹೋಗಲೆತ್ನಿಸಿದರು. ಕೆಲವರು

ಷ್ಟರಲ್ಲಿ ಪೋಲೀಸರು ದೊಣ್ಣೆಯಿಂದ ಹೊಡೆದರು; [illegible] ರೆರಡು ಹೇಳುತ್ತ ಹೊಡೆದರು. "ಹ್ಯಾಗೆ ಓಡುವ [illegible]" ಎಂದು ಒಬ್ಬರು ಪೋಲೀಸ ಅಧಿಕಾರಿಗಳ [illegible] ಕೇಳಲು, "ಬೇಕಾದರೆ ರೆಕ್ಕೆಗಳಿಂದ ಹಾರಿಹೋ[illegible], ನನಗೆ ಕೇಳಬೇಡಿರಿ" ಎಂಬದಾಗಿ ಅವರು ನುಡಿ [illegible] ಹೊಡೆದರು. ಅಡಿಗೆಭಟ್ಟರಿಗೂ ಹೊಡೆದರು, [illegible] ಹನೀಯರ ಮೋಟಾರುಗಳ ಟಾಯರು ಹರಿದರು, [illegible] ಜನು ಒಡೆದು ಹಾಕಿದರು. ಡಾ| ಗೋಪಾಳಕೃಷ್ಣನವರು ಈ ಸಂಗತಿ ತಿಳಿದು ಉಪಚಾರ ಮಾಡುವದಕ್ಕಾಗಿ ಓಡಿದರು. ಅವರು ಔಷಧಸಾಮಗ್ರಿಗಳ ಸಹಿತ ಹೋಗಿದ್ದರು. ಒಬ್ಬ ಪೇದೆಯು ಒಳಹೋಗ ಅಪ್ಪಣೆಕೊಟ್ಟನು. ಒಳಸೇರುವಷ್ಟರಲ್ಲಿ ಪೋಲೀಸರು ಇವರಿಗೂ ಹೊಡೆದರು, ಅಪ್ಪಣೆ ಪಡೆದು ಔಷದೋಪಚಾರ ಮಾಡುವದಕ್ಕಾಗಿ ಬಂದಿದ್ದೇನೆಂದಾಗಿ ಹೇಳಿದಾಗ್ಯೂ ಹೊಡೆದರು. ಮುಷ್ಟಿನ ಬಾಟ್ಲಿಗಳನ್ನು ಒಡೆದು ಹಾಕಿದರು. ಬಹಳ ಕುಡಿದರು, ತಂದಿತ್ತಿನ ಪದಾರ್ಥಗಳನ್ನು ತಿಂದರು, ಖಾದಿ ಅರಿವೆಗಳನ್ನು ಸುಟ್ಟರು. ಈ ಪ್ರಕಾರ ಅವಸ್ಥೆ ಮಾಡಿ ಅಂತು ೬ ಘಂಟೆಗೆ ಪೋಲೀಸರು ಮರಳಿದರು. ಹಿಂದುಸ್ಥಾನದ ಈಗಿನ ಅವಸ್ಥೆಯಲ್ಲಿ ಔತಣ ಸಮಾರಂಭ ಮಾಡಿದ್ದು ಅಯೋಗ್ಯವೆಂದು ಪೋಲೀಸರ ಅಭಿಪ್ರಾಯವೇ?

⁂

ಆರ್ಯಸಮಾಜ ಮಂದಿರದ ಮೇಲೆ ದಾಳಿ!

ಲಾಹೋರಿನ 'ಟ್ರಿಬ್ಯೂನ' ಪತ್ರಿಕೆಯಲ್ಲಿ ಪ್ರಗಿಯಾ ಗ್ರಾಮದ ಆರ್ಯಸಮಾಜ ಮಂದಿರಕ್ಕೆ ೨೦೦ ಮಂದಿ ಸಶಸ್ತ್ರ ಗುರ್ಖಾ ಶಿಪಾಯಿಗಳೊಡನೆ ಯುರೋಪಿಯನ್ ಆಫೀಸರರು ಮುತ್ತಿಗೆ ಹಾಕಿದರು. ಇನ್ನೊಬ್ಬರು ೧೦-೧೨ ಮಂದಿಗಳೊಡನೆ ಸಮಾಜದ ಪ್ರಾಕಾರವನ್ನು ಮುತ್ತಿದರು. ಸಮಾಜದ ಮಂದಿರದೊಳಗೆ ಪಾಠಶಾಲೆಯಿದೆ. ಮುಖ್ಯಾಧ್ಯಾಪಕರು ಬಳಕೆ ಮಾಡಲು ನದಿಯ ಕಾಲುವೆಗೆ ಹೋಗಿದ್ದರು. ಪಾಠಶಾಲೆಯ ವಿದ್ಯಾರ್ಥಿಗಳನ್ನು ಕರಕೊಂಡು ಅಲ್ಲಿಗೆ ಹೋದರು. ಮುಖ್ಯಾಧ್ಯಾಪಕರು ಉಡಿಗೆ-ತೊಡಿಗೆ ತೆಗೆದಿಟ್ಟು ಸ್ನಾನಮಾಡಸಿದ್ಧರಾಗಿದ್ದರು. ಜೊತೆಗಿರುವ ಶಿಷ್ಯನಿಗೆ ನೋಡಿ, ಏನು ಕೆಲಸವಿದೆಂದು ಕೇಳಿದರು. ಮುಖ್ಯಾಧ್ಯಾಪಕರಿಗೆ ಗುರ್ಖಾ ಶಿಪಾಯಿಗರು ಹಿಡಿದು, ಹೊಡೆದು ಹಾಗೆಯೇ ಪೇಟೆಯ ಕಡೆಗೆ ಒಯ್ದರು; ವಸ್ತ್ರ ಸಹ ತೊಡ್ದುಕೊಳ್ಳಗೊಡಲಿಲ್ಲ. ಸಮಾಜದ ಮಂದಿರದ ಮೇಲೆ 'ಓಂ'ಕಾರ ಧ್ವಜವಿತ್ತು; ಧ್ವಜಸ್ತಂಭವನ್ನು ಗುರ್ಖರು ಮುರಿದರು. ಸಮಾಜದ ಕಾಗದ-ಪತ್ರಗಳನ್ನು ಸುಟ್ಟರು. ಹಾಗೆಯೇ ಅವರಿಗೆ ಒಡಕೊಂಡು ಕಾಸನ್‌ಪುರ ಗ್ರಾಮಕ್ಕೆ ತೆರಳಿದರು. ಅಲ್ಲಿ ಆರ್ಯಸಮಾಜದ ಅಧ್ಯಕ್ಷರಾದ ಶ್ರೀ| ಚೌಧ್ರಿ [illegible]ಸಿಂಗರವರಿಗೆ 'ಹಿಡಿದು ಕೈಕಟ್ಟಿ ತಂದರು. ಅವರ ವಸ್ತ್ರಗಳನ್ನೆಲ್ಲ ತೆಗೆದು, ಮೈಗೂ ಮೋರೆಗೂ ಮಣ್ಣು ಬಡಿದರು, ಕಾಲುವೆಗೆ ಒಯ್ದು, ಅಲ್ಲಿ ನೀರಿನಲ್ಲಿ ಮುಳುಗಿಸಿದರು. ಮೈಮೇಲೆ ಕೂಡ ನೀರೊಳಗೆ ಇಟ್ಟುವದು, ಮೇಲೆ ತರುವದು, ಹೀಗೆ ಶ್ವಾಸ ಕಟ್ಟುವ ವರೆಗೆ ಮಾಡಿದರು. ಮುಖ್ಯಾಧ್ಯಾಪಕರಿಗೂ ದಿಟ್ಟನಿಂದ ಹೊಡೆದು ಇದೇ ಪ್ರಕಾರ ಸಣ್ಣ ಬಡಿದು, ನೀರಿನಲ್ಲಿ ಮುಳುಗಿಸಿ ದಣಿಸಿದರು.

⁂

"ಇಂಗ್ರೇಜಿ ರಾಜ್ಯಕಿ ಜೈ!"

ಪಶ್ಚಿಮ ಪ್ರಾಂತದ ಬುಲ್ಢಾನಾ ಜಿಲ್ಲೆಯ ಮೇ[illegible]ಕ ತಾಲೂಕಿನಲ್ಲಿ ಲೂಟಿಯಾಯಿತು. ಬಡತನದ ಮೂಲಕ ಜನರು ನಿರಾಶರಾಗಿ ಲೂಟಿಮಾಡಿದರಂತೆ. ಜರಿಂದ ೧-೨ ಲಕ್ಷ ರೂಪಾಯಿಗಳ ಲೂಟಿ! ಸೌಜ, ಮಾರವಾಡಿ ಬ್ರಾಹ್ಮಣ ಸಾವಕಾರರ ಜಂದಿಗೆ, ಮೀಶೆ ಬೆಳೆ ಲೂಟಿ, ಹಗಲು ಲೂಟಿ! ಡಂಗುರ ಹೊಡೆದು ಲೂಟಿ!! ಹೊಲೆಯ, ಮಾದಿಗ, ರೋಹಿಲಾ, ಕುಣಬಿ ಜಾತಿಯ ಸುಮಾರು ೨೦೦ ಮಂದಿಗಳು ಮುಂದಗಾಂವ ಗ್ರಾಮದಲ್ಲಿ ಒಬ್ಬ ಸಾವಜಿ ಸಾವುಕಾರನ ಬೆಳೆಗೆ ಬೆಂಕಿ ಇಟ್ಟು, ಪೋಲೀಸರಿಗೆ ಕಂಡೊಡನೆ ಓಡಿದರು 'ಅಂಗ್ರೇಜಿ ರಾಜ್ ಕಿ ಜೈ!' ಎಂಬ ಜಯಘೋಷ ಮಾಡುತ್ತ ಮಾಳಿಗಾಪೂರ, ವಾಂಗರಾ, ಫಟ್ಕೇಡಾ, ಶಿವಿ, ಅಂಧೇರಾ, ಶೋಣಾಂದ, ಕಿಂಗಾಂವ ಈ ಗ್ರಾಮಗಳಲ್ಲಿ ೨ ದಿನಗಳ ತನಕ ೫೦ ಜನರ [illegible] ದೊಡ್ಡ ಲೂಟಿಮಾಡಿದರು [illegible] ನಡೆದ ಲೂಟಿ [illegible] ೫೦೦ ಮಂದಿ [illegible] ರತ್ನಾದಿಗಳನ್ನೂ, ಕಾಳು-ಕಡಿಗಳನ್ನೂ, ಪಾತ್ರೆಗಳನ್ನೂ ಒಯ್ದರು. ಪ್ರೊಮಿಸರಿ ನೋಟುಗಳನ್ನೂ, ಶ್ರೀ[illegible]ದ ಬುಕ್ಕುಗಳನ್ನೂ ಸುಟ್ಟರು [illegible] ಮದಲ್ಲಿಯೂ ಸಾವುಕಾರನ ಮನೆ ಇದೇ ರೀತಿ ಮಾಳಿಯಾಗಿ ಕಾಗದ ಪತ್ರಗಳು ಸುಟ್ಟು ಕೊಂಡವು [illegible] ಗೆ ಲೂಟಿಯಾಯಿತು. ಒಂದು ಬ್ರಾಹ್ಮಣ [illegible] ಲ್ಲಿ [illegible] ಪೋಲೀಸರು ಹೋಗಿ [illegible] ಶಾಂತತೆ ಮಾಡಿದ್ದಾರೆ. ೬೦ ಮಂದಿಗಳ [illegible] ದ್ದಾರೆ. ಆದಾಗ್ಯೂ, ಸಾವುಕಾರರಿಗೆ ಧೈರ್ಯ ಬರಲಿಲ್ಲ. ಅವರೆಲ್ಲರೂ ಬುಲ್ಢಾನಾ, ಜಲಗಾಂವ ಮೊದಲಾದ ಪಟ್ಟಣಗಳಿಗೆ ಹೋಗಿ ಬಾಳ್ವೆ ಮಾಡುತ್ತಿದ್ದಾರೆ. ಕಷ್ಟಕಾಲ ಬಂತು! ಬಡತನ ನೀಗಿಸಲು ಶೀಘ್ರವೇ ಪ್ರಯತ್ನ ಮಾಡಬೇಕು.

⁂

ಪೋರಬಂದರದಲ್ಲಿ ಸ್ತ್ರೀಯರ ಸಾಹಸ!

ಪೋರಬಂದರದಲ್ಲಿ ಸ್ತ್ರೀಯರ ಸಭೆ ನಡೆಯಿತು. ಪರದೆ ಪಾಲಿಸುವ ಜೇಠವಾ ಜಾತಿಯ ಹೆಂಗಸರು ಸಹ ಸೇರಿದ್ದರು. ಪರದೇಶಿ ಅರಿವೆಯನ್ನು ಬಹಿಷ್ಕರಿಸಬೇಕಾಗಿ ಬಂದ ಠರಾವು ಮದುವೆಯ ಸಮಯಕ್ಕೆ ಒಬ್ಬರೂ ಪರದೇಶಿ ಅರಿವೆಯನ್ನು ಧರಿಸಕೂಡದು, ಮದುಮಗನು ಯಾ ಮದುಮಗಳು ಪರದೇಶಿ ಅರಿವೆ ತೊಟ್ಟುಕೊಂಡಲ್ಲಿ ಮದುವೆ ಮಂಟಪಕ್ಕೆ ಬಹಿಷ್ಕಾರ ಹಾಕುವ ಠರಾವಾಗಿದೆ. ಈ ಠರಾವಿನಿಂದ [illegible] ಮಕ್ಕಳು ಸ್ವದೇಶಿ ಅರಿವೆಗಳನ್ನು ತೊಟ್ಟುಕೊಳ್ಳುತ್ತಿದ್ದಾರೆ. ಇತರ ಹೆಂಗಸರು ಪರದೇಶಿ ಅರಿವೆ ತೊಟ್ಟುಕೊಂಡು ಬಂದಲ್ಲಿ ಅವರಿಗೆ ಹೀಯಾಳಿಸಿ, ಸ್ವದೇಶಿ ಅರಿವೆ ಧರಿಸಲು ಒತ್ತಾಯವಾಗುತ್ತದೆ. ಸ್ತ್ರೀಯರು ಈ ಪ್ರಕಾರ ದಾರಿಯು ಎಷ್ಟು ಪ್ರಶಂಸನೀಯ!

⁂

ವಿವಿಧ ವಾರ್ತೆಗಳು.

ಜಂಜಿರಾ ಸಂಸ್ಥಾನದಲ್ಲಿ ಗಾಂಧಿ ಟೊಪ್ಪಿಗೆಯ ಹುಚ್ಚು ಬಹಳವಾಗಿದೆ. ಗಾಂಧಿ ಟೊಪ್ಪಿಗೆಗಳದೊಂದು ಗಂಟು ಸಂಸ್ಥಾನಕ್ಕೆ ಬಂದಿತ್ತು. ಅದನ್ನು ಕಸ್ಟಮ್ ಆಫೀಸರರು ಜಪ್ತಮಾಡಿ ಸರಕಾರದ ಸ್ವಾಧೀನಪಡಿಸಿದ್ದಾರೆ. ಅಹಮದಾಬಾದ ಮ್ಯುನಿಸಿಪಾಲಿಟಿಯವರು ರಾಜಕೀಯ [illegible] ಸರೆಮನೆಗಟ್ಟಿ [illegible] ಶಾಲೆಗಳನ್ನು ಮುಚ್ಚಿದ್ದರು. ಬಹಿಷ್ಕಾರ ಸಪ್ತಾಹದಲ್ಲಿ ಶಾಲೆಗೆ ರಜೆ. ಇದರಿಂದ ಸರಕಾರವು ಗ್ರಾಂಟನ್ನು ನಿಲ್ಲಿಸಿದೆ. ಮ್ಯುನಿಸಿಪಾಲಿಟಿಯವರೂ, ಸ್ಕೂಲಬೋರ್ಡಿನವರೂ ಸರಕಾರಿ ಧೋರಣದಂತೆ ನಡೆಯುತ್ತೇವಾಗಿ ಬರಕೊಡಬೇಕು; ಅಂದರೆ ರಾಷ್ಟ್ರ ಸರಕಾರಿ ದ್ರವ್ಯಸಹಾಯ ಸಿಕ್ಕೀತು; ಹೀಗೆ ಸಹ ಹುಕುಮವಾಗಿದೆ. ಶ್ರೀ ಕಾಶಿಕ್ಷೇತ್ರದೊಳಗಿನ ಹಿಂದೂ ವಿಶ್ವವಿದ್ಯಾಲಯಕ್ಕೆ ಸಲ್ಲುವ ೩ ಲಕ್ಷ ಗ್ರಾಂಟಿಗೂ ಕಡಿ! ಈ ಕುರಿತು ವಿಶ್ವವಿದ್ಯಾಲಯಕ್ಕೂ, ಹಿಂದುಸ್ಥಾನ ಸರಕಾರಕ್ಕೂ ಪತ್ರವ್ಯವಹಾರ ನಡೆದಿದೆ. ಪಂಡಿತ ಮದನಮೋಹನ ಮಾಲವೀಯರವರು ಈ ವಿಶ್ವವಿದ್ಯಾಲಯದ ಉಪಾಧ್ಯಕ್ಷರಿದ್ದಾರೆ. ಅವರಿಗೆ ಆ ಸ್ಥಾನದಿಂದ ಪದಚ್ಯುತ ಮಾಡಿದ್ದಲ್ಲಿ ಸರಕಾರವು ದ್ರವ್ಯಸಹಾಯದ ವಿಚಾರ ಮಾಡುವದಾಗಿ ಉತ್ತರ ಬಂತು. ಅದಕ್ಕೆ ವಿಶ್ವವಿದ್ಯಾಲಯದವರು ಒಪ್ಪಲಿಲ್ಲ. ಇನ್ನೊಂದು ಕರಾರನ್ನು ಹಿಂದುಸ್ಥಾನ ಸರಕಾರವು ಬೇಡಿದೆ: ವಿಶ್ವವಿದ್ಯಾಲಯದ ಎಲ್ಲ ಹಣದ ಖಾತೆ-ಪತ್ರವನ್ನು ಸರಕಾರದ [illegible] ವಶಕ್ಕೆ ವಹಿಸಿದರೆ, ಸರಕಾರವು ಗ್ರಾಂಟು ಕೊಡುವ ವಿಚಾರ ಮಾಡುವದಂತೆ! —ಕಲ್ಕತ್ತೆಯ [illegible] ರದ ಕಲೆಕ್ಟರರು ನಾತಾಳ ಹಬ್ಬದಲ್ಲಿ ಪರದೇಶಿ ವಸ್ತುಗಳ ಪ್ರದರ್ಶನ ಜರುಗಿಸಬೇಕೆಂದಿದ್ದರು. ಅದಕ್ಕೆ ಪಿಕೆಟಿಂಗ ಆಗುವ ತಯಾರಿ ನಡೆಯಿತು. [illegible] ಕಾರಣ ನಡೆಯಲಿಲ್ಲ — ಶ್ರೀ ಕಾಶಿಕ್ಷೇತ್ರದಲ್ಲಿ ೧೦೦ ಮಂದಿ ಸ್ವಯಂಸೇವಕರಿಗೆ ಸೆರೆಹಿಡಿದರು. ೫೦ ಮಂದಿಗಳ ತಲೆಯ ಮೇಲೆ ತಣ್ಣೀರನ್ನು ಎರೆದರು; ಉಡಿಗೆ ತೊಡಿಗೆಗಳನ್ನೆಲ್ಲ ಕಸಕೊಂಡು ಬತ್ತಲೆ ಬಿಟ್ಟುಬಿಟ್ಟರು — ಸಂಯುಕ್ತ ಪ್ರಾಂತದಲ್ಲಿ ಸಾರಾಯಿ [illegible] ಯ ಬಹಿಷ್ಕಾರ ಜೋರಿನಿಂದ ನಡೆದಿದೆ. ಬಹಿಷ್ಕಾರಿಗಳು ಮನೆಯ ನಂಬರಗಳನ್ನು ಅಳಿಸುತ್ತಾರೆ, ಅಧಿಕಾರಿಗಳು ನಂಬರುಗಳನ್ನು ಇಷ್ಟದ ಹಾಗೆ ಬರಿಸುತ್ತಾರೆ, ಬರೆದ ಹಾಗೆ ಬಹಿಷ್ಕಾರಿಗಳು ಉದ್ದುತ್ತಾರೆ, ಹೀಗೆ ಕ್ರಮ ನಡೆದದಾಗಿ ಸರಕಾರಿ ಪ್ರಕಟಣೆ. —ಬಿಹಾರದಲ್ಲಿ ಗಯಾ ಡಿಸ್ಟ್ರಿಕ್ಟ್ ಕೊಂಗ್ರೆಸ ಕಮಿಟಿಯೊಂದು [illegible] ಆಗಲಿಲ್ಲ. [illegible] ತನಕ ಈ ಪ್ರಾಂತದಲ್ಲಿ ಸೆರೆಯಾಳಾದವರ ಸಂಖ್ಯೆ [illegible] — ಅಮೇರಿಕೆಯಲ್ಲಿ ಖ್ಯಾತಿ ಪಡೆದ ಡಾ| ಹೂವರರು [illegible] 'ಹಂಗರಕಿಲ್ಲರ' ಎಂಬ ಮಾತ್ರೆಗಳನ್ನು ತಯಾರಿಸಿದ್ದಾರೆ. ಇವನ್ನು ತಿಂದರೆ ಹಸಿವೆಯಾಗುವದಿಲ್ಲವಂತೆ! ಇವುಗಳಿಗಾಗಿ ೧೦-೧೪ ವರುಷಗಳ ತನಕ ಡಾಕ್ಟರರು ಶ್ರಮ ಪಟ್ಟಿದ್ದಾರಂತೆ! ಪುರಾತನ ಮಹರ್ಷಿಗಳು [illegible] ಹಸಿವೆ [illegible] ಬದುಕಿಕೊಂಡಿರುತ್ತಿದ್ದರಂತೆ. ತಜ್ಞರು ಇವುಗಳ ಪ್ರಯೋಗ ಮಾಡಿ, ಜನಾಂಗದವರೊಳಗೆ ಪ್ರಚಾರ ಮಾಡಿದರೆ ಬಡಬಗ್ಗರ ಮೇಲೆ ಈಗಿನ ದಿವಸಮಾನದಲ್ಲಿ ಉಪಕಾರ ಮಾಡೀತು. —ಹಿಂದುಸ್ಥಾನದಲ್ಲಿ ೨೫ ಕೋಟಿ ಸಾಗ[illegible] ಭೂಮಿ. ಅದರೊಳಗೆ ೪ ಕೋಟಿ ಭೂಮಿ ಬಂಜರು. ಎಕರೆಗೆ ೮ ಹಂಡ್ರೆಡ್‌ವೇಟ ಅಕ್ಕಿ ಹುಟ್ಟುತ್ತದೆ. ಜಪಾನ ದೇಶದಲ್ಲಿ ೧೯, ಇಟಾಲಿಯಲ್ಲಿ ೧೮, ಸ್ಪೇನದಲ್ಲಿ ೩೪ ಹಂಡ್ರೆಡ್‌ವೇಟ ಹೀಗೆ ಹುಟ್ಟುವಳಿಯಿದೆ. ಬೇಸಾಯ ಪ್ರಧಾನ ದೇಶದ ಅವಸ್ಥೆಯಿದು. — ಹಣದ ಅಡಚಣೆಯ ಮೂಲಕ ಮುಂಬಯಿ ಸರಕಾರವು ಮುಂಬಯಿ ಮ್ಯುನಿಸಿಪಾಲಿಟಿಗೆ ಕೊಡತಕ್ಕ ಗ್ರಾಂಟಿನಲ್ಲಿ ಶೇಕಡಾ ೫ರಂತೆ ಕಡಿಮೆ ಮಾಡುವದಾಗಿ ತಿಳಿಸಿದೆ. ಹಿಂದುಸ್ಥಾನ ಸರಕಾರವು ಯುರೋಪಿಯನ್ [illegible] ೧೧॥ ಕೋಟಿ ರೂಪಾಯಿ ಖರ್ಚ ಮಾಡಿ [illegible] ಶಾಸನಮಂದಿರವನ್ನು ಕಟ್ಟ[illegible]

ಸತ್ಯಾಗ್ರಹದ ವಾರ್ತೆ

ಗುಜರಾಥದೊಳಗೆ.

ಇಲ್ಲಿಯ ಮುಖ್ಯವಾರ್ತೆ ಮುಂಬಯಿ ಸರಕಾರದ ಮುಲ್ಕಿ ಖಾತೆಯ ಪ್ರಧಾನರಾದ ನಾ| ಹಡಸನ್‌ರವರ ಭೆಟ್ಟಿಯದು. ನಾ| ಹಡಸನ್‌ರವರು ಖೇಡಾ ಜಿಲ್ಲೆಯೊಳಗಿನ ಬೋರಸದ, ರಾಸ ಗ್ರಾಮಗಳಿಗೆ ಹೋಗಿ ನೋಡಿದರು. ಜೊತೆಗೆ ಕಲೆಕ್ಟರರೂ, ಮಾಮಲೇದಾರರೂ ಇದ್ದರು. ಅವರು ಗಾಯಕವಾಡದ ರಾಜ್ಯದಲ್ಲಿ ಹೋಗಿ ದೇಶಾಂತರ ಮಾಡಿಬಂದ ಒಕ್ಕಲಿಗರೊಡನೆ ಮಾತನಾಡಿದರು. ಜನರಿಗೆ ಹೇಳಿದ ಭಾಷಣದ ತಾತ್ಪರ್ಯವೇನೆಂದರೆ:- ನಿಮ್ಮ ೨೦೦ ಎಕ್ರೆ ಭೂಮಿ ಜಪ್ತಿಗೆ ಲಿಲಾಂವಾಯಿತು. ಇದನ್ನು ನೋಡಿ ನನಗೆ ವ್ಯಸನವಾಗಿದೆ. ಈಗಲಾದರೂ ನೀವು ಶೀರ್ವೆ ಕೊಟ್ಟರೆ, ಮಾರಾಟವಾಗದ ಭೂಮಿ ನಿಮಗೆ ತಿರುಗಿ ಸಿಗುವದು, ನನಗೆ ಪಟೇದಾರರ ಪರಿಚಯವಿದೆ. ದೇಸಾಯರಲ್ಲಿ ಅವರು ಕಸಬಗಾರರು ನೀವು ಬಡವರಲ್ಲ; ಶೀರ್ವೆ ಕೊಡುವ ಮಾತು ಸುಲಭ. ಜಪ್ತಿ ಬಿಡದೆ ನಿಮ್ಮ ಮನೆ-ಮಾರು ನೋಡಿ ನೋಡಿ ನಾನು ಮರಮರನೆ ಮರುಗಿದೆನು. ಇತರರಂತೆ ನೀವು ಶೀರ್ವೆ ಕೊಡಿರಿ; ಅಂದರೆ, ನಿಮಗೆ ಕಷ್ಟವಾಗಲಿಕ್ಕಿಲ್ಲ. ಇದಕ್ಕೆ ಒಕ್ಕಲಿಗರು ನುಡಿದದ್ದೇನಂದರೆ.- “ಮಹಾತ್ಮರಿಗೂ, ಸರದಾರ ವಲ್ಲಭಭಾಯಿಯವರಿಗೂ ಬಿಡುಗಡೆ ಮಾಡಿ. ಅವರೊಡನೆ ಸಂಧಿಯಾದ ಬಳಿಕ ನಾವೊಬ್ಬರೂ ಶೀರ್ವೆ ಕೊಡೆವು.” “ನೀವು ಶೀರ್ವೆ ಕೊಟ್ಟರೆ, ನಿಮ್ಮ ಪ್ರಮುಖರಿಗೆ ಬಿಡುಗಡೆಯಾಗುವದು.” ಇದಕ್ಕೆ ನಡುಮಧ್ಯದಲ್ಲಿಯೇ ಒಕ್ಕಲಿಗರು ನುಡಿದದ್ದೇನಂದರೆ:- ಸರಕಾರವು ಅಯೋಗ್ಯರಿಗೆ ಗ್ರಾಮಾಧಿಕಾರಿಗಳಾಗಿ ನೇಮಿಸಿಕೊಂಡು ನಮಗೆ ಪರಿಪರಿಯಿಂದ ದಣಿಸಿದೆ. ಆದರಿಂದ ಗ್ರಾಮ-ದಪ್ತರಿಯವರು ನಮಗೆ ಕಷ್ಟವಾಗಿ ಈ ಪ್ರಕಾರ ಹೊಲಗಳಲ್ಲಿ ನಾವು ಅಲೆದಾಡುತ್ತಿದ್ದೇವೆ.” “ನೀವು ರಾಜೀನಾಮೆ ಕೊಟ್ಟಿರಿ; ಸರಕಾರಿ ಕೆಲಸ ನಡೆಯಬೇಕಲ್ಲವೇ ?” ಹೀಗೆ ನಾ| ಹಡಸನ್‌ರವರು ನುಡಿದರು. “ಹಾಗಾದರೆ, ಲಾಠಿ-ಪೋಲೀಸರ ಕಡೆಯಿಂದ ಸರಕಾರವು ಕಾರಭಾರ ನಡಿಸಲುದ್ಯುಕ್ತವಾಗಿರುವದೇ ?” ಎಂಬದಾಗಿ ಒಕ್ಕಲಿಗರು ನೆಟ್ಟಗೆ ಪ್ರಶ್ನೆ ಮಾಡಲು, “ಎಲ್ಲರೂ ಅಂಥವರಲ್ಲ; ನೀವು ಇಂದಲ್ಲ ನಾಳೆ, ಶೀರ್ವೆ ತೆರುವವರೇ; ಈಗಲೇ ಕೊಟ್ಟುಬಿಟ್ಟರೆ ನಿಮಗೆ ಅಷ್ಟೇ ಸುಖ;” ಎಂಬದಾಗಿ ನಾಮದಾರರು ನುಡಿದು, ಒಕ್ಕಲಿಗರ ಅಂದೋಲನದ ಚೌಕಶಿ ಮಾಡದೆ, ಹಾಗೆಯೇ ಬಾರ್ಡೋಲಿ ಕಡೆ ತೆರಳಿದರು. ಬಾರ್ಡೋಲಿಯೊಳಗಿನ ಸ್ಥಿತಿಯನ್ನು ಅಲ್ಲಿಯ ಮಾಮಲೇದಾರರೊಡನೆ ಸಂಚರಿಸಿ ಅರಿತುಕೊಂಡರು. ಅಲ್ಲಿಯ ಸ್ಥಿತಿ ನೋಡಿ ನಾಮದಾರರು ದಿಗಿಲುಬಿದ್ದರಂತೆ. ಶೀರ್ವೆ ವಸೂಲಾಗಲೇ ಬೇಕು, ಎಂಬದಾಗಿ ಮಾಮಲೇದಾರರಿಗೆ ವಿಧಿಸಿದರು. ಶೀರ್ವೆ ಕೊಡದವರಿಗೆ ಬೆಳೆ ಒಯ್ಯಗೊಡಬಾರದು; ಗಾಡಿಗಳಿಗೆ ಅಡ್ಡಗಟ್ಟಬೇಕು; ಎಂಬದಾಗಿ ಬಾರ್ಡೋಲಿಯ ಮಾಮಲೇದಾರರಿಗೆ ನಾ| ಹಡಸನ್‌ರವರು ಅಪ್ಪಣೆ ಕೊಟ್ಟರು.

[illegible]ಮಲೇದಾರ:— ನಾವು ಪ್ರಯತ್ನ ಮಾಡುತ್ತೇ[illegible] ಯತ್ನಿಸುತ್ತೇವೆ; ಆದರೆ ಇಷ್ಟುದೊ[illegible] ವ ಬಗೆ ಹೇಗೆ?

ನಾ| ಹಡಸನ್:— ನಿಮ್ಮ ಬೆಂಬಲಕ್ಕೆ ಶಿಪಾಯರ ದಂಡಿದೆ

ಮಾ:— ಹೌದು ಸಾಹೇಬರೇ, ಆದರೆ, ಅವರು ನಮ್ಮ ಮಾತು ಕೇಳುವದಿಲ್ಲ. ಜಪ್ತಿ ಮಾಡಿದ ಭತ್ತವನ್ನು ಕಾಯುತ್ತ ದಿನಗಳೆಯುತ್ತಾರೆ. ಕೆಲವರು ಜಪ್ತಿಯ ಕೆಲಸ ಮಾಡುತ್ತಾರೆ.

ನಾ| ಹ:— ಈಗ ಜವಾರಿ ಹಾಗು ಹತ್ತಿಯ ಬೆಳೆ ತಯಾರಾಗುವದು. ಆದದ್ದಾಗಲಿ, ಅದನ್ನು ನಾವು ಒಕ್ಕಲಿಗರಿಗೆ ಎಷ್ಟು ಕಾಲಕ್ಕೂ ಒಯ್ಯಗೊಡಲಾಗದು.

ಮಾ:— ಇದು ಶಕ್ಯವಿಲ್ಲ.

ನಾ| ಹ:— ಬೇಕಾದರೆ ಹೆಚ್ಚಿನ ಜನರಿಗೆ ನೇಮಿಸಿಕೊಳ್ಳಿರಿ; ಇದನ್ನು ಮಾಡಿಯೇ ತೀರಬೇಕು.

ಮಾ:— ಇದು ಹಿಂದು ಗ್ರಾಮದ ಪ್ರಶ್ನೆಯಲ್ಲ; ಎಷ್ಟು ಮಂದಿ ಕಾವಲುಗಾರರನ್ನಿಡುವದು?

ನಾ| ಹ:— ೨೦೦ ಮಂದಿ ಸಾಕೇನು ?

ಮಾ:— ಇಲ್ಲ ರಾಯರೇ.

ನಾ| ಹ:— ೫೦೦ ಮಂದಿ ಸಾಲದೇ ?

ಮಾ:— ೫೦೦ ಮಂದಿಗಳಿಂದೇನಾದೀತು ?

ನಾ| ಹ:— ೧೦೦೦, ೨೦೦೦, ೩೦೦೦ ಎಷ್ಟು ಮಂದಿಗಳು ಬೇಕು, ಹೇಳಿ.

ಮಾ.— ನನಗೆ ಸೈನಿಕರ ಕೆಲಸದ ಜ್ಞಾನವಿಲ್ಲ. ನನ್ನ ಎಣಿಕೆಯಂತೆ ತಾಲೂಕಿನೊಳಗಿನ ಬೆಳೆಗೆ ಮುತ್ತಿಗೆ ಹಾಕಿ ನಿಲ್ಲಲು ೬೦೦೦ ಜನರಾದರೂ ಬೇಕು.

ಇದನ್ನು ಕೇಳಿ ನಾ| ಹಡಸನ್‌ರವರು ಟಿಪ್ಪಣ ಮಾಡಿಕೊಂಡರು. ಒಬ್ಬ ಮೇಲಧಿಕಾರಿಯೊಡನೆ ಈತನಕ ತಗಲಿದ ವಸೂಲಿಯ ಖರ್ಚು ಹಾಗು ವಸೂಲಾದ ರಕಮಿನ ಅಂಕಿ ತೆಗೆದುಕೊಂಡರಂತೆ. ಬಾರ್ಡೋಲಿ ತಾಲೂಕಿನಲ್ಲಿ ೩| ಲಕ್ಷ ರೂಪಾಯಿ ಶೀರ್ವೆ ಬಾಕಿ ಇದೆ. ಅದರಲ್ಲಿ ಅರ್ಧಲಕ್ಷ ರೂಪಾಯಿ ಶೀರ್ವೆ ವಸೂಲಾಯಿತು. ಇಷ್ಟು ವಸೂಲಿಗೆ ೨|| ಲಕ್ಷ ರೂಪಾಯಿಗಳ ಖರ್ಚು ! ತಲೆಗಿಂತ ಮುಂಡಾಸು ದೊಡ್ಡದಾದ ಸುದ್ದಿ ಕೇಳಿ ನಾ| ಹಡಸನ್‌ರವರು ದಿಗಿಲುಬಿದ್ದರು ! ಬಾರ್ಡೋಲಿಯ ರೇಲ್ವೆ ಸ್ಟೇಶನಿನಲ್ಲಿ ನಾ| ಹಡಸನ್‌ರವರೂ, ಇತರ ಅಧಿಕಾರಿಗಳೂ ಗುಪ್ತಬೈಠಕಿಯ ಹದ್ದೆಯಲ್ಲಿ ಕೂತು ಆಲೋಚಿಸಿದರು. ಖರ್ಚು ಕಡಿಮೆಯಾಗಬೇಕು; ವಸೂಲಿ ಹೆಚ್ಚಾಗಬೇಕು; ಹೀಗೆ ಹಂಚಿಕೆ ಮಾಡಲು ಎಲ್ಲರೂ ಆಲೋಚಿಸಿದರಂತೆ. ಜನರಿಗೆ ಹೊಡೆಯಬಾರದು; ಬೈಯ್ಯಲಾಗದು; ಎಂಬದಾಗಿ ಅಧಿಕಾರಿಗಳಿಗೆ ಆಜ್ಞೆ ಮಾಡಿ ಮರಳಿದರಂತೆ.

ಇನ್ನು ಶೀರ್ವೆ ವಸೂಲಿಯ ಕ್ರಮದ ವಿಷಯಕ್ಕೆ ಬರಬೇಕಾಗಿದೆ ನಾ| ಹಡಸನ್‌ರವರ ಯೋಜನೆಯಂತೆ ಬಾರ್ಡೋಲಿ ತಾಲೂಕಿನಲ್ಲಿ ೧೧ ಹೊಸ ಪೋಲೀಸರ ಠಾಣ್ಯಗಳಿರುವವು. ಸರಭೋಣ, ಅಂಭೇಟ, ಮಾಣೆಕಪುರ, ಬಾರ್ಡೋಲಿ, ಮಾಢಿ ಮೊದಲಾದ ಕಡೆಗಳಲ್ಲಿ ಠಾಣ್ಯಗಳಾಗುವವು. ಬಾರ್ಡೋಲಿ—ಜಲಾಲಪುರ ತಾಲೂಕುಗಳಲ್ಲಿ ಮಾಮಲೇದಾರರ ಅಪ್ಪಣೆ ಪಡೆಯದೆ ಬೆಳೆ ಒಯ್ಯಬಾರದೆಂದು ಹುಕುಮಾಗಿದೆ. ೮ ಆಣೆ ಬೆಳೆ ಕೊಯ್ದು ಒಯ್ಯಲ್ಪಟ್ಟಿದೆ. ಬಾರ್ಡೋಲಿ ತಾಲೂಕಿನ ಹತುಕಾ ಗ್ರಾಮದಲ್ಲಿ ಇದ್ದ ಜನರು ಮನೆಮಾರು ಬಿಟ್ಟು ಹೋಗಲಾರಂಭಿಸಿದ್ದಾರೆ. ಅವರಿಗೆ ಹೊರ ಹೋಗಗೊಡದಂತೆ ಪೋಲೀಸರು ಅಡ್ಡಗಟ್ಟುತ್ತಿದ್ದಾರೆ. ಅದಾಗ್ಯೂ, ಅವರು ಕಣ್ಣು ತಪ್ಪಿಸಿ ಹೋದರು ! ವಾಂಕಾನೇರಿನಲ್ಲಿ ಹುಲ್ಲು ಗೊಣಬೆಗೆ ಬೆಂಕಿಹತ್ತಿತು. ಫೌಜದಾರರು ಗಾಂಧಿ ಟೊಪ್ಪಿಗೆಯವರ ಮೇಲೆ ಅಪರಾಧ ಹೊರಿಸಲು ಬಹಳ ಪ್ರಯತ್ನಪಟ್ಟರಂತೆ. ಸಾಕ್ಷಿಗಾರರು ಸಿಗುವದಿಲ್ಲ; ಇಲ್ಲದಿದ್ದರೆ, ನಿಮಗೆ ಮಾಡುತ್ತಿದ್ದೆ; ಎಂಬದಾಗಿ ಬೊಟ್ಟು ಮುರಿಕೊಂಡರು. ಜ[illegible]ಪುರ ತಾಲೂಕಿನ ಕರಸಾಡಿ ಗ್ರಾಮದಲ್ಲಿ ಜನರು ಕೊಯ್ದು ಗಾಡಿ ತುಂಬಿದರು. ಪೋಲೀಸ ಪಟೇ[illegible] ಕೂಡಲೆ ಮಾಮಲೇದಾರರಿಗೆ ಸುದ್ದಿ ಕಳುಹಿದ[illegible] ಪೋಲೀಸ ಪಡೆಯೊಡನೆ ಮಾಮಲೇದಾರರು ಬೆಳೆ ಜಪ್ತಮಾಡಿ ಇಬ್ಬರಿಗೆ ಸೆರೆಹಿಡಿದರು. ಭೂ[illegible] ಜಪ್ತಿ ಮಾಡುವ ಮುಂಚೆಯೇ ಬೆಳೆ ಒಯ್ಯಲ್[illegible] ಪ್ರತಿಬಂಧ. ಜಪ್ತಮಾಡಿದ ಭೂಮಿಯನ್ನು ವರ[illegible]ಧೀನ ಮಾಡುವದು ಕಠಿಣವಾಗಿದೆ. ೫ ರೂಪಾಯ[illegible] ಬಿಘೆಯಂತೆ ನಿಂತ ಬೆಳೆಸಹಿತ ಭೂಮಿ ಕೊಳ್ಳಬೇ[illegible]ಗಿ ಮಾಮಲೇದಾರರು (ಬಾಜಿಪುರದಲ್ಲಿ ಡ-ಬ್ಲ್ಯ [illegible]ರಿಗೆ ಹೇಳಲು, ಅವರು ಅಂದದ್ದು:-ಈ ಭೂಮಿಯು[illegible]ಡೆಯರು ನಮ್ಮ ಒಡೆಯರು; ಅವರು ನಮಗೆ ಈತನ[illegible] ಮಕ್ಕಳಂತೆ ಸಾಕಿಸಲಹಿದ್ದಾರೆ ಪುಕ್ಕಟೆಯಾಗಿ ನಮ್ಮ[illegible] ಈ ಭೂಮಿ ಕೊಟ್ಟರೂ ಬೇಡ ! ಅದು ಕೊಳ್ಳುವದು ಹರಾಮ ! ಇದಲ್ಲದೆ, ನಮ್ಮ ಕಡೆ ೫ ಗಜ ಅರಿವೆ ಕೊಳ್ಳಲು ಕಾಸಿಲ್ಲ. ಇಂಥವರು ಭೂಮಿಕೊಳ್ಳು[illegible] ಬಗೆ ಹೇಗೆ ? ಈ ಮಾತು ಕೇಳಿ ಮಾಮಲೇದಾರ[illegible] ಮೋರೆ ಸಪ್ಪಗೆ ಮಾಡಿಕೊಂಡು ಸ್ವಸ್ಥಾನಕ್ಕೆ ತೆರಳಿದರು. ಬಾರ್ಡೋಲಿ ತಾಲೂಕಿನ ಬಮನಿ ಗ್ರಾಮದಲ್ಲಿ ಜಪ್ತಿ ಮಾಡಿದ ಅಕ್ಕಿ ಕೊಳ್ಳಲು ಒಬ್ಬರೂ ಸಿಗಲಿಲ್ಲ. ಓಲಪಾಡ ತಾಲೂಕಿನ ಮುಂಬಯಿಯ ಮರ್ಚಂಟರಾದ ಅಹಮ್ಮದ ಶೇಟರವರು ಅಗ್ಗವಾಗಿ ಆ ಅಕ್ಕಿ ಕೊಂಡುಕೊಂಡರು ಅಕೋಟಿಗ್ರಾಮದ ರಾ|ಗೋವಿಂದಭಾಯಿಯವರು ಅಕ್ಕಿ ಗಿರಣಿ ಇಟ್ಟಿದ್ದಾರೆ. ಅವರಿಗೆ ಭೂಮಿಯಿಲ್ಲ. ಅವರ ತಮ್ಮನೋ, ಅಣ್ಣನೋ ಒಬ್ಬನು ಶೀರ್ವೆ ಕೊಡದ್ದರಿಂದ ಇವರು ಗಿರಣಿಯ ಬಗ್ಗೆ ಕೊಂಡುಕೊಂಡ ಭತ್ತ ಜಪ್ತಮಾಡಿದ್ದಾರೆ

ಬಾರ್ಡೋಲಿ ತಾಲೂಕಿನ ವೆಲೋದ ಗ್ರಾಮದ ಮುಸಲ್ಮಾನರು ಸಭೆಸೇರಿ ಜಪ್ತಿಮಾಡಿದ ಜೆಂದಿಗೆಯನ್ನು ಕೊಳ್ಳಬಾರದಾಗಿ ಠರಾವು ಮಾಡಿದ್ದಾರೆ ಕೊಂಡವರಿಗೂ ಬಹಿಷ್ಕರಿಸಬೇಕಾಗಿಯೂ ಠರಾವಾಗಿದೆ. ಕರೋಡ ಪೇಟೆಯೊಳಗಿನ ದೇವಪಟಿದಾರರು ಸಭೆಸೇರಿ ಕರ ತೆರಬಾರದಾಗಿಯೂ, ಶೀಘ್ರವೇ ದೇಶಾಂತರ ಮಾಡಬೇಕಾಗಿ [illegible] ಠರಾವು ಮಾಡಿದ್ದಾರೆ ಈ ಠರಾವನ್ನು ಮನ್ನಿಸದವರೊಡನೆ ಯಾವದೇ ಪ್ರಕಾರದ ಸಂಪರ್ಕವಿಡಬಾರದಾಗಿಯೂ ಠರಾವಾಗಿದೆ.

ಬಾರ್ಡೋಲಿ ತಾಲೂಕಿನ ಗ್ರಾಮಗಳಲ್ಲಿ ಪಟೇಲ-ತಲಾಟಿಗಳಿಗೆ ಶೀರ್ವೆ ವಸೂಲಿಯ ಅಧಿಕಾರವಿದೆ. ಇಷ್ಟು ದಿನ ಪೋಲೀಸರೇ ಶೀರ್ವೆ ವಸೂಲು ಮಾಡುತ್ತಿದ್ದರು. ಈ ಹುಕುಮನ್ನು ಡಂಗುರ ಸಾರಿ ತಿಳಿಸಿದ್ದಾರೆ. ಮನೆಬಾಗಿಲುಗಳಿಗೂ, ಗಿಡ-ಮರಗಳಿಗೂ ಈ ನೋಟೀಸುಗಳು ಅಂಟಿಸಲ್ಪಟ್ಟಿವೆ.

ಖೇಡಾ ಜಿಲ್ಲೆಯ ಬೋರಸದ ಗ್ರಾಮದಲ್ಲಿ ಕಲೆಕ್ಟರರು ಸರಕಾರದ ಜಪ್ತಿಯ ನೋಟೀಸುಗಳನ್ನು ಹೊರಡಿಸಿದ್ದಾರೆ. ಜನವರಿ ೬ನೇ ತಾರೀಖಿನೊಳಗಾಗಿ ಶೀರ್ವೆ ಕೊಡದಿದ್ದರೆ, ಭೂಮಿಯೆಲ್ಲ ಸರಕಾರದ ಮಾಲ್ಕಿಯದು. ಚೌಥಾಯಿ ದಂಡ ಸಹಿತ ಕೊಡಬೇಕು- ಎಂತಲೂ ಹುಕುಮು ! ಸುನಾವ, ದೇವಳ, ಅಂಕಲಾವ, ಬೋಡಲ ಗ್ರಾಮಗಳಲ್ಲಿ ಕೂಡ ಸುಮಾರು ೬೦೦ ನೋಟೀಸುಗಳು ಹೊರಟಿವೆ. ಇವು ತಪ್ಪಿದರೂ

[೬ನೇ ಪಾನದ ಮೇಲೆ ಮುಂದುವರಿದಿದೆ.]

ಕಾನಡಾವೃತ್ತ.

ಪ್ರಮೋದ ಸಂ। ಪುಷ್ಯ ಬ। ೧ನ್ನ ಸೋಮವಾರ.

ಪ್ರಜಾಪರಿಪಾಲಕರಿಗೆ—

ಪ್ರಜಾಪರಿಪಾಲಕರಾದ ರಾಜ್ಯಕರ್ತರಿಗೆ ನಮ್ಮದೊಂದು ಅರಿಕೆ. ಈ ಅರಿಕೆ ಮಾಡುವಾಗ ರಾಜ್ಯದ ಈಗಿನ ಸ್ಥಿತಿ ನಾವು ಅರಿತಿದ್ದೇವೆ. ಜಮೆಗೂ-ಖರ್ಚಿಗೂ ಮೇಳಗೂಡುವದಿಲ್ಲ; ಜಮೆಗಿಂತ ಖರ್ಚು ಹೆಚ್ಚಿದೆ. ರಾಜ್ಯವಾಡಳಿತೆಯ ಖರ್ಚು ಸಾಗಿಸಿಕೊಂಡು ರಾಜ್ಯರಥವನ್ನು ಮರ್ಯಾದೆಯಿಂದ ನಡಿಸಿಕೊಂಡು ಹೋಗುವ ಬಗೆ ಹೇಗೆಂಬ ಚಿಂತೆಯಲ್ಲಿ ಅವರು ಬಿದ್ದಿರುತ್ತಾರೆ. ಇದನ್ನು ನಾವು ಅಲ್ಲಗಳೆಯುವದಿಲ್ಲ, ಯಾರೂ ಅಲ್ಲಗಳೆಯಲಾರರು. ಕಾಲಮಾನವು ಪಕ್ಕನೆ ಬದಲಿದೆ. ನಾವೀಗ ಸಂಕ್ರಮಣಾವಸ್ಥೆಯಲ್ಲಿದ್ದೇವೆ. ಇಡೀ ಭೂಮಂಡಲವೇ ಸ್ಥಿತ್ಯಂತರ ಹೊಂದುತ್ತಲಿದೆ. ದೇಶ-ದೇಶಾಂತರಗಳಲ್ಲಿ ಒಂದೇ ಕಥೆ: ಹಣದ ಅಡಚಣಿ, ದ್ರವ್ಯಾಭಾವ; ಖರ್ಚಿಗೆ ಹಣವಿಲ್ಲ. ಹೀಗೆ ಅವಸ್ಥೆಯುಂಟಾದಾಗ್ಯೂ ಅವರವರ ಕರ್ತವ್ಯ ಅವರವರಿಗೆ ಬೆನ್ನುಬಿಡದು. ನಾವೆಲ್ಲರೂ ನಮ್ಮ ನಮ್ಮ ಕರ್ತವ್ಯದಿಂದ ಬದ್ಧರಾಗಿದ್ದೇವೆ. ಹಾಗೆಯೇ ರಾಜ್ಯಕರ್ತರಿಗೂ ಕರ್ತವ್ಯವಿವೆ. ದ್ರವ್ಯಾಭಾವವೆಂದು ಅವರು ಕರ್ತವ್ಯವನ್ನು ಅಲ್ಲಗಳೆಯಲಾರರು. ಸರ್ವಾಧಿಪತಿಗಳಾದ ಇರ್ವಿನ್ ದೊರೆಗಳು ಸಹ ಪ್ರಜಾಪರಿಪಾಲನದ ಕರ್ತವ್ಯವನ್ನು ಈಗಿನ ಮನ್ವಂತರದಲ್ಲಿ ಸಹ ನಡಿಸಲು ಸರಕಾರವು ಸಿದ್ಧವಿರುವದಾಗಿ ಹೇಳಿ, ಸಂದೇಹಿಗಳಿಗೆ ಆಶ್ವಾಸನ ಕೊಟ್ಟಿರುತ್ತಾರೆ. ಪಂಜಾಬ ಸರಕಾರದ ಜಮಾ-ಖರ್ಚಿನಲ್ಲಿ ೧ ಕೋಟಿ ರೂಪಾಯಿಗಳ ತುಟ್ಟಿ. ಆದಾಗ್ಯೂ, ಆ ಸರಕಾರವು ಕಷ್ಟದಲ್ಲಿ ಬಿದ್ದ ರೈತರಿಗೆ ನೆರವಾಗುತ್ತಿದೆ. ಮದ್ರಾಸ ಸರಕಾರವು ಹಣದ ಅಡಚಣಿ ಸ್ಥಿತಿಯಲ್ಲಿಯೂ ನೆರೆಯಿಂದ ನಿರಾಶ್ರಿತರಾದ ರೈತರಿಗೆ ತೀರ್ವೆ ಸೂಟ ಬಿಟ್ಟಿದೆ. ಇದರ ಮೇಲಿಂದ ಸರಕಾರವು ಎಲ್ಲ ಸ್ಥಿತಿಯಲ್ಲೂ ಕರ್ತವ್ಯಬದ್ಧವೆಂಬ ಮಾತು ಸಿದ್ಧವಾಗುತ್ತದೆ. ಕರ್ತವ್ಯದಂತೆ ನಡೆಯಲು ಸರಕಾರವು ಸಂತೋಷಪಡುತ್ತದೆಂಬ ಮಾತೂ ಸಿದ್ಧವೇ. ಕಾರಣ, ನಾವು ಈ ಅರಿಕೆ ಮಾಡಲು ಮುಂದಾಗಿದ್ದೇವೆ. ಸರಕಾರವು ಪರಾಂಬರಿಸತಕ್ಕ ವಿಷಯವಿದು! ಆಳವಾಗಿ ಆಲೋಚಿಸಬೇಕು.

ದೇಶ-ದೇಶಾಂತರಗಳಲ್ಲಿ ಒದಗಿದ ಅವಸ್ಥೆಯ ಉಲ್ಲೇಖವನ್ನು ನಾವು ಮಾಡಿದ್ದೇವಷ್ಟೇ! ನಮ್ಮ ಹಿಂದುಸ್ಥಾನ ದೇಶದಲ್ಲಿಯೂ ಇದೇ ಅವಸ್ಥೆ. ವ್ಯಾಪಾರವಿಲ್ಲ; ಸರಕುಗಳ ಬೆಲೆ ತೀರ ಇಳಿದದೆ. ಅದರೊಳಗೂ ಹಿಂದುಸ್ಥಾನದ ಸ್ಥಿತಿ ವಿಶೇಷ ಕಂಗೆಟ್ಟಿದೆ. ಸರಕಾರವು ರೂಪಾಯಿಯ ದರವನ್ನು ಕೃತ್ರಿಮವಾಗಿ ಏರಿಸಿದೆ. ಪವನಿಗೆ ೧೫ ರೂಪಾಯಿಗಳಿದ್ದವು; ಅದೀಗ ೧೩ ರೂ.ಗೆ ಇಳಿದಿದೆ. ಕಾಳು-ಕಡಿ ಮೊದಲಾದ ಸರಕುಗಳ ದರದ ಮಾನವು ದೇಶ—ಪರದೇಶಗಳಲ್ಲಿ ಸಾಮಾನ್ಯವಾಗಿ ನಿಶ್ಚಿತ ಪ್ರಮಾಣದಲ್ಲಿರುತ್ತದೆ. ಹಿಂದುಸ್ಥಾನದ ಮಟ್ಟಿಗೆ ಈ ಪ್ರಮಾಣವು ರೂಪಾಯಿಯ ಕೃತ್ರಿಮ ಏರಿಕೆಯಿಂದ ಬದಲಿದೆ. ೧೫ ರೂಪಾಯಿ ಸಿಗುವ ಸರಕಿಗೆ ಈಗ ೧೩ ರೂಪಾಯಿ ಕೈಯಲ್ಲಿ ಬೀಳುತ್ತವೆ. ಇದು ಸಾಮಾನ್ಯ ಸ್ಥಿತಿಯೊಳಗಿನ ನಷ್ಟ. ಈಗ ವಿಶೇಷ ಸ್ಥಿತಿಯಲ್ಲಿ ಅದಕ್ಕೂ ಕಡಿಮೆ ಪ್ರತಿಫಲ ಕೈಸೇರುತ್ತದೆ. ಇದು ವಿಪರೀತವಾದದ್ದು. ಜನರೆಲ್ಲರೂ, ಪ್ರಮುಖ್ಯವಾಗಿ ಬಡ-ಬಗ್ಗರೆಲ್ಲರೂ ಕಂಗೆಟ್ಟಿದ್ದಾರೆ. ರೂಪಾಯಿಯ ದರ ಏರಿದ್ದರಿಂದ ಸಾಲದ ಮಾನ ಮಿಗಿಲಾಯಿತು. ತೀರ್ವೆಯ ಮಾನ ಹೆಚ್ಚಿತು. ಕಾಳು-ಕಡಿ ಮೊದಲಾದವುಗಳಿಂದ ಆದಾಯ ಕಡಿಮೆ, ಸಾಲ, ತೀರ್ವೆ ಮೊದಲಾದ ವೆಚ್ಚ ಹೆಚ್ಚು. ಹಿಂದುಸ್ಥಾನದಲ್ಲಿ ಬೇಸಾಯದ ಹೊರೆಯವರೇ ಮುಖ್ಯವಾಗಿ ವಾಸವಾಗಿದ್ದಾರೆ. ರೈತರೆಂದರೆ ದಾಸ್ಯ, ದಾಸ್ಯವೆಂದರೆ ರೈತರು ಹೀಗೆ ಇಲ್ಲಿಯ ಸಮೀಕರಣ. ಇದಕ್ಕೆ ಯಾವದೇ ಕಾರಣವಿರಲಿ. ಅದರ ವಿಚಾರ ಈಗ ಮಾಡುವದುಚಿತವಲ್ಲ. ರೈತರ ಸ್ಥಿತಿ ಗಂಭೀರವಾದುದನ್ನಷ್ಟೇ ನಾವು ಸರಕಾರಕ್ಕೆ ಅರುಹಬೇಕಾಗಿದೆ.

ಹೀಗೆ ಜೀವನೋಪಾಯ ಕೆಟ್ಟ ಸ್ಥಿತಿಯಾಗಿರುತ್ತದೆ. ಬಡವರೇ ಸಾಲದ ಹೊರೆಯಲ್ಲಿ ತುಂಬಿ ಹೋಗಿದ್ದಾರೆ. ೧೦೦ಕ್ಕೆ ೯೦ರಷ್ಟು ಮಂದಿಗಳು ಬಿನಾ ಯೋಗ್ಯವಾದ ರೀತಿ ಹೊಟ್ಟೆ ಹೊರಕೊಳ್ಳುವ ಏರ್ಪಾಡಿಲ್ಲದವರಾಗಿದ್ದಾರೆ. ಹಿಂದುಸ್ಥಾನದ ಉತ್ಪನ್ನದ ಸರಾಸರಿಯನ್ನು ಎಲ್ಲರೂ ಬಲ್ಲಂಥ ವಿಷಯ. ವರ್ಷಾಸನ ೩೦ ರೂಪಾಯಿ ಹೊಂದುವದಿಲ್ಲ. ಇಂಥಲ್ಲಿ ಹೊಟ್ಟೆ ತುಂಬ ಊಟ ಉಣುವ ಬಗೆ ಹೇಗೆ? ವರ್‍ಹಾಡ ಪ್ರಾಂತದ ಬುಲ್ಡಾನಾ ಜಿಲ್ಹೆಯಲ್ಲಿ "ಇಂಗ್ರಜ ರಾಜ್ಯಕಿ ಜಯ!" ಎಂಬ ಜಯಘೋಷ ಮಾಡುತ್ತ ಒಕ್ಕಲಿಗರನೇಕರು ಕಾಳು ಕಡಿಗಳನ್ನು ಲೂಟಿಮಾಡಿದ ವಾರ್ತೆ ಬಂದಿದೆ. ಲೂಟಿ ಮಾಡುವದು ಪಾಪ, ಅಧರ್ಮ. ಅದನ್ನು ಒಬ್ಬರೂ ಹೇಯವೆನ್ನುವ ವಿಷಯ. ಇದನ್ನು ನಾವೊಪ್ಪುತ್ತೇವೆ. ಆದಾಗ್ಯೂ, ಜನರು ನಿರಾಶರಾಗಿ ಬೇರೆ ಉಪಾಯಗಾಣದೆ ಲೂಟಿಗೆ ಪ್ರವೃತ್ತರಾದರೆಂದು ಅಲ್ಲಿಂದ ಬಂದ ವೃತ್ತಾಂತದ ಮೇಲಿಂದ ಗ್ರಹಿಕೆಯಾಗುತ್ತದೆ. ಸಾವುಕಾರರ ಮನೆ ಲೂಟಿಯಾಯಿತೇನೋ ನಿಜ. ಆದರೆ ಲೂಟಿಯ ಪ್ರಕಾರ ಬೋಧಪ್ರದವಿದೆ. ಒಬ್ಬ ಸಾವುಕಾರರಿಗೂ ಪ್ರಾಣಹಾನಿಯಾಗಲಿಲ್ಲ. ಪ್ರೊಮಿಸರಿ ನೋಟು, ಖರೀದಿ ಪುಸ್ತಕ ಮುಂತಾದ ಸಾಲದ ದ್ಯೋತಕವಾದ ದಾಖಲೆಗಳು ಸುಟ್ಟುಹೋದವು. ಮುಖ್ಯ ಉದ್ದೇಶವು ಇದೇ ಎಂಬುದಾಗಿ ಭಾಸವಾಗುತ್ತದೆ. ಇದರ ಮೇಲಿಂದ ವಿಚಾರವಂತರು ಕಲಿಯಬೇಕಾದದ್ದೇನು? ಅಲ್ಲಿಯ ಒಕ್ಕಲಿಗರು ಬಡವರಾಗಿದ್ದಾರೆ; ಸಾಲದಲ್ಲಿ ಮುಳುಗಿದ್ದಾರೆ. ಸಾಲದೊಳಗಿಂದ ಪಾರಾಗುವ ಆಶೆ ಕಾಣದೆ ಈ ಅತ್ಯಾಚಾರಕ್ಕೆ ಪ್ರವೃತ್ತರಾದರು. ಕಾರಣ ಅವರ ಸ್ಥಿತಿ ಸುಧಾರಿಸಲು ಸರಕಾರವೂ, ಸಾವುಕಾರರೂ ಪ್ರಯತ್ನಪಡತಕ್ಕದ್ದು. ಇಂಥ ಸುಲಿಗೆಗಳಿಂದ ಒಕ್ಕಲಿಗರ ಮೇಲಿನ ಸಂಕಟನಿವಾರಣೆಯಾಗುತ್ತದಾಗಿ ಅವರೆಂದೂ ಎಣಿಸಕೂಡದು. ಹೆಚ್ಚು ಹೆಚ್ಚಿನ ಕಷ್ಟಗಳು ಬರುತ್ತವೆ. ಜನರ ಸಹಾನುಭೂತಿ ಬಯಲಾಗುತ್ತದೆ; ಕಾರಣ ಎಷ್ಟೇ ಕಠಿಣ ಪ್ರಸಂಗ ಬಂದಾಗ್ಯೂ ಅವರು ಅತ್ಯಾಚಾರಕ್ಕೀಡಾಗಿ ದೊಂಬಿಗೆ ಪ್ರವೃತ್ತರಾಗುವದು ಕ್ಷೇಮಕರವಲ್ಲ. ಬುಲ್ಡಾನಾ ಜಿಲ್ಹೆಯಲ್ಲಿ ಪೋಲೀಸರು ಅನೇಕರಿಗೆ ಸೆರೆಹಿಡಿದು ಮುಂದಿನ ಕ್ರಮ ನಡಿಸಿದ್ದಾರೆ.

ನಮ್ಮ ಜಿಲ್ಹೆಯ ಶಿದ್ದಾಪುರ ತಾಲೂಕಿನ ಹೇರೂರ ಸೀಮೆಯಲ್ಲಿ ಬಹು ದೊಡ್ಡ ದರೋಡೆಬಿದ್ದ ವಾರ್ತೆ ಬೇರೊಂದೆಡೆ ಕೊಟ್ಟಿದೆ. ಪ್ರಕಟಗೊಂಡ ವೃತ್ತಾಂತದ ಮೇಲಿಂದ ಈ ದರೋಡೆಯು ಸಾಮಾನ್ಯವಾಗಿ ಬಡತನ ನೀಗಿಸಿಕೊಳ್ಳುವದಕ್ಕಾಗಿ ಒದಗಿಬಂದಿದೆಂಬ ಭಾವನೆಯುಂಟಾಗುತ್ತದೆ. ಕಳ್ಳರು ಮನೆ ಒಳಸೇರಿ ದುಡ್ಡಿನ ಗಂಟನ್ನೇ ಶೋಧಿಸಹೇಳಿದರು. ಬೇಣದ ಮೇಲೆ ಹುಲ್ಲು ಕೊಯ್ಯಹೋದ ಕಣಲಕೋಣೆಯ ರಾ| ತಿಮ್ಮಯ್ಯ ಹೆಗಡೆರ ವಂಟಿ ಮೊದಲಾದ ದಾಗಿನೆಗಳನ್ನು ಅಪಹರಿಸಿದರು. ಒಟ್ಟಿನಮೇಲೆ ದುಡ್ಡಿಗೆ ಸಂಕ್ರಾಂತಿ ಬಂದಿದೆ. ದುಡ್ಡಿನ ಅಡಚಣಿ ಎಲ್ಲೆಲ್ಲಿಯೂ ವಿಪರೀತ. ದೊಡ್ಡ ದೊಡ್ಡ ಸಾವುಕಾರರು ಸಹ ಗೋಳಿಡಹತ್ತಿದ್ದಾರೆ. ಬಡಬಗ್ಗರ ಸ್ಥಿತಿಯಂತು ಹೇಳಲಾಗಲ್ಲ; ರೈತರಂತು ಕಂಗೆಟ್ಟರು. ಇದರ ಮೇಲಿಂದ ಸರಕಾರವೂ, ಲೋಕಪ್ರಮುಖರೂ ಶೀಘ್ರವೇ ಉಪಾಯಯೋಜನೆ ಮಾಡಬೇಕು.

ಸತ್ಯಾಗ್ರಹದ ಚಳವಳಿಯೆಂದು ಸರಕಾರವು ಈ ಕಡೆ ದುರ್ಲಕ್ಷ್ಯ ಮಾಡಲಾಗದು; ವಿಪರೀತ ಗ್ರಹಿಕೆ ಮಾಡಿಕೊಳ್ಳಲಾಗದು. ಬಡತನದಿಂದ ಉಂಟಾದ ಅವಸ್ಥೆಯಿದು. ಈ ವರ್ಷ ಶಿರಸಿ-ಶಿದ್ದಾಪುರ ಕಡೆ ಘಟ್ಟದ ಸೀಮೆಗಳಲ್ಲಿ ಮುಖ್ಯ ಬೆಳೆಯಾದ ಅಡಿಕೆ-ಮೆಣಸು-ಯಾಲಕ್ಕಿಗಳ ದರ ಘೊಪ್ಪನೆ ಇಳಿದು ಭಯಂಕರವಾದ ಆಘಾತವಾಗಿದೆ. ತೋಟಗಳ ತೀರ್ವೆಯ ಗಂಟು ತೆರುವ ಮಾತು ಒತ್ತಟ್ಟಿಗಿರಲಿ; ಸಾಗುವಳಿಯ ಖರ್ಚು ಹುಟ್ಟಿಸುವದು ಕಷ್ಟವಾಗಿದೆ. ದರ ಇಳಿದ ಮಾಸದಿಂದ ಕೂಲಿ ಆಳುಗಳ ಸಂಬಳ ಇಳಿಯಲಿಲ್ಲ. ಕೂಲಿ ಆಳುಗಳಿಗೆ ಸಂಬಳ ಮುಂಚಿನಂತೆ ಎಣಿಸಿ ತೀರಬೇಕು. ಸಾಗುವಳಿಯೇ ಬೇಡವಾಗಿ ಸ್ವಸ್ಥ ಕೂತುಕೊಳ್ಳಲಿಕ್ಕೂ ಮನಸ್ಸು ಒಪ್ಪುವದಿಲ್ಲ; ಅಸಾಧ್ಯ ಮಾತು. ಬೇರೆ ಉದ್ದಿಮೆ ಏನಿದೆ? ವೈರಾಗ್ಯ ಕೊಂಡರೆ, ತೋಟಗಳು ಹಾಳುಬಿದ್ದು ಮುಂದೆ ಹೇರಳ ನಷ್ಟವಿದೆ. ಕಾರಣ ವರ್ಷಾಸನ ಗೈವಾಳಿಕೆ ನಡೆಯಲೇ ಬೇಕು. ಅದನ್ನು ನಡಿಸುವ ಬಗೆ ಹೇಗೆ? ಹೊಟ್ಟೆ ಹೊರಕೊಳ್ಳುವ ಬಗೆ ಹೇಗೆ? ಸಾಲದ ಬಡ್ಡಿ ತೆರುವದು ಹೇಗೆ? 'ಮುಂಚಿನಂತೆ ಈಗ ಸಾಲ ಹುಟ್ಟುವದಿಲ್ಲ. ಸಾಲ ತೆರಲು ಯಾ ಬಡ್ಡಿಯನ್ನಾದರೂ ತೆರಲು ಒತ್ತಾಯ. ಇಂಥ ಪ್ರಸಕ್ತಿಯಲ್ಲಿ ರೈತರು ಸಿಲುಕಿಕೊಂಡಿದ್ದಾರೆ. ಮೇಲಧಿಕಾರಿಗಳು ಮನಮುಟ್ಟಿ ಈ ಸ್ಥಿತಿಯ ವಿಚಾರ ಮಾಡಬೇಕು. ಸಂಪ್ರದಾಯದಂತೆ, ಕೆಳ ಅಧಿಕಾರಿಗಳಿಗೆ ಈ ವಿಷಯವನ್ನು ಒಪ್ಪಿಸಲಾಗದು. ಅಸಾಮಾನ್ಯ ಪರಿಸ್ಥಿತಿಯಿದು! ಅದನ್ನು ಪರಿಹರಿಸುವದಕ್ಕಾಗಿ ಅಸಾಮಾನ್ಯ ಕ್ರಮವನ್ನೇ ಕೈಕೊಳ್ಳತಕ್ಕದ್ದು; ಅಂದರೆ ಮಾತ್ರ ಅದರ ಪರಿಹಾರವಾಗಬಲ್ಲದು. ತೋಟಿಗರಂತೆಯೇ ಘಟ್ಟದ ಕೆಳಗಿನ ಇತರ ರೈತರದೂ ಸ್ಥಿತಿಯಾಗಿದೆ. ಆದರೆ, ತೋಟಿಗರ ಅವಸ್ಥೆ ವಿಶೇಷ ಕಂಗೆಟ್ಟಿದೆ. ಈ ಕುರಿತು ಕೆಲವು ಅಂಕಿಗಳನ್ನು ಕೊಟ್ಟು ಅವರ ಇಂದಿನ ಸ್ಥಿತಿಯ ವರ್ಣನೆ ಮಾಡಬಯಸುತ್ತೇವೆ. ಸರಕಾರಕ್ಕೆ ಅದರ ಪರಾಂಬರಿಕೆಯಿಂದ ಅವಶ್ಯವು[illegible] ಪರಿಹಾರ ಕಲ್ಪಿಸಲು ಅನುಕೂಲವಾಗುವದು. ಪ್ರಸ್ತಾವನೆಯಲ್ಲಿಯೇ ಇಂದಿನ ಲೇಖದ ವ್ಯಾಪ್ತಿಯು [illegible]ದ್ದರಿಂದ ಮುಂದಿನ ವಾರ ಅದನ್ನು ವರ್ಣಿಸುವೆ[illegible] ರಾಜ್ಯಾಧಿಕಾರಿಗಳು ಪರಾಂಬರಿಸಿ ಶೀಘ್ರವೇ [illegible]ರಿಗೆ ನೆರವಾಗಬೇಕಾಗಿ ಪ್ರಾರ್ಥನೆ.

येणार ! **येणार !!**

॥ श्री शंकर प्रसन्न ॥

बलवंत संगीत मंडळी.

येणार ! व आपले प्रयोग सुरु करणार !!

कुमठा— बलवंत थिएटरमधें.

सुरवातीचा खेळ !] शनिवार, ता. १०—१—१९३१ रोजीं रात्रौ ९॥ वाजतां—[सुरवातीचा खेळ !!

के. वासुदेव शास्त्री खरेकृत

अंक] उग्रमंगल. [१ ते ५.

तिकीटांचे दर :— रु. ५, ४, ३, २, १॥, १; ।॥।., -॥-. पांच वर्षांवरील मुलांस भर आकार.

व्यवस्थापक.

ಬರುವರು! **ಬರುವರು!!**

॥ಶ್ರೀ ಶಂಕರ ಪ್ರಸನ್ನ॥

ಬಲವಂತ ಸಂಗೀತ ಮಂಡಳಿ ಇವರು

ಬರುವರು! ಹಾಗು ತಮ್ಮ ಪ್ರಯೋಗಗಳನ್ನಾಡಿ ತೋರಿಸುವರು!!

ಮೊದಲನೇ ನಾಟಕ! **(ಮೊದಲನೇ ನಾಟಕ!!**

ಶನಿವಾರ ತಾ. ೧೦—೧—೧೯೩೧ನೇ ರಾತ್ರಿ ೯॥ ಘಂಟೆಗೆ—

ಕೈ। ವಾ। ಶ್ರೀ ವಾಸುದೇವ ಶಾಸ್ತ್ರಿ ಖರೇಕೃತ

ಅಂಕ] ಉಗ್ರಮಂಗಲ. [೧—೫.

ಟಿಕೀಟಿನ ದರ:— ರೂ. ೫, ೪, ೩, ೨, ೧॥, ೧; ।॥।., ।॥. ೫ ವರ್ಷದ ಮೇಲ್ಪಟ್ಟ ಮಕ್ಕಳಿಗೆ ಪೂರ್ಣ ಚಾರ್ಜ.

ವ್ಯವಸ್ಥಾಪಕ.

ದಿ ಬೋಂಬೆ ಲ್ಯಾಫ್ ಎಶ್ಯೂರೆನ್ಸ ಕಂಪೆನಿ ಲಿಮಿಟೆಡ್.

ಸ್ಥಾಪನೆ: 1908.

ಈ ಕಂಪನಿಯು ಪೂರ್ಣ ಹಿಂದೀ ಇದ್ದು, ಇದರ ಕಂತಿನ ದರಗಳೂ, ಶರ್ತುಗಳೂ ಬಹಳ ಸೋಯಿಯುಳ್ಳವು ಇವೆ.

ಕಂಪನಿಯ ಹಣವು ಸರಕಾರಿ ಪ್ರೊ. ನೋಟುಗಳಲ್ಲಿಯೂ, ಇಂಡಿಯನ್ ಟ್ರಸ್ಟ ಎಕ್ಟಿನ ನಿಯಮಗಳಂತೆ ಜವಾಬ್ದಾರಿಯ ಸೆಕ್ಯೂರಿಟಿಗಳಲ್ಲಿಯೂ ಇಡಲ್ಪಟ್ಟದೆ.

ಮಲ್ಟಿಪಲ್ ಬೆನಿಫಿಟ್ ಎಂಬ ಕಲಮು ವಿಮೆದಾರರಿಗೆ ಅತಿಶಯ ಲಾಭಕರವಾಗಿದೆ.

ಸವಿಸ್ತರ ಮಾಹಿತಿ ಸ್ಥಳಿಕ ಏಜಂಟರ ಕಡೆಗೆ ಅಥವಾ ಪತ್ರದ್ವಾರದಿಂದ ಕೆಳಗಿನ ವಿಳಾಸಕ್ಕೆ ಬರೆದಲ್ಲಿ ಸಿಗುವದು.

Kumta Agent:-
[illegible] NAYAK Esq.

K. Padmanabha Rao & Sons,
BELGAUM
Chief Agents for
Karnatak Districts & S. M. States.

☞ ಯೂನಿವ್ಹರ್ಸಲ್ ಮ್ಯುಚುಅಲ್ ಏಡ್ & ಪುವರ ಹೌಸಸ್ ಎಸೋಸಿಏಶನ್ ಮದ್ರಾಸ ಕಂಪನಿಯ ಡಿಶಂಬರ ಸೋಡ್ತಿ ಮುಂದರಿಯಿತು. ಸರ್ಟಿಫಿಕೇಟಿನ ಸೋಡ್ತಿ ಜನವರಿ ೧೫ನೇ ತಾರೀಖಿಗೆ: ಬೋಂಡುಗಳ ಸೋಡ್ತಿ ಫೆಬ್ರುವರಿ ೧೫ನೇ ತಾರೀಖಿಗೆ.

ಅಗ್ಗ !] [ಬಹಳ ಅಗ್ಗ !

ಶೆವರಲಟ್

ಮೋಟಾರ ಲೋರಿ!

೧ ಟನ್

ಅಗ್ಗವಾಗಿ ಸಿಗುವದು!

ಸ್ಥಳ-ವಿಳಾಸ:—
[illegible]. ಎಲ್. ಧಾಕಪ್ಪನವರ. ಹಿ.ಸಿ.

ಬಂಡಿಗಾಲಿಪರಿಷತ್ತು.

ಈ ಪರಿಷತ್ತಿನ ವಿಷಯ ಹೇಳತಕ್ಕಂಥಾದ್ದೊಂದು [illegible]ತೋಷವಿದೆ. ಪರಿಷತ್ತಿನಲ್ಲಿ ಏನಾದರೂ ನಿಷ್ಪನ್ನವಾಗಿದ್ದರೆ, ಹಿಂದ ಸ್ಥಾನದಲ್ಲಿ ಎಲ್ಲ ಕಾಯಿದೆಗಳನ್ನು [illegible] ಕಟ್ಟಲ್ಪಟ್ಟ [illegible] ಕೊಡದೆ ಜಾಹೀರ ಪಡಿಸುವ [illegible] ಬಂದಿರುತ್ತಿ [illegible] ಸರಕಾರವು [illegible] ಪ್ರಧಾನರಿಗೆ ತಂತಿ ಮಾಡಿದೆ. ಕಾರಣ [illegible] ಪ್ರಧಾನರು [illegible] ಧಿಕಾರಗಳನ್ನು [illegible] ವ್ಯಕ್ತರಾಗಿರುವಂತೆ [illegible] ಸರಕಾರದ [illegible] ಕೊಡುವ ವಿಚಾರವಿದೆ. ಇದೇ [illegible] ತಾರೀಖಿನೊಳಗೆ ಎಲ್ಲ [illegible] ಈ ಮೂರಿ [illegible] ಪಾರ್ಲಿಮೆಂಟಿನಲ್ಲಿ ಈ ಪರಿಷತ್ತಿನ ನಿರ್ಣಯಗಳು ಸಾದರವಾಗಬೇಕು. [illegible] ಒಲ್ಲ ತಿಳಿಯುವಂತಿದೆ

* * *

Wanted

to work on the permanent staff a graduate teacher strong in languages (English & Sanskrit). Pay, Provident Fund etc. as per sanctioned scale. Apply with testimonials sharp

Gibb High School
Kumta 3-1-1931

N S. Kamat.
Superintendent.

ತ್ವರೆಮಾಡಿರಿ! ತ್ವರೆಮಾಡಿರಿ!!

ವೇ।ಶಾ।ಸಂ। ಕೃಷ್ಣಶಾಸ್ತ್ರಿ ಉಪಾಧ್ಯೇ ಅಗೇರಕರ,

ಇವರಿಂದ ಗ್ರಹಲಾಘವೀಯ ಸೂಕ್ಷ್ಮಗಣಿತ ಪದ್ಧತಿಗನುಸಾರವಾಗಿ ತಯಾರಿಸಿದ

ಪ್ರಜಾಪತಿ ಸಂವತ್ಸರದ

ಪಂಚಾಂಗಗಳು.

ಇದೇ ತಾ ೧೦ ೧–೧೯೩೧ನೇಗೆ

ಮಾರಾಟಕ್ಕೆ ಸಿದ್ಧವಾಗುವವು.

☞ ಈ ಪಂಚಾಂಗದಲ್ಲಿ ಸಾಮಾನ್ಯ ಜನರಿಗೆ ತಿಳಿಯುವಂತೆ ಅನೇಕ ಜ್ಯೋತಿಷ ವಿಷಯಗಳೂ, ಉಪಯುಕ್ತ ಮಾಹಿತಿಯೂ ಕೊಡಲ್ಪಟ್ಟಿವೆ. ಕಾರಣ, ಅಪೇಕ್ಷೆಯುಳ್ಳವರು ಈ ಕೆಳಗೆ ಬರೆದವರ ಕಡೆಯಿಂದ ತರಿಸಿಕೊಳ್ಳಬಹುದು. ಬೆಲೆ ೧ಕ್ಕೆ ರೂ. ೦–೨–೦; ಡಜನಿಗೆ ರೂ. ೧–೬–೦, ೨೫ಕ್ಕೆ ರೂ. ೩ ೪–೦; ೫೦ಕ್ಕೆ ರೂ. ೬–೮–೦; ೧೦೦ಕ್ಕೆ ರೂ. ೧೨–೦–೦. ಟಪಾಲ ಖರ್ಚು ಪ್ರತ್ಯೇಕ. ವ್ಹಿ. ಪಿ. ಯಿಂದ ತರಿಸಿಕೊಳ್ಳುವವರು ಮುಂದಾಗಿ ಹಣ ರವಾನಿಸಬೇಕು. ಮುಂಗಡ ಹಣ ಕಳುವವರಿಗೆ ವಿಶೇಷ ಸವಲತ್ತು!

ಪತ್ತೆ:- ನಾರಾಯಣ ಗಣೇಶ ಮುಹಾಲೇ,
ಮೆನೇಜರ, ಶ್ರೀ ಗಜಾನನ ಪ್ರೆಸ್
ಅಂಕೋಲಾ

ಓಗಲೇ ಗ್ಲಾಸ ವರ್ಕ್ಸ, ಲಿಮಿಟೆಡ್.

(ಔಂಧ ಸ್ಟೇಟ) ಓಗಲೇವಾಡಿ.

ಜಿಲ್ಲಾ ಸಾತಾರಾ. (ಇಂಡಿಯಾ.)



ಈ ಕಾರಖಾನೆಯೊಳಗೆ ಪ್ರಭಾಕರ ಕಂದೀಲು, ಪ್ರಭಾಕರ ಟಿನ್ ಕಂದೀಲು, ಅನೇಕ ತರದ ಬತ್ತಾಳಿಯ ಟೇಬಲ್ ಲ್ಯಾಂಪ್, ಹಂಗಿಂಗ್ ಲ್ಯಾಂಪ್, ಕಾಜಿನ ಭರಣಿಗಳು, ಮಂಗಳೂರ ಮಾದರಿಯ ಕಾಜಿನ ಹಂಚುಗಳು, ಗ್ಯಾಸ ದೀಪಕ್ಕೆ ಹಚ್ಚುವ ಅನೇಕ ತರದ ಗ್ಲೋಬುಗಳು, ಪೇಪರ ವೇಟ್ (ಗಾಳಿಯಿಂದ ಹಾರಿಹೋಗಬಾರದೆಂದು ಕಾಗದಗಳ ಮೇಲಿಡುವ ಕಾಜಿನ ಗುಂಡು) ಮಸಿದೌತಿಗಳು, ದೀಪಕ್ಕೆ ಹಚ್ಚುವ ಎಲ್ಲ ತರದ ಗ್ಲಾಸನಳಿಗೆಗಳು, ಅನೇಕ ತರದ ಕಾಜಿನ ತಂಬಿಗೆ, ನೀರು ಕುಡಿಯುವ ಗ್ಲಾಸು, ಚಿಣ್ಣಿ-ಉಪ್ಪು-ಉಪ್ಪಿನಕಾಯಿ ಇಡುವ ಪಾತ್ರೆ, ಮೊದಲಾದ ತರತರದ ಬಣ್ಣದ ಸಾಮಾನುಗಳನ್ನು ದೊಡ್ಡ ಪ್ರಮಾಣದಿಂದ ಯಾವತ್ತೂ ವ್ಯಾಪಾರಸ್ಥರಿಗೆ ಅವರವರ ಆರ್ಡರುಗಳಂತೆ ಯೋಗ್ಯ ವೇಳೆಗೆ ಪೂರೈಸಿಕೊಡಲ್ಪಡುವವು.

ಏಜಂಟ, ಖಾದಿ ಮುಲ್ಲಾ,
ಕಾರವಾರ.

ಒಂದೇ ಸವನಾಗಿ ಮೂವತ್ತು ವರ್ಷದ ಅನುಭವದಿಂದ ಹಿಂದುಸ್ಥಾನದ ಸಾವಿರಾರು ಜನರಿಂದ ವರ್ಣಿಸಲ್ಪಟ್ಟ ಆಯುರ್ವೇದೋಕ್ತ

ಸಾಜಾ ಮತ್ತು ಪೌಷ್ಟಿಕ ವನಸ್ಪತಿಗಳಿಂದ ತಯಾರಿಸಿದ ಮತ್ತು ಇದರ ಗುಣಕ್ಕಾಗಿ ಅನೇಕ ಸರ್ಟಿಫಿಕೇಟಗಳು ಮತ್ತು ಬಂಗಾರದ ಮೆಡಲು ದೊರೆತಿರುವ ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ ಜಗತ್ಪ್ರಸಿದ್ಧ

ದ್ರಾಕ್ಷಾಮೃತವು.

ಈ ದ್ರಾಕ್ಷಾಮೃತವು ಸಹ್ಯಾದ್ರಿ ಪರ್ವತದಲ್ಲಿರುವ ಅನೇಕ ವನಸ್ಪತಿಗಳ ರಸಾರ್ಕಗಳೊಂದಿಗೆ ದ್ರಾಕ್ಷಾರಸವನ್ನು ಮಿಶ್ರಮಾಡಿ ಸ್ವದೇಶೀ ಯಂತ್ರದಿಂದ ಶಾಸ್ತ್ರೋಕ್ತ ಪದ್ಧತಿ ಪ್ರಕಾರ ತಯಾರ ಮಾಡಿರುವದರಿಂದ ಸ್ವಾದಿಷ್ಟವೂ ಮಧುರವೂ ಆಗಿದೆ

ಇದರ ಸೇವನೆಯಿಂದ ಶರೀರದೊಳಗಿನ ಹಳೇ ಕಡಕಿ (ಗರಮಿ) ಸಂಪೂರ್ಣ ನಾಶವಾಗುತ್ತದೆ. ಸತ್ತ ಧಾತುಸ್ರಾವ ಸ್ವಪ್ನಾವಸ್ಥೆಯಿಂದ ಅಥವಾ ಬೇರೆ ಯಾವದೇ ವಿಕಾರದಿಂದ ಬಂದ ಅಶಕ್ತತೆಯಿಂದ ಕೈಕಾಲು ಕಣ್ಣೊಳಗೆ ಉರುಪುರಿಯೇಳೋಣ, ಮೈಯಾಗಲೂ ಎಲುಬಿನಲ್ಲಿ ಜ್ವರಇರೋಣ, ನಡನೋವೋಣ, ಪಿತ್ತದಿಂದ ಕಣ್ಣಿಗೆ ಕತ್ತಲಿ ಬಂದು ಭೋವಳಿಕೆಬರೋಣ, ಶೌಚಕ್ಕೆ ಸಾಫ ಆಗದೇ ಇರೋಣ, ಮುಂತಾದ ಎಲ್ಲ ವಿಕಾರಗಳು ನಷ್ಟವಾಗಿ ಕ್ಷುಧಾಗ್ನಿಯು ಬೆಳೆಯುತ್ತದೆ. ಮತ್ತು ಅನ್ನ ಚನ್ನಾಗಿ ಪಚನವಾಗಿ ಶೌಚಕ್ಕೆ ಸಾಫವಾಗುತ್ತದೆ. ಇದರ ಸೇವನೆಯಿಂದ ತರುಣರಿಗೆ ವ್ಯಭಿಚಾರದಿಂದ ಅಥವಾ ಬೇರೆ ಕಾರಣದಿಂದ ಬಂದ ಧಾತುಕ್ಷೀಣತೆ, ನಪುಂಸಕತ್ವ ಇದ್ದರೆ ಅದು ಹೋಗಿ ಪು. ಯೌವನವಂತರಾಗಿ ಶರೀರ ಬಲವಾಗಿ ಮಕ್ಕಳು ಪುಷ್ಟಿವಂತರಾಗುವರು. ಹೆಂಗಸರಿಗೂ ಮತ್ತು ಮಕ್ಕಳಿಗೂ ಈ ಔಷಧವು ಗುಣಕಾರಿ ಇದೆ. ಮುಟ್ಟಾಗದಿದ್ದರೂ ಮತ್ತು ಉಷ್ಣದ ಗರ್ಭಸಂಬಂಧವಾದ ರೋಗಗಳಿದ್ದರೂ ಅವೆಲ್ಲ ಗುಣವಾಗಿ ಹೆಂಗಸರಿಗೆ ಸಂತತಿ ವೃದ್ಧಿಯಾಗುವದು. ಅಶಕ್ತ ಹುಡುಗರು ಬಲವಂತರಾಗುವರು. ಈ ಔಷಧದ ಮೂರು ಬಾಟ್ಲಿಗಳನ್ನು ಸೇವನೆ ಮಾಡಿದರೆ ಪೂರ್ಣ ಗುಣಬರುತ್ತದೆ. ಇದರ ಅನುಭವ ೧ ಬಾಟ್ಲಿ ಸೇವನೆ ಮಾಡಿದ ನಂತರ ತಿಳಿದೀತು. ೧ ಬಾಟ್ಲಿ ಬೆಲೆ ೧–೪–೦, ೩ ಬಾಟ್ಲಿಗೆ ೩–೪ ೦, ಒಂದು ಡಜನ ಬಾಟ್ಲಿಗೆ ೧೧–೦ ‑೦, ಪಟ್ಟಿಗೆ ೧ ಡಜನ್ ತೆಗೆದುಕೊಂಡರೆ ೧ ಬಾಟ್ಲಿ ಕಮಿಶನ ಕೊಡತಕ್ಕದ್ದು. ಟಪಾಲ ಖರ್ಚು ಪ್ರೋಸ್ಟೇಜ ಬೇರೆ ಬೀಳುತ್ತದೆ

ಎಜಂಟರ ಮೂಲಕ ೧ ಬಾಟ್ಲಿಗೆ ೧–೪–೦, ೩ ಬಾಟ್ಲಿಗೆ ೩–೮–೦ ಮಾತ್ರ. ತ. ೧೨ ರೂಪಾಯಿ.

ಮ್ಯಾನೇಜರ, **ದ್ರಾಕ್ಷಾಮೃತ ಕಾರ್ಯಾಲಯ, ಪೋ. ನಿಪ್ಪಾಣಿ,** (ಜಿಲ್ಲಾ ಬೆಳಗಾವಿ)

ಪ್ರಸಿದ್ಧ ಕೆಮಿಸ್ಟ ಮತ್ತು ಸ್ಟೋಅರ್ಸದೊಳಗೆ ಮತ್ತು ಕಿರಾಣಿ ಅಂಗಡಿಯಲ್ಲಿ ಸಿಗುವದು.

☞ ಕುಮಟಾ ಏಜಂಟ:— **ನ್ಯೂ ಸಪ್ಲಾಯ ಏಜನ್ಸಿ.**

ಸ್ವದೇಶೀ ಕಾರಖಾನದಾರರಿಗೆ—

ನೀವು ತಯಾರಿಸಿದ ಸರಕಿನ ಮೇಲೆ ಜಾಹೀರಾತು, ದಲಾಲಿ ಮೊದಲಾದ ಖರ್ಚು [illegible] ಗಿರಾಕಿಗಳಿಗೆ ಯೋಗ್ಯ ಬೆಲೆಗೆ ಸರಕು ಸಿಗಬೇಕೆಂದು ನಿಮಗೆ ತೋರುತ್ತಿದ್ದರೆ,

"ದಿ ಆಲ್-ಇಂಡಿಯಾ ಸ್ವದೇಶೀ ಮೆನ್ಯುಫೆಕ್ಚರರ್ಸ ಓನ ಸ್ಟೋರ್ಸ" ಮುಂಬಯಿ [illegible]

ಇವರ ಕಡೆ ಹೆಸರುಗಳನ್ನು ನೋಂದ ಮಾಡಿರಿ. ಮತ್ತು [illegible]

[illegible] ಕೆಚ ನ ಮಾಹಿತಿಬಗ್ಗೆ— ಇಂಗಿ [illegible]

ಸತ್ಯಾಗ್ರಹದ ವಾರ್ತೆ.

(೬ನೇ ಪುಟದಿಂದ ಮುಂದುವರಿಸಿದ್ದು.)

ಡಲೆ, ಅಲ್ಲಿಯ ಜನರು ಮಿಷ್ಟಾನ್ನ ಭೋಜನ ಮಾಡಿದರು, ಬಹು ಸಂತೋಷಭರಿತರಾದರು. ಬೋಚಾಸನ್, ದಾಬಿ, ಖಾನಪುರ, ಸೈಜಪುರ ಮೊದಲಾದ ೧೭ ಗ್ರಾಮಗಳೊಳಗಿನ ಬರಿಯಾ ಜಾತಿಯ ಪರ, ಸಭೆಸೇರಿ ಪಟಿದಾರರೊಡನೆ ರಾಷ್ಟ್ರಕೆಲಸ ಮಾಡುವ ನಿರ್ಧಾರ ಮಾಡಿದ್ದಾರೆ. ಜಲೋಲ ತಾಲೂಕಿನ ಓರಿಯಾ ಜನರು ಸಭೆಸೇರಿ ಕರನಿರಾಕರಣೆಯ ಠರಾವು ಮಾಡಿದ್ದಾರೆ. ಸರಕಾರಕ್ಕೆ ಯಾವದೇ ಪ್ರಕಾರದ ಸಹಾಯ ಮಾಡಬಾರದಾಗಿಯೂ ಠರಾವಾಗಿದೆ. ಮದ್ಯ ಕುಡಿಯಬಾರದಾಗಿಯೂ ಠರಾವಾಗಿದೆ. ಇದನ್ನು ಮೀರುವವರ ಮೇಲೆ ಬಹಿಷ್ಕಾರ ಹಾಕಬೇಕಾಗಿಯೂ ಠರಾವು ಸುಮಾರು ೧೦೦೦ ಖಾತೆದಾರರು ಸಭೆಸೇರಿದ್ದರು.

ಬೋರಸದ ತಾಲೂಕಿನ ಸುನಾವ ಗ್ರಾಮದಲ್ಲಿ ಸುಮಾರು ೮೦೦೦ ರೂಪಾಯಿಗಳ ಸಂಖ್ಯೆ ಕಿಸ್ತಿತ್ತು. ಅದರಿಂದ ಸುಮಾರು ೧-೧॥ ಸಾವಿರ ರೂಪಾಯಿ ಪ್ರಾಪ್ತಿ. ಬಾರ್ದೋಲಿ ಸೇವಾಶ್ರಮದ ಅಡಿಗೆ ಪಾತ್ರೆಗಳನ್ನು ಜಪ್ತರೂ ಕೊಳ್ಳಲಿಲ್ಲ. ಜಪ್ತ ಮುಕಲ್ಯಾನ ಖಾನಾವಳಿಯವನು ಬಹಳ ಮನವೊಲಿಸಿದ ಬಳಿಕ, ಕೊಂಡು ಕೊಂಡನು. ಈ ತಾಲೂಕಿನ ರಾಸ ಗ್ರಾಮದಲ್ಲಿ ರಾ| ಸೋಮಾಭಾಯಿ ಪರಸೀಭಾಯಿರವರು ತೀರ್ವೆ ಕೊಡದೆ ಬೆಳೆ ಕೊಯ್ದರು ಮಾಮಲೇದಾರರು ಬಂದು "೨ ವರ್ಷ ಶಿಕ್ಷೆ ಕೊಡುತ್ತೇನೆ; ೩ ವರ್ಷಗಳ ಶಿಕ್ಷೆ ಕೊಡುತ್ತೇನೆ; ಎಂಬದಾಗಿ ಹೆದರಿಸಿದರು. "ಬೇಕಾದ್ದನ್ನು ಮಾಡಿರಿ; ನಮಗೆ ಕೊಟ್ಟಿರಿ; ನಿಮಗೆ ೧ ಪೈ ತೀರ್ವೆ ಸಿಗಲಿಕ್ಕಿಲ್ಲ." ಅವರಿಗೆ ಬೋರಸದಕ್ಕೆ ಒಯ್ದು ಕೆಲ ಕಾಲ ಇಟ್ಟುಕೊಂಡು ಬಿಟ್ಟರು. ಬೋರಸದ ಕಚೇರಿಯಿಂದ ಪ್ರಾಥಮಿಕ ಶಿಕ್ಷಕರಿಗೆ ೩ ತಿಂಗಳ ಪಗಾರ ಸಲ್ಲುವದಿತ್ತು. ಅದನ್ನು ಕೊಂಡು ಬೋಧೀಣ ಶಿಪಾಯಿಯು ಬಟವಡೆಗೆ ಹೋಗುತ್ತಿದ್ದನು. ಅವನ ಜೊತೆಗೆ ಜಪ್ತಿ ಆಫೀಸರರು ಶಾಲೆಗಳಿಗೆ ಮೋಟಾರಾರೂಢರಾಗಿ ಹೋಗಿ ರೂ. ೧೪೯ನ್ನು ಇಸಕೊಂಡರು. ಶಿಕ್ಷಕರು ಇದನ್ನು ನಿಷೇಧಿಸಲು, "ನಾನೇ ಸಾಹೇಬ; ನೀವು ಯಾಕೆ ಆಕ್ಷೇಪ ಮಾಡುತ್ತೀರಿ; ಡೆಪ್ಯುಟಿ ಇನ್ಸಪೆಕ್ಟರರ ಕಡೆಯಿಂದ ನಾನು ಹುಕುಮ ತರಿಸಿದ್ದೇನೆ; ಬೋರಸದದಲ್ಲಿ ಉಂಟು. ಬೋರಸದಕ್ಕೆ ಬನ್ನಿ, ನಾನು ತೋರಿಸುತ್ತೇನೆ" ಹೀಗೆ ಅವರು ಹೇಳಿದರು. ಈ ಶಿಕ್ಷಕರೆಲ್ಲರು ಹಿಂದು ಭೂಮಿಯ ಪಾಲುಗಾರರಿದ್ದಾರೆ. ದೇವಳ ಗ್ರಾಮದ ಶಹಾ ಮೋತಿಲಾಲ ರಾಯಚಂದ್ರರವರು ತೀರ್ವೆ ಕೊಟ್ಟಿದ್ದಿಲ್ಲ. ಅವರು ಹೆಂಡತಿಯ ಅಸ್ವಾಸ್ಥ್ಯದ ಮೂಲಕ ಆಸ್ಪತ್ರೆಗೆ ಉಪಚಾರಕ್ಕಾಗಿ ಹೋಗಿದ್ದರು. ಮಾಮಲೇದಾರರು ಅಲ್ಲಿ ಹೋಗಿ ಆಸ್ಪತ್ರೆಯ ಕರಡಿಯಲ್ಲಿಟ್ಟ ೭೦ ರೂಪಾಯಿಗಳೊಳಗಿಂದ ತೀರ್ವೆಯ ರಕಮನ್ನು ಪಡೆಕೊಂಡು ಮರಳಿದರು.

ಪುಣೆಯ ಕ್ರಿಸ್ತ ಸೇವಾ ಸಂಘದ ಫಾದರ ಎಲ್ವಿನ್ ಖಾನ ಸ್ವಾಮಿ ಸತ್ಯಾನಂದರವರೂ, ದಿವಾಣ ಬಹಾದ್ದೂರ ಹರಿಲಾಲ ದೇಸಾಯಿಯವರೂ, ಶ್ರೀ| ಭಾಯಿ ಸಾಯಿಯವರೂ ಖೇಡಾ-ಸುರತ ಜಿಲ್ಲೆಗಳಲ್ಲಿ ನಡೆದ ವಿವಿಧ ಪ್ರಕಾರದ ಅತ್ಯಾ [illegible] ಕಂಡು ಮರಳಿದ್ದಾರೆ. ಸ್ವಾಮಿ ಸತ್ಯಾನಂದರವರು ಸತ್ಯಾನ್ವೇಷಣಕ್ಕಾಗಿ ಬಹಳ ಪರಿಶ್ರಮಪಟ್ಟಿದ್ದಾರೆ ದಿವಾಣ ಬಹಾದ್ದೂರ ಹರಿಲಾಲ ಭಾಯಿ ದೇಸಾಯಿಯವರು ಒಕ್ಕಲಿಗರಿಗೆ ಅತ್ತ ಇತ್ತ ಸವಾಲು ಮಾಡಿ ಸತ್ಯಸ್ಥಿತಿಯನ್ನು ತಿಳಕೊಂಡರು.

ಧೋಲಕಾ ತಾಲೂಕಿನಲ್ಲಿ ಪೋಲೀಸ ಆಫೀಸರರು ಒಕ್ಕಲಿಗರಿಗೆ ತೀರ್ವೆ ಕೊಡಲು ಪರಿಪರಿಯಿಂದ ಮನವೊಲಿಸುತ್ತಾರೆ. ರಾಷ್ಟ್ರೀಯ ಸಭೆಯ ಸ್ವಯಂಸೇವಕರಿಗೆ ಆಶ್ರಯ ಕೊಡಬಾರದಾಗಿಯೂ ಎಚ್ಚರಿಕೆ ಕೊಡುತ್ತಿದ್ದಾರೆ. ಸುರತ ಜಿಲ್ಲೆಯ ಕರಾಡಿ-ಮಾತವಡ ಗ್ರಾಮದಲ್ಲಿ ಉಪ್ಪಿನ ಕಾಯದೆ ಭಂಗಕ್ಕೆ ಪ್ರಾರಂಭವಾಗಿದೆ.

ಗಾಂಧಿ ಉಪ್ಪನ್ನು ಅಲ್ಲಲ್ಲಿ ಬೆಳೆಸಿ ಮಾರುತ್ತಿದ್ದಾರೆ. ಕರಾಡಿ ಆಶ್ರಮದ ಶ್ರೀ| ವಿನಾಯಕರಾವ ಆಠಲೇಯವರು ಉಪ್ಪಿನ ಕಾಯದೆಭಂಗ ಮಾಡಲು ಉತ್ತೇಜನಕೊಟ್ಟ ಬಗ್ಗೆ ಅವರಿಗೆ ೬ ತಿಂಗಳ ಶಿಕ್ಷೆ. ಅವರನ್ನು ನೋಡಲು ಅವರ ಪತ್ನಿ ಸೌ| ಶಾರದಾಬಾಯಿಯವರು ಕೋರ್ಟಿಗೆ ಹೋಗಿದ್ದರು. ಅಲ್ಲಿ ಅವರಿಗೆ ಸರೆಹಿಡಿದಿದ್ದಾರೆ ಉಪ್ಪಿನ ಕಾಯದೆ ಭಂಗ ಮಾಡಲು ಅವರ ಉತ್ತೇಜನ ಕೊಟ್ಟರೆಂಬ ಆರೋಪ. ಮಹಾತ್ಮರ ಮಗಂದಿರಾದ ಶ್ರೀ| ರಾಮದಾಸ ಗಾಂಧಿಯವರನ್ನೂ ಸರೆಹಿಡಿದಿದ್ದಾರೆ.

ಸುರತದಲ್ಲಿ ವಾನರ ಸೇನೆಯ ಪರಿಷತ್ತಾಯಿತು. ಮುಂಬಯಿಯ ಸೌ| ಹಂಸಾ ಮೇಹತಾರವರು ಅಧ್ಯಕ್ಷರಿದ್ದರು. ರಾಷ್ಟ್ರೀಯ ಸಭೆಗೆ ಸರ್ವ ಪ್ರಕಾರದಿಂದಲೂ ನೆರವಾಗಬೇಕೆಂಬ ಠರಾವುಗಳಾಗಿವೆ.

ಬೋರಸದ ತಾಲೂಕಿನಲ್ಲಿ ಕಳವು, ದರೋಡೆ, ಲೂಟಿ, ಹೊಡತ-ಬಡತ ಮುಂತಾದ ಪ್ರಕಾರಗಳು ಎಂದಿನಂತೆ ಘಟಿಸುತ್ತಿವೆ. ನಡಿಯಾದ ತಾಲೂಕಿನ ಝುರಿ-ಪೇರಾಪುರ ತಹಶಿಲಿನಲ್ಲಿ ಪೋಲೀಸರು ದಾಳಿ ಮಾಡಿ ಸ್ವಯಂಸೇವಕ ದಳದ ಅಧಿಪತಿಗಳಾದ ಪಂಡಿತ ಶಿವರಾಮ ಪಂಡೇಯವರ ಮನೆಯ ಮೇಲೆ ಸಾಗಿಹೋದರು. ಪಂಡಿತಜೀಯವರು ಆ ಕಾಲದಲ್ಲಿ ಅಲ್ಲಿರಲಿಲ್ಲ. ಹೆಂಗಸರು-ಮಕ್ಕಳಿದ್ದರು. ತಮ್ಮ ಮನೆಗೆ ಬಂದ ಸುದ್ದಿ ತಿಳಿದೊಡನೆ ಪಂಡೇಯವರು ಪೋಲೀಸರಿಗೆ ಹೇಳಿ ಕಳುಹಿದರು. ಗ್ರಾಮಕ್ಕೆ ಹೋಗಿ ಅವರಿಗೆ ಸರೆಹಿಡಿದರು ಇಲ್ಲೊಂದು ವಾನರ ಮೆರವಣಿಗೆಯಾಯಿತು. ಮೆರವಣಿಗೆ ಹೊರಡಿಸಬಾರದಾಗಿ ಪೋಲೀಸರು ಹೇಳಿ ಹಿಂದು ಮೆರವಣಿಗೆಯನ್ನು ಸರೆಹಿಡಿದು ಮುಂಜಾಗ್ರತೆ ಕೊಟ್ಟು ಬಿಟ್ಟರು. ವಾನರರು ಇನ್ನೊಂದು ಮೆರವಣಿಗೆ ಹೊರಡಿಸಿದರು. ಅದಕ್ಕೆ ಪೋಲೀಸರು ಅಡ್ಡಗಟ್ಟಲಿಲ್ಲ. ನಡಿಯಾದ ತಾಲೂಕಿಗೆ ೪॥ ಲಕ್ಷ ರೂಪಾಯಿ ತೀರ್ವೆಯಿದೆ; ಅದರೊಳಗೆ ರೂ. ೨೨॥ ಸಾವಿರ ತೀರ್ವೆ ಮಾತ್ರ ವಸೂಲಾಗಿದೆ. ಕೇರಿಯಾವಿ ಗ್ರಾಮದ ೫॥ ಸಾವಿರ ರೂಪಾಯಿ ತೀರ್ವೆಯಲ್ಲಿ ಬರೇ ೩೬ ರೂಪಾಯಿ ತೀರ್ವೆ ವಸೂಲ! ೬ ರೂಪಾಯಿ ವಸೂಲಾಗಬೇಕಾದರೆ, ಮೂವರಿಗೆ ಹಗ್ಗದಿಂದ ಬಿಗಿದು ಕಟ್ಟಿ ಹೊಡೆಯಬೇಕಾಯಿತು. ತಲೆಗೆ ೨ ರೂಪಾಯಿಗಳಂತೆ ಆ ಮೇಲೆ ಅವರು ಕೊಟ್ಟರು.

ಪಂಚಮಹಾಲ ಜಿಲ್ಲೆಯಲ್ಲಿ ಕರ ನಿರಾಕರಣೆಯ ಉಪಕ್ರಮವಾಗಿದೆ. ಪ್ರಮುಖರು ಜನರಿಗೆ ಕರ ನಿರಾಕರಣೆಯಿಂದೊದಗುವ ಕಷ್ಟಗಳನ್ನೆಲ್ಲ ಊರೂರು ಸಂಚರಿಸಿ ತಿಳಿಸಿ ಹೇಳುತ್ತಿದ್ದಾರೆ. ಸರದಾರ ವಲ್ಲಭಭಾಯಿ ಪಟೇಲರಿಗೆ ಸರೆಹಿಡಿದ ಬಗ್ಗೆ ಗುಜರಾಥದಲ್ಲಿ ೧೦೦೦ ಜನರು ಸೆರೆಮನೆ ಸೇರಲು ತಯಾರಾಗಿದ್ದಾರೆ. ಇವರು ಉಪ್ಪಿನ ಕಾಯದೆ ಭಂಗ ಮಾಡುವರು. ಸರ್ವಾಧಿಪತಿಗಳು ಹೊರಡಿಸಿದ ಶಾಸನಗಳನ್ನು ಉಲ್ಲಂಘಿಸುವರಂತೆ. ಬೋರಸದ ಮಾಮಲೇದಾರರಾದ ಮಿ| ಮೋಹನಲಾಲ ಶಹಾರವರಿಗೆ ಬಿಜಾಪುರಕ್ಕೆ ವರ್ಗವಾಯಿತು; ಖೇಡಾ ಜಿಲ್ಲೆಯ ಕಲೆಕ್ಟರರಾದ ಮಿ| ಮಾಸ್ಟರರವರಿಗೆ ಪುಣೆಗೆ ವರ್ಗವಾಗಿದೆ.

ಮುಂಬಯಿಯೊಳಗೆ.

ಮುಂಬಯಿಯೊಳಗಿನ ವೃತ್ತಾಂತವನ್ನು ವರ್ಣಿಸಲಸದಳ. ಸರಕಾರಕ್ಕೂ, ರಾಷ್ಟ್ರೀಯ ಸಭೆಯ ಯುದ್ಧ ಮಂಡಳದವರಿಗೂ ಕಡುತರವಾದ ಕದನ ನಡೆದಿದೆ. ಕಳೆದ ವಾರ ಎರಡಾವರ್ತಿ ಇಂಥ ಪ್ರಸಂಗಗಳೊದಗಿದವು. ಆಜೆ ರವಿವಾರ ಮಾಸಿಕ ಝೆಂಡಾ ವಂದನ; ಅದು ಆಗಬಾರದೆಂದು ಪೋಲೀಸ ಕಮಿಶನರರ ಹುಕುಮು. ಯುದ್ಧ ಮಂಡಳದವರು ಅದನ್ನು ಉಲ್ಲಂಘಿಸಿ ಮುಂಜಾವು ೭ ಘಂಟೆಗೆ ಧ್ವಜವಂದನ ಸಮಾರಂಭವನ್ನು ನೆರವೇರಿಸಿದರು. "ಝೆಂಡಾ ಊಂಚಾ ರಹೇ ಹಮಾರಾ" ಎಂಬ ಹಾಡಿ ಪದ್ಯ ಸೌ| ಸ್ನೇಹಲತಾ ಹಜರತ್‌ರವರು ಧ್ವಜವನ್ನೇರಿಸಿ ವಂದನ ಮಾಡಿದರು. ಆ ಧ್ವಜವೇರಿದ್ದೇ ತಡ; ಸಾವಿರಾರು ಧ್ವಜಗಳು ಸುತ್ತು ಮುತ್ತು ಫಕ್ಕನೆ ಗೋಚರವಾದವು. ಪೋಲೀಸರು ಯುದ್ಧ ಮಂಡಳವನ್ನು ಸರೆಹಿಡಿದರು. ದೊಣ್ಣೆಯಿಂದ ಹೊಡೆದು ಸಭೆ ಚದರಿಸಲಾರಂಭಿಸಿದರು. ಯಾರೋ ಅಧಮರು ಪೋಲೀಸರಿಗೆ ಕಲ್ಲಿನಿಂದ ಹೊಡೆದರು. ಪೋಲೀಸರು ಪ್ರತಿಯಾಗಿ ಕಲ್ಲುಗುಂಡುಗಳಿಂದಲೂ, ದೊಣ್ಣೆಗಳಿಂದಲೂ ಹೊಡೆದರು ವಿವೇಕ ತೊರೆದು ಸಿಕ್ಕಾಗೆ ಹೊಡೆದರು. ಮುಂಬಯಿ 'ಟೈಮ್ಸ' ಪತ್ರಿಕೆಯ ಫೋಟೋಗ್ರಾಫರರಿಗೂ ಪೋಲೀಸರು ಹೊಡೆದರು. "ನಿನಗೆ ಇಲ್ಲಿ ಕೆಲಸಮಾಡುವ ಕಾರಣವಿಲ್ಲ" ಎಂಬದಾಗಿ ಹೇಳಿ ಹೊಡೆದರು ಸುಮಾರು ೨೬೦ ಮಂದಿಗಳಿಗೆ ಘಾಯಗಳಾಗಿವೆ. ಸೌ| ಸ್ನೇಹಲತಾ ಹಜರತ್ತಾದಿ ಯುದ್ಧಮಂಡಳದವರ ಖಟ್ಲೆಯು ವಿಚಾರವಾಯಿತು. ಮೆಜಿಸ್ಟ್ರೇಟರು ಸೌಭಾಗ್ಯವತಿಯವರಿಗೆ ಯುದ್ಧಮಂಡಳದಿಂದ ಅಲಿಪ್ತರಾಗಲೊಪ್ಪುತ್ತೀರೇನೆಂದು ಕೇಳಲು, "ಇದು ನಮ್ಮ ಜೀವನದ ಸಿದ್ಧಿಯೇ" ಯಾಗಿದೆಂದು ಉದ್ಗರಿಸಿದರು. ಅದನ್ನು ತಾವು ಬಿಡೆವೆಂದೂ ನುಡಿದರು "ನೀವು ಬಚಾವಿನ ಸಾಕ್ಷಿ ಕೊಡುವದಿರುವದೇನು?" ಎಂದು ಮೆಜಿಸ್ಟ್ರೇಟರು ಕೇಳಿದಕ್ಕೆ 'ಛೇ! ನಾವು ಶಿಕ್ಷೆ ಕೇಳಲು ಇಲ್ಲಿ ನಿಂತುಕೊಂಡಿದ್ದೇವೆ,' ಎಂದರು. ಫಿರ್ಯಾದಿಯ ಸಾಕ್ಷಿಗಾರರಿಗೆ ಅಡ್ಡ ಸವಾಲು ಮಾಡುತ್ತೀರೇನೆಂದು ಕೇಳಿದ್ದಕ್ಕೆ "ಈ ಕೋರ್ಟೇ ಬೇಕಾಯಿದೇಶೀರ ಅದೆ; ಇಲ್ಲಿ ನ್ಯಾಯ ಸಿಗುವ ಆಶೆ ಇಲ್ಲ" ಎಂಬದಾಗಿ ನುಡಿದರು. ಮೆಜಿಸ್ಟ್ರೇಟರು ತೀರ್ಪು ಬರೆಯಲಾರಂಭಿಸಿದರು. ಆಗ ಸೌ| ಸ್ನೇಹಲತೆಯವರ ೫ ವರ್ಷದ ಚಿಕ್ಕ ಬಾಲಕನು ತಾಯಿಗೆ ಮುಟ್ಟಿದನು. ಸ್ನೇಹಲತೆಯವರು ಮಗನಿಗೆ ತೊಡೆಯ ಮೇಲೆ ಕೊಂಡು ಅಪ್ಪಿ ಮುದ್ದಿಟ್ಟು ಸಮಾಧಾನಮಾಡಿ ಕಳುಹಿದರು. ತಾಯಿ ಬೇಗನೇ ಬರುವಳೆಂಬ ಸಮಾಧಾನದಿಂದ ಆತನು ಹೋದನು. ಎಲ್ಲರಿಗೆ ವಾಡಿಕೆಯಂತೆ ೬—೬ ತಿಂಗಳ ಸಜೆ ವಿಧಿಸಲ್ಪಟ್ಟಿತು. ಡಿಸೆಂಬರ ೩೧ನೇ ತಾರೀಖಿನ ಮಧ್ಯರಾತ್ರಿ ಮುಂಬಯಿಯಲ್ಲಿ ಬಹು ದೊಡ್ಡ ಗಲಾಟೆ. ಹೇಳಲಾಗದಷ್ಟು ದೊಡ್ಡ ಗಲಾಟೆ.

ಸರಿಯಾಗಿ ೧ ವರ್ಷದ ಹಿಂದೆ ಲಾಹೋರಿನಲ್ಲಿ ಈ ಸಮಯ ರಾಷ್ಟ್ರೀಯ ಸಭೆಯ ಅಧ್ಯಕ್ಷರಾದ ಪಂಡಿತ ಜವಾಹಿರಲಾಲ ನೆಹರೂರವರು ಸ್ವಾತಂತ್ರ್ಯಧ್ವಜವನ್ನೇರಿಸಿದ್ದರ ಸ್ಮರಣಾರ್ಥ ಯುದ್ಧಮಂಡಳದವರು ಮುಂಬಯಿಯಲ್ಲಿ ಪ್ರಚಂಡ ಮೆರವಣಿಗೆಗಳನ್ನೂ, ಸಭೆಗಳನ್ನೂ ಸೇರಿಸಿದರು. ೫೯ ಕಡೆ ಸಭೆಗಳಾದವು; ಅಷ್ಟೇ ಮೆರವಣಿಗೆಗಳಾದವು. ಪೋಲೀಸರು ಸಭೆ ಸೇರಿಸಗೊಡಬಾರದೆಂಬುದಕ್ಕೆ ೪೦೦೦ ರಕ್ಷಕರು ತಯಾರಾಗಿದ್ದರು. ಆದಾಗ್ಯೂ ಸಭೆ ಸೇರಿದವು; ಧ್ವಜಾರೋಹಣವಾಯಿತು. ಸ್ವಾತಂತ್ರ್ಯದ ಠರಾವು ಮನ್ನಿಸಲ್ಪಟ್ಟಿತು. ಲಕ್ಷಾವಧಿ ಜನರು ಸಭೆಗೆ ಬಂದಿದ್ದರು. ಅನೇಕರಿಗೆ ಪೋಲೀಸರು ದೊಣ್ಣೆಯಿಂದ ಹೊಡೆದು ಗಾಯಗೊಳಿಸಿದರು. ಸಭೆಗಳ [illegible] ಮುಖ್ಯಸ್ಥರಾದರು. ಮರಾಠಿ [illegible] ಅಧಿಕಾರಿಗಳಾದ ಶ್ರೀ| ವಾಲಜಿ ಪ್ರಾಗಜೀಯವರಿಗೆ ಹೊಡೆದು ಸೆರೆಹಿಡಿದಿದ್ದಾರೆ. ಕಾಲಬಾದೇವಿಯಲ್ಲಿ ನಡೆದ ಸಭೆಯ ಉತ್ಸಾಹವನ್ನು ಹೇಳತೀರದು. ಸಾವಿರಾರು ಜನರು ಬಾಬು ಗೇನುವಿನ ದೊಡ್ಡ ಸ್ಥಳದಲ್ಲಿ ಹೂವು-ಕರ್ಪೂರ-ಬುಕ್ಕಿಟ್ಟು ನಮಸ್ಕಾರಗಳನ್ನರ್ಪಿಸಿದ್ದರು. ಹಂತಗಟ್ಟಿ ಜನರು ಸೇರಿದ್ದರು. ಪೋಲೀಸರ ದಸ್ತಗಿರಿಕರಾಗಲಿಲ್ಲ, ಸೋಜರು ಗುಂಡು ಹಾರಿಸಿದರು. ಸುಮಾರು ೨೦ ಘಂಟೆ ರಾತ್ರಿ ಗುಂಡು ಹಾರಿಸಿದರು. ಅವರಲ್ಲಿ ೮ ಜನರು ತೀರಿಕೊಂಡಿದ್ದಾರೆ. ಮಾರನೇ ದಿನ ನಿಷೇಧಪ್ರದರ್ಶಕ ಸಭೆ ಹರತಾಳ. ಶ್ರೀ| ವಾಲಜಿಯವರು ತಾಯಿಯು ಹಿಪ್ಪೊಟಿಂಗ ಮಗಂದಿರು! ಆದಾಗ್ಯೂ ತಾಯಿ ವ್ಯಸನಪಡದೆ, ತಮಗೆ ೧೦ ಮಕ್ಕಳಿದ್ದಿದ್ದರೆ, ಅವರೆಲ್ಲರನ್ನೂ ರಾಷ್ಟ್ರಕಾರ್ಯಕ್ಕೆ ನೀಡುತ್ತಿದ್ದೆನಾಗಿ ಸಂದೇಶ ಕಳಿಸಿದ್ದಾರೆ. ಗುಂಡು-ದೊಣ್ಣೆಗಳಿಂದ ೩೦೦ ಮಂದಿಗಳಿಗೆ ಗಾಯಗಳಾಗಿವೆ. ಈ ಪ್ರಕಾರದಿಂದ ಇಡೀ ಮುಂಬಯಿಯಲ್ಲಿ ಭಯಂಕರ ಕೋಲಾಹಲ. ಪರದೇಶಿ ಜವಳಿಯ ಪಿಕೆಟಿಂಗು ಎಡೆಬಿಡದೆ ನಡೆದಿದೆ. ದೇಸಾಯಿ ದೇಶೀರ ಸಭೆಗೆ ನೆರವಾದರೆಂಬ ಹಲವರ ಮೇಲೆ ಖಟ್ಲೆಗಳಾಗುತ್ತಿವೆ. ಖಟ್ಲೆಗಳಾದ ಹಾಗೆ ಪಿಕೆಟಿಂಗಿನ ರಭಸ ಹೆಚ್ಚು. ಪಿಕೆಟಿಂಗು ಜಾಗ್ರತೆ ನಡೆದಿದೆ. ಮಾಂಡವಿಯ ಒಬ್ಬ ವರ್ತಕರು ೩೧ನೇ ಮಧ್ಯರಾತ್ರಿ ೨ ಘಂಟೆಗೆ ಪರದೇಶಿ ಜವಳಿಯ ಮೋರಿ ತುಂಬಿ ಒಯ್ಯುತ್ತಿದ್ದರು. ಪಿಕೆಟರಿಗೆ ಈ ಸುದ್ದಿ ತಿಳಿದೊಡನೆ ಅವರು ಜವಳಿಯನ್ನು ಹಿಂಗಳೆದುಕೊಂಡರು. ೧೫ ವರ್ಷದ ಶಾಂತಿಬಾಯಿ ಎಂಬ ಹುಡುಗಿಯ ಮೇಲೆ ಪಿಕೆಟಿಂಗ ಮಾಡಿದ ಖಟ್ಲೆ. ಇನ್ನು ಮುಂದೆ ಪಿಕೆಟಿಂಗ ಮಾಡುವದಿಲ್ಲವಾಗಿ ಬರೆಕೊಟ್ಟರೆ ಬಿಟ್ಟುಕೊಡುತ್ತೇವಾಗಿ ಮೆಜಿಸ್ಟ್ರೇಟರು ಹುಡುಗಿಗೆ ಹೇಳಿದರು. 'ಪುನಃ ನಾನು ಪಿಕೆಟಿಂಗ ಮಾಡುವವಳೇ!' ಎಂದು ಹುಡುಗಿ ನುಡಿದಳು. ಅವಳಿಗೆ ೩ ತಿಂಗಳ ಸಾಮಾನ್ಯ ಸಜೆ ವಿಧಿಸಿ ಮೆಜಿಸ್ಟ್ರೇಟರು ಅವಳಿಗೆ ಸೆರೆಮನೆಗಟ್ಟಿದರು. 'ಕಾಂಗ್ರೆಸ್ ಬುಲೆಟಿನ್' ಮಾರಿದ ಬಗ್ಗೆ ಸಹ ಶಿಕ್ಷೆ ಆಗುತ್ತದೆ. ಆದರೆ, ಡಿಸೆಂಬರ ೧೫ನೇ ತಾರೀಖಿಗೆ ನಾರಾಯಣ ಗೋವಿಂದ ಎಂಬ ೧೦ ವರ್ಷದ ಹುಡುಗನಿಗೆ ಆದ ಶಿಕ್ಷೆ ನಮೂದಿಸತಕ್ಕಂಥದ್ದು. ಈತನು ಬಾಬು ಗೇನುವಿನ ಸಮಾಧಿ ಸ್ಥಳದ ಮೇಲೆ ಹೂಮಾಲೆಯನ್ನಿರಿಸುತ್ತಿದ್ದನು. ಪೋಲೀಸರು ಅವನಿಗೆ ಹಿಡಿದು ೨ ದಿನ ಕೋಠಡಿಯಲ್ಲಿಟ್ಟು ಬಿಟ್ಟರು. ಅವನಿಗೆ ಆಹಾರ ಕೊಡದೆ ಉಪವಾಸ ಹಾಕಿದರು. ಸೆರೆಹಿಡಿಯುವ ಇನ್ನೊಂದು ಪ್ರಸಂಗ ಹೇಳತಕ್ಕಂಥಾದ್ದಿದೆ: ಯುದ್ಧಮಂಡಳಗಳನ್ನು ಒಂದರ ಹಿಂದೊಂದಾಗಿ ಸೆರೆಮನೆಗಟ್ಟಿದಾಗ್ಯೂ ಯುದ್ಧಮಂಡಳಗಳ ಯಾವದೇ ಉಪಕ್ರಮಕ್ಕೆ ತಡೆ ಬೀಳುವದಿಲ್ಲ. ಕಾರಣ ಬೇರೆ ಸೂತ್ರಧಾರರಿದ್ದಾರೆಂದು ಪೋಲೀಸರ ಕಲ್ಪನೆಯಾಯಿತು. ಒಬ್ಬ ಕೊಂಗ್ರೆಸಿನವರೇ ಪೋಲೀಸರಿಗೆ ಈ ಮಾಹಿತಿ ಕೊಟ್ಟರಾಗಿ ಮಾತೇ? ಅದೇನಾಯಿತೋ ಏನೋ! ಡಿಸೆಂಬರ ೨೫ನೇ ತಾರೀಖಿಗೆ ಪೋಲೀಸರು ೬ ಮನೆಗಳ ಝಡತಿ ಮಾಡಿ ಶ್ರೀ| [illegible] ಕರಸನದಾಸ, ಮೆಹರ ಅಲಿ, ಪುರುಷೋತ್ತಮದಾಸ ತ್ರಿಕಮದಾಸ ಮೊದಲಾದ ೨೫ ಮಂದಿಗಳನ್ನು ಸೆರೆಹಿಡಿದರು. ಇವರ ಮೇಲಿನ ಖಟ್ಲೆ ವಿಚಾರ ಈ ವಾರದಲ್ಲಿ ನಡೆಯುವದಿದೆ. ಇಂತು ಮುಂಬಯಿಯಲ್ಲಿ ಈ ತನಕ ೬೩೪ ಮಂದಿ ಸೆರೆಯಾಳಾಗಿದ್ದಾರೆ. ಇವರಲ್ಲಿ ೧೧೦ ಮಂದಿ ಸ್ತ್ರೀಯರು. ಅಕ್ಟೋಬರ ತಾ. ೧೫ನೇಯಿಂದ ನವಂಬರ ತಾ. ೧೫ನೇ ವರೆಗಿನ ಒಂದು ತಿಂಗಳಿನಲ್ಲಿ ೬೦೨ ಮಂದಿಗಳು ಸೆರೆ ಬಿದ್ದರು. ಮುಂಬಯಿಯಲ್ಲಿ ಹೊಸ ಘೋಷ ತಯಾರಾಗಿದೆ. ಕ್ರೈಸ್ತ ಯುಗಾದಿಯಿಂದ ಜನರು ಧ್ವಜ ಹಿಡಿದುಕೊಂಡು 'ಚಾಲು ಹುವಾ ಗಾಂಧಿ ರಾಜ್ಯ' ಎಂದು ಘೋಷಿಸುತ್ತ ಮೆರವಣಿಗೆ ಮಾಡುತ್ತಾರೆ.

ಇತರ ಕಡೆಗಳಲ್ಲಿ

ಪಂಡಿತ ಜವಾಹಿರಲಾಲ ನೆಹರೂರವರ ಆಪ್ತೀಯರಾದ ಶ್ರೀಮತಿ ರಾಜಪತಿ ಕೌಲರವರಿಗೆ ೬ ತಿಂಗಳ ಶಿಕ್ಷೆ; ಅವರ [illegible] ಸೌ| ಕಮಲಾ ನೆಹರೂರವರು [illegible] ಕೊಡಬಾರದೆಂದು ಹೇಳಿ ದೇಸಾಯಿ ದೇಶೀರ ಸಭೆಗೆ ಉತ್ತೇಜನ ಕೊಟ್ಟ ಬಗ್ಗೆ ಜನವರಿ ೧ನೇ ತಾರೀಖಿಗೆ ಸೆರೆಹಿಡಿಯಲಾಗಿದೆ. ಲಖನೌದಲ್ಲಿ ಪರದೇಶಿ ಜವಳಿಯ ಪಿಕೆಟಿಂಗು ರಭಸದಿಂದ ನಡೆದಿದೆ. ಅಲ್ಲಿ ಜನರು ಪರದೇಶಿ ಜವಳಿಯ ಸ್ಮಶಾನಯಾತ್ರೆ ಕೈಕೊಂಡಿಸಿದರು. ಶ್ರೀ| ಕಮಲಾ ಮಾಳವೀಯ ಎಂಬ ೧೭ ವರ್ಷದ ಹುಡುಗನಿಗೆ ೧೫ ತಿಂಗಳ ಕಠಿಣ ಸಜೆ. ರಾಜದ್ರೋಹದ ಬಗ್ಗೆ ಶಿಕ್ಷೆಯಂತೆ! ರಾಜದ್ರೋಹದ ಅಪರಾಧವಾಗಿ ಶಿಕ್ಷೆ ಹೊಂದಿದವರಲ್ಲಿ ಇವನಷ್ಟು ಎಳೆ ಪ್ರಾಯದವರಿಲ್ಲ. ಲಖನೌದಲ್ಲಿ ಜನವರಿ ೧ನೇ ತಾರೀಖಿಗೆ ಜೈಲು [illegible] ೩ನೇ ತರಗತಿಯ ರಾಜಕೀಯ ಕೈದಿಗಳನ್ನೆಲ್ಲ ಬಿಡುವರಂತೆ!

ಕಲಕತ್ತೆಯಲ್ಲಿಯೂ ಪರದೇಶಿ ಜವಳಿಯ ಬಹಿಷ್ಕಾರ ಭರದಿಂದ ನಡೆದಿದೆ. ಜವಳಿ ಎಲ್ಲಿಯೂ ಖಪಾಗುವದಿಲ್ಲ. ಡಾಕ್ಕಾದಲ್ಲಿ ಕರನಿರಾಕರಣೆಯ ಉಪಕ್ರಮ ನಡೆದಿದೆ.

ಮದ್ರಾಸವು ಎಚ್ಚತ್ತಿದೆ. ಆಂಧ್ರ ವಿಶ್ವವಿದ್ಯಾಲಯದ ಉಪಾಧ್ಯಕ್ಷರಾದ ಶ್ರೀ| ರೆಡ್ಡಿಯವರು ಪಬ್ಲಿಕೆಯ ನಿಷೇಧವೆಂದು ರಾಜೀನಾಮೆ ಕೊಟ್ಟರು. ಸೇಲಂದಲ್ಲಿ ಸಭಾಪ್ರತಿಬಂಧಕ ಹುಕುಮವನ್ನು ಸ್ವಯಂಸೇವಕರು ಮುರಿದರು. ಮದ್ರಾಸದಲ್ಲಿ ಧ್ವಜವಂದನ ಸಮಾರಂಭವಾಗಬಾರದಾಗಿ ಪೋಲೀಸ ಕಮಿಶನರು ಹೊರಡಿಸಿದ ಹುಕುಮನ್ನು ಸರ್ವಾಧಿಕಾರಿಗಳಾದ ಶ್ರೀ| ಸತ್ಯಮೂರ್ತಿಗಳವರು ಮುರಿದು ಶ್ರೀ ಪಾರ್ಥಸಾರಥಿ ದೇವಾಲಯದ ಮುಂದುಗಡೆ ಧ್ವಜಾರೋಹಣವನ್ನು ಮಾಡಲುದ್ಯುಕ್ತರಾದರು. ಅಷ್ಟರಲ್ಲಿ ಅವರಿಗೆ ಸೆರೆಹಿಡಿಯಲಾಯಿತು. ಶ್ರೀ| ನಾಗೇಶ್ವರರಾಯರು ಬೇರೊಂದೆಡೆ ಧ್ವಜಾರೋಹಣ ಸಮಾರಂಭವನ್ನು ನೆರವೇರಿಸಿದರು. ಶ್ರೀ| ಸತ್ಯಮೂರ್ತಿ ಅವರ ಕಡೆಯ ೧೦೦[illegible] ರೂ. ಗಳ ಜಾಮೀನ ಪಡಕೊಂಡು ಬಿಡುಗಡೆ ಮಾಡಿದ್ದಾರೆ. ಖಟ್ಲೆ ೮ನೇ ತಾರೀಖಿಗೆ. ಉಪ್ಪಿನ ಸತ್ಯಾಗ್ರಹದ ಸಮಯ ನೆರವಾದ ಬಗ್ಗೆ ವೇದಾರಣ್ಯದ ಉಪ್ಪಿನ ಖಾತೆಯ ಅಧಿಕಾರಿಗಳಿಗೆ ವಿಶೇಷ [illegible] ಕೊಡಲಾಗಿದೆ.

ಬಿಹಾರದಲ್ಲಿ ಕಾಯಿದೆಭಂಗದ ಕೆಲಸ ಭರದಿಂದ ಸಾಗಿದೆ. ಈ ತನಕ ೧೨೧೯೪ ಮಂದಿಗಳು ಈ ಪ್ರಾಂತದಲ್ಲಿ ಸೆರೆಯಾಳಾದರು. ಪಿಕೆಟಿಂಗ ನಡೆದಿದೆ. ಗ್ರಾಮ ಪಂಚಾಯತುಗಳು ಬಹಳ ನೆರವಾಗುತ್ತಿವೆ. ಬಿಹಪುರ ಥಿರ್ಕಯ ೮ ಗ್ರಾಮಗಳು ಚೌಕಿದಾರಿ ಕರವನ್ನು ತೆರುವದಿಲ್ಲ. ಭೋಜದಲ್ಲಿ ೧೨೦೦೦ ಜನರು ಸಭೆ ಸೇರಿದ್ದರು. ಪೋಲೀಸರು ಸಭೆ ಚದರಿಸಲುದ್ಯುಕ್ತರಾದರು. ಜನರು ಸಭೆ ಸೇರಿಸುವ ಹಟ ತೊಟ್ಟರು. ಗುಂಡು ಹಾರಿಸಿ ಸಭೆ ಚದರಿಸಲಾಯಿತು. ಪೋಲೀಸರಿಗೆ ಜನರು ಕಲ್ಲು ಹೊಡೆದದ್ದರಿಂದ ಗುಂಡು ಹಾರಿಸಬೇಕಾಗಿ ಸರಕಾರಿ ಹೇಳಿಕೆ.

ಕರ್ನಾಟಕದೊಳಗೆ ಖಾನೇಸುಮಾರಿಯ ಬಹಿಷ್ಕಾರ ನಡೆದಿದೆ. ಆ ಕುರಿತು ಶಿಕ್ಷೆಗಳಾಗುತ್ತಿವೆ. ಮದ್ಯಪಾನಗೃಹಗಳ ಪಿಕೆಟಿಂಗ ನಡೆದಿದೆ. ಆದಾಗ್ಯೂ, ಪೋಲೀಸರ ಬೆಂಬಲವಿದ್ದ ಕಿತ್ತೂರಿನ ಶೇಂದಿ ಅಂಗಡಿಕಾರನ ಶೇಂದಿ ಖಪಾಗುತ್ತಿರುವದಂತೆ. ಬೆಳಗಾವಿಯಲ್ಲಿ ಅನೇಕ ಧ್ವಜವಂದನ ಸಮಾರಂಭಗಳಾದವು. ಗದಗ ಬೆಟಗೇರಿಯ ರಾ| ಪತ್ರೋಟಂತ ನಾಡಗೀರರವರು ರಾಜಕೀಯ ಅಪರಾಧಗಳಿಗಾಗಿ ಶಿಕ್ಷೆಯಾದವರಿಗೆ ಅಭಿನಂದನ ಮಾಡಿ ದೇಸಾಯಿದೇಶೀರ ಸಭೆಗೆ ನೆರವಾದ ಬಗ್ಗೆ ೪ ತಿಂಗಳ ಶಿಕ್ಷೆ, ರೂ. ೨೦೦ ದಂಡ ವಿಧಿಸಲಾಗಿದೆ. ಅಲ್ಲಿಯ ಮಾಮಲೇದಾರರು 'ಪ್ರಜಾಧ್ವನಿ' ಪತ್ರಿಕೆಗೆ ಚಂದಾದಾರರನ್ನು ಕಡಿಸುತ್ತಿದ್ದಾರೆ. ಹಿರೇಬಾಗೇವಾಡಿಯ ಮೇಲಿಂದ ಮಾರ್ಗವಾಗಿ ಕಡೆಗೆ ಪೋಲೀಸ ಪಹರೆಯೊಂದಿಗೆ ಹೋಗುತ್ತಿದ್ದ ಶೇಂದಿಯ ಕಲಶಿಗಳನ್ನು ಹರಿದು ಚೆಲ್ಲಿದರಂತೆ. ಹುಬ್ಬಳ್ಳಿಯಲ್ಲಿ ಸತ್ಯಾಗ್ರಹಿ ಕೈದಿಗಳ ದಂಡ ವಸೂಲಿಯ ಕ್ರಮ ನಡೆದಿದೆ. ೨-೩ ಕಡೆ ಜಪ್ತಮಾಡಿ ಸಾಮಾನು ಒಯ್ದರು. ಒಬ್ಬರು ಪೋಲೀಸರ ಅಧಿಕಾರ ನೋಡಿ ದಂಡ ಕೊಟ್ಟರು. ಧಾರವಾಡದ ಶ್ರೀ| ಕೃಷ್ಣರಾವ್ ಮುದವೇಡಕರರ ಮೇಲೆ ಭಾಷಣಬಂದಿಯ ಹುಕುಮು. ಅದನ್ನು ಮುರಿದು ಭಾಷಣವಾಯಿತು. ಸತ್ಯಾಗ್ರಹದಲ್ಲಿ ಸೇರಿದ ಕಾರಣ, ನಿಮ್ಮ ನಿಮ್ಮ ವತನಗಳನ್ನು ಯಾಕೆ ಬಿಟ್ಟುಕೊಡಬಾರದೆಂಬುದರ ಕುರಿತು ಬೆಳಗಾವಿಯ ಕಲೆಕ್ಟರರು ೫೦ ಮಂದಿ ಗೌಡ ಕುಲಕರ್ಣಿಗಳವರ ಮೇಲೆ ನೋಟೀಸು ಹೊರಡಿಸಿದ್ದಾರೆ. ಶ್ರೀ| ದೇಶಪಾಂಡೆ ಗಂಗಾಧರರಾಯರವರ ಕೊಡಿಸಿದ ನೋಟೀಸಿನ ಪ್ರಕಾರವಾಗಿ ತಮ್ಮ ಎಲ್ಲಾ ಆಸ್ತಿಯನ್ನು ೧೯೨೨ನೇ ಸಾಲಿನ [illegible] ಮೃತ್ಯುಪತ್ರದಿಂದ ಟ್ರಸ್ಟಿಗಳನ್ನು ನೇಮಿಸಿ ರಾಷ್ಟ್ರಕಾರ್ಯಕ್ಕೆ ಒಪ್ಪಿಸಿದೆ, ಕಾರಣ ಆ ಟ್ರಸ್ಟಿಯ ಅವರಿಗೆ ವಿಚಾರಿಸಬೇಕೆಂದು ಶ್ರೀ| ಗಂಗಾಧರರಾಯರು ಕಲೆಕ್ಟರರಿಗೆ ತಿಳಿಸಿದ್ದಾರೆ. [illegible] ಕಾಯುತ್ತಿದ್ದ ಕಿತ್ತೂರ ಪೋಲೀಸನ ಕೋವಿ ಕಾಣೆ; ಅದು ಎಲ್ಲೆಲ್ಲಿಯೂ ಸಿಗಲಿಲ್ಲ. ಈಗ ಅಲ್ಲಿ ೧೦೦ ದಿನ ಪೋಲೀಸರಿಗೆ ಕಾವಲಿಗಿಟ್ಟಿದ್ದಾರೆ. ಸೊಲ್ಲಾಪುರ ಕಲೆಕ್ಟರರ ಬಂಗ್ಲೆಯ ಮೇಲೆ ರಾಷ್ಟ್ರಧ್ವಜ ಹಚ್ಚಿದ್ದಕ್ಕೆ ಇಬ್ಬರಿಗೆ ೧೫ ರೂಪಾಯಿ ದಂಡ! [illegible] ರಿಗೆ ದೇಸಾಯಿದೇಶೀರ ಸಭೆಗೆ ಸಹಾಯ [illegible] ವ ಆರೋಪದ ಮೇಲೆ ಹುಬ್ಬಳ್ಳಿಯಲ್ಲಿ [illegible] ಮುಂಬಯಿಗೆ ಒಯ್ದಿರುತ್ತಾರೆ.

ಸ್ಥಾನಿಕ ವೃತ್ತಾಂತ.

ಕುಮಟೆ—ಸ್ವದೇಶಿ ಪ್ರದರ್ಶನವನ್ನು ನೋಡಲು ಜನರು ನೋಡಿ ಹೋದರು. ಅವಳ್ಳಿವಳ್ಳ ಹೊನ್ನಾವರ ಬರೇದಿ ಮಾಡಿಕೊಂಡು ನಡೆದರು. ಕೊಡಳ್ಳಿಯಲ್ಲಿ ಒಂದು ಹೆಣ್ಣು ಹುಲಿ ಗೋಡೆಯ ಅದರ ಎರಡು ಮರಿಗಳನ್ನು ಪ್ರದರ್ಶನದಲ್ಲಿಟ್ಟು ಬೆಲೆ ಕಟ್ಟಿ ಬ್ಯಾಗು ಪ್ರಪ್ಪ ಮಾಡಿದರು. ಈ ಮರಿಗಳು ಹಸಿವಿಗೆ ಹೆಣ್ಣು ನಾಯಿಯ ಮೊಲೆ ಕುಡಿಯುತ್ತಿದ್ದವು. ಒಟ್ಟು ಏಳ ಮರಿಗಳು!

ಸಿದ್ದಾಪುರ ತಾಲೂಕಿನಲ್ಲಿ ರಾಜೀನಾಮೆ ಕೊಟ್ಟ ಪಡೆದ ಹಲ್ಲಿಮಕ್ಕಿ ಪಟೇಲರ ೪ ಚೀಲ ಅಡಿಕೆ ೬೫ ಪೇಟೆಯಲ್ಲಿ ಮಾರಾಟವಾಗದೆ ಇಲ್ಲಿ ಬಂದು ಇದಕ್ಕೆ ಗಿರಾಕಿಯಿಂದಿಲ್ಲ. ೩-೪ ದಿನಗಳ ಹಿಂದೆ ಅದನ್ನವರು ಒಯ್ದಾಗ ನಿನ್ನೆ ಬೆಳಗ್ಗೆ ಬಂದರು. ದಲಾಲರು ಬಹಿಷ್ಕಾರದ ಅಡಿಕೆ ವ್ಯಾಪಾರ ಮಾಡಲೊಪ್ಪಲಿಲ್ಲ. ಪಟೇಲರ ಅಣ್ಣನು ಗಾಡಿಯ ಮೇಲೆ ಹಾಕಿಕೊಂಡು ಅದನ್ನು ತಿರುಗಿ ನಿನ್ನೆ ಮಧ್ಯರಾತ್ರಿ ಒಯ್ಯ ಹೊರಟನು. ಗಾಡಿ ರಾ| ಕಂಬಿಕೈ ಗಣಪತಿ ಹೆಗಡೆಯದು. ಸ್ವಯಂಸೇವಕರು ಬಹಿಷ್ಕಾರದ ಅಡಿಕೆಯೆಂದು ಹೇಳಿದ ಕೂಡಲೆ ರಾ| ಹೆಗಡೆಯವರು ಒಯ್ಯಲೊಪ್ಪಲಿಲ್ಲ. ದಲಾಲರು ಒಳ ಇಟ್ಟುಕೊಳ್ಳಲೊಪ್ಪಲಿಲ್ಲ. ಮಾರ್ಗದ ಮೇಲೆ ಅಡಿಕೆ ಚೀಲ ತೋರಿ, ಗಾಡಿಕಾರರು ಹೋದರು. ಪಟೇಲರ ಅಣ್ಣನು ಇಡೀ ರಾತ್ರಿ ಕಾಯ್ದನು. ಬೆಳಗಾದರೂ ಕಾಯುತ್ತಿದ್ದಾನೆ.

ಇಲ್ಲಿಯ ಮ್ಯುನಿಸಿಪಾಲಿಟಿಯವರು ಅಂತೂ ಕೃಪೆಯಾಗಿಯೆ ಶುಭ ಮುಹೂರ್ತದಲ್ಲಿ ಮಾರ್ಗಗಳ ಮೇಲೆ ನೀರು ಹಾಕುವ ಏರ್ಪಾಟು ಮಾಡಿದ್ದರು. ೨ ದಿನ ಮೋಟಾರ ಒಡಿ ನೀರು ಹಿಂಪಡಿಸುವ ಕಾರ್ಯವಾಯಿತು. ಮೋಟಾರಿಗೆ ಕಾಯಿಲೆ. ನೀರು ಹಾಕುವದು ಮೊನ್ನೆಯಿಂದ ನಿಂತಿದೆ. ಮ್ಯುನಿಸಿಪಾಲಿಟಿಯವರು ಗಾಡಿಗಳನ್ನೇರ್ಪಡಿಸಿ ನೀರು ಹಾಕುವದುತ್ತಮ. ಮಾರ್ಗಗಳ ಮೇಲೆ ನೀರು ಹಾಕಬೇಕೆಂಬ ಮನಸ್ಸಿದ್ದರೆ ಮಾತ್ರ !

ಸ್ವದೇಶಿ ಪ್ರದರ್ಶನಕ್ಕಾಗಿ ಇಲ್ಲಿ ಬಂದ ಶ್ರೀ| ರಂಗನಾಥರಾವ ದಿವಾಕರ ಹಾಗು ಕರಮರಕರರವರಿಗೆ ಈ ಜಿಲ್ಲೆಯನ್ನು ಬಿಟ್ಟು ಹೋಗಬೇಕಾಗಿ ಸೋಮವಾರ ಸಾಯಂಕಾಲ ನೋಟೀಸು ಮೇಲೆ ಹಂಗಾಮ. ನೋಟೀಸು ಬರುವ ಮುಂಚೆಯೇ ಶ್ರೀ| ರಂಗನಾಥರಾಯರೂ, ಕರಮರಕರರವರೂ ಶ್ರೀ ಗೋಕರ್ಣ ಕ್ಷೇತ್ರಕ್ಕೆ ಹೋಗಿ ಸಂಕಲ್ಪಿತ ಕಾರ್ಯಕ್ರಮದಂತೆ ಅಲ್ಲಿ ಒಂದು ವ್ಯಾಖ್ಯಾನಕ್ಕೆ ಧಾರವಾಡ ಕಡೆ ತೆರಳಿದರು. ಅಲ್ಲಿ ಬಾಂಡ ಶ್ರೀ| ಕೃಷ್ಣಾಬಾಯಿ ಪಣಿಕರರವರ ಮೇಲೂ ಹದ್ದುಪಾರಿಯ ನೋಟೀಸು !

ಶ್ರೀ ಗೋಕರ್ಣ ಕ್ಷೇತ್ರದಲ್ಲಿ ಶಿಬಿರ ಧಿಪತಿಗಳಾದ ರಾ| ಪನ್ನಿ ಕೃಷ್ಣಭಟ್ಟರು ಶಿವರಾತ್ರಿಯ ಸಮಯ ಯಾತ್ರಾ ಪರದೇಶ ಪರಕೀಯರನ್ನು ತಡೆಬರದಾಗಿಯೂ, ಹಂದಲ್ಲಿ ಪಿಕೆಟಿಂಗು ಆಗುವದಾಗಿಯೂ ಸ್ವದೇಶಿ ಪ್ರದರ್ಶನದ ಅನಾವರಣ ಸಮಾರಂಭದ ಕಾಲಕ್ಕೆ ಜಾಹೀರಪಡಿಸಿದ್ದಾರೆ.

ಬಲವಂತ ಸಂಗೀತ ಮಂಡಳಿಯವರು ಶುಕ್ರವಾರದಿಂದ ಇಲ್ಲಿ ಬರುತ್ತಾರೆ ತಾ. ೧೬ನೇಯಿಂದ ನಾಟಕ ಪ್ರಯೋಗಗಳಾರಂಭ

ಹೊನ್ನಾವರ— ಇಲ್ಲಿಯ ಪ್ರಭಾತ ಫೇರಿಯ ಖಟ್ಲೆಯಲ್ಲಿ ಶಿಕ್ಷೆಯಾದ ೧೧ ಮಂದಿ, ಮುರ್ಡೇಶ್ವರದಲ್ಲಿ ...ನೆ ಕೊಯ್ದ ಪ್ರಕರಣದಲ್ಲಿ ಶಿಕ್ಷೆಯಾದ ೬ ಮಂದಿ ...ಗು ಇತರ ೭ ಮಂದಿ ಕೂಡಿ ೨೪ ಮಂದಿಗಳಿಗೆ ...ಸಾಪುರ ಜೈಲಿಗೆ ವರ್ಗವಾಗಿದೆ ಅವರ ಹೆಸರುಗಳು:— ...| ಕೃಷ್ಣಾ ಅನಂತ ಭಟ್ಟ ಕಡೆ, ನರಸಿಂಹ ನಾರಾಯಣ ... ಬಾವಭಾಗ, ರಾಮಚಂದ್ರ ಕೇಶಗಿರಿ ಕಾಮತ, ಸು...ಯ ಅಚ್ಯುತ ಗ್ರ್ಯಾಹೊಂಷೆ, ಲಕ್ಷ್ಮಣ ಮಾರ್ಕಂಡ ಭಟ್ಟ ...ವಾಸ ಕೇಶಗಿರಿ ಕಾಮತ, ಶ್ರೀನಿವಾಸ ನಾರಾಯಣ ...ಶೇ, ಪಾಂಡುರಂಗ ಹರಿ ಪೈ, ಹನುಮಂತ ನಾಗ... ಮುರ್ಡೇಶ್ವರ ರಾಮಚಂದ್ರ ಶಿವಪ್ಪ ಹಾ... ...ಯ ಕೇಶಗಿರಿ ಕಾಮತ, ... ಪಂಕಾಜ್ಜಿ, ಕೃಷ್ಣಯ್ಯ ತಿಮ್ಮಯ್ಯ ಹೋರಾಡಿ ಸಂಜೀವ ರಾಮರಾವ ಮುರ್ಡೇಶ್ವರ, ತಿಮ್ಮಯ್ಯ ಅನಂತ ಹೆಗಡೆ ದೊಡ್ಡನಳ್ಳಿ ಶಿವರಾಮ ಗಣಪತಿ ಭಟ್ಟ ಅಂಸಾಡ್ಕರ, ಶಿವರಾಮ ನಾರಾಯಣ ಮಳಗಿ, ಲಕ್ಷ್ಮಣ ಬಾಬುರಾವ ಘೋಸೇಕರ ಬಸರಾತ ಹನುಮಂತರಾವ, ಹರಿ ಮಂಜನಾಥ.

ಜಮಾವುಲೇದಾರರಾದ ವಿ|| ಕಾಂಗಳೇಯವರಿಗೆ ವರ್ಗವಾಯಿತು ವರ್ಗ ವಿಜಾಪುರಕ್ಕೆ. ಇವರ ಕಾರಕೀರ್ದಿಯಲ್ಲಿ ಹೇಳತಕ್ಕಂಥ ಸಂಗತಿಗಳಾದದ್ದು ಮೂರು:— (೧) ಮಲ್ಲಾಪುರ ಪಟೇಲನ ತಮ್ಮನ ಖಟ್ಲೆ. (೨) ಪ್ರಭಾತ ಫೇರಿಯ ಪ್ರಕರಣ, (೩) ಮಾಜಿನಾಲಯದ ಶಿಪಾಯಿ ಎಂಬುವನಿಗೆ ಉಗ್ರಾಣಿ ಜಾಗೆಗೆ ಕಾಯಂ ಮಾಡಿದ್ದು. ಇವರಿಗೆ ವರ್ಗವಾದ ಬಗ್ಗೆ ಅನೇಕರು ಅನೇಕ ರೀತಿಯಿಂದ ಮರುಗುತ್ತಾರೆ.

ಈ ಬಂದರಕ್ಕೆ ಪುನಃ ಸಕ್ಕರೆ—ಬಿಸ್ಕೇಟು ಬಂದು ಸಾಗರ-ಶಿವಮೊಗ್ಗ ಕಡೆಗೆ ಹೋಗುವದಂತೆ ಹೇಳುತ್ತಾರೆ. ಕೂಲಿಯವರು ಅವನ್ನು ಇಳಿಸಿಕೊಳ್ಳಲಿಲ್ಲ ಬೇರೆ ಜನರನ್ನು ತಂದು ಮುಂದಿನ ವಿಧಿಯಾಯಿತು. ಸಾಗರ-ಶಿವಮೊಗ್ಗೆಗೆ ಹೋಗುವಾಗ ದಾರಿಯ ಮೇಲೆಲ್ಲ ಅದು ಹಂಚುತ್ತ ಹೋಗುತ್ತದೆ ಈ ಕಡೆ ಕರ್ನಾಟಕ ಸಂಘದವರು ಲಕ್ಷ್ಯಗೊಡಬೇಕು.

ಒಬ್ಬ ಚೀನಿಯನಿಗೂ, ಇಲ್ಲಿಯ ಪೋಲಿಸ ಪೇದೆಗೂ ಒಂದು ಪ್ರಕರಣ ನಡೆದಿತ್ತು. ಚೀನಿಯನು ಡೊಂಬರ ಆಟದವನು ಆತನಿಗೆ ಇಲ್ಲಿಯ ಮಾತು ಬರುವದಿಲ್ಲ. ಹಿಂದುಸ್ಥಾನಿ ಬರುತ್ತದೆ, ಅದುಹಾಗೂ ಅಷ್ಟಕ್ಕಷ್ಟೇ! ಪೋಲೀಸ ಪೇದೆಯು ಆತನ ಹೆಸರು ಕೇಳಿದನು. ಪೇದೆ ಕೇಳಿದ್ದು ಡೊಂಬರದವನಿಗೆ ತಿಳಿಯಲಿಲ್ಲ, ಡೊಂಬರದವ ಹೇಳಿದ್ದು ಪೇದೆಗೆ ತಿಳಿಯಲಿಲ್ಲ. ಪಾಹಿತಿಗೆ ಮಾತಾಡಿಯಾಯಿತು ಚಾವಡಿಗೆ ಒತ್ತು ಎಂದು ಪೇದೆಯು ಆತನಿಗೆ ಕ್ಯಾಗಾದರೂ ತಿಳಿಹೇಳಿ ಕೊಂಡನು ಡೊಂಬರದವನು ಮುಂದೆ, ಪೇದೆಯು ಹಿಂದೆ; ಹೀಗೆ ಹೋಗುತ್ತಿರುವಾಗ ಡೊಂಬರದವನಿಗೆ ಏನಾಯಿತೋ ಏನೋ! ಡೊಂಬರದವನು ಪೇದೆಗೆ ಮುಂದಾಗ ಹೇಳಿದನು. ಪೋಲೀಸನು ಒಟ್ಟರೆ ಚೀನಿಯನಿಗೆ ಹೊಡೆಯ ಕೈ ಎತ್ತಿದನು ಚೀನಿಯನು ಕೈ ಎತ್ತಿ ಪೋಲೀಸನಿಗೆ ಹೊಡೆದುಬಿಟ್ಟನು. ಯಾಕೆ ಹೊಡೆದೀ? ಎಂದು ಅಡೀಟಿಯಲ್ಲಿ ಕೇಳಲು, ಆತನು ಕೈ ಎತ್ತಿದ್ದರಿಂದ ನಾನು ಹೊಡೆದೆನೆಂದು ಆತನು ಹೇಳಿದನು.

ಹುಬ್ಬಳ್ಳಿಯ ಶ್ರೀ| ವಿಶ್ವನಾಥರಾವ ಜೋಶಿಯವರ ಮೇಲೆ ಇಲ್ಲಿಯ ರಾ| ಅಗ್ನಿಹೋತ್ರಿಯವರು ಪೀನಲ್ ಕೋಡಿನ ೫೦೪ ನೇ ಕಲಮಿನನ್ವಯ ಕೊಟ್ಟ ಫಿರ್ಯಾದಿಯ ವಿಚಾರ ನಾಳೆ ೬ನೇ ತಾರೀಖಿಗೆ ಕಾರವಾರದ ಮಿ| ಸಾಲ್ದಾನರವರ ಕೋರ್ಟನಲ್ಲಿ ನಡೆಯುವದು

ಹತ್ತು ಜನರ ಮಂಡಳಿ ಪರ್ಯಟನದಂತೆ ಸತ್ಯಾಗ್ರಹ ಮಹೋತ್ಸವ. ಇದರ ಜೊತೆಗೆ ಭಗಿನಿ ಮಂಡಳದ ಕೃತಿಯು ಸತ್ಯಾಗ್ರಹ ವಿಶೇಷ

ಪ್ರಭಾತ ಫೇರಿಯ ಖಟ್ಲೆಯಲ್ಲಿ ರಾ| ರಾಮಚಂದ್ರ ಶಾಸ್ತ್ರಿ ಮೊದಲಾದ ೧೩ ಮಂದಿಗಳ ಮೇಲೆ ಆದ ತೀರ್ಪಿನ ವಿರುದ್ಧ ಕಾರವಾರದ ಸೆಶನ್ಸ ಕೋರ್ಟಿನಲ್ಲಿ ದಾಖಲಾದ ಅಪೀಲಿನ ವಿಚಾರ ನಾಳೆ ೬ನೇ ತಾರೀಖಿಗೆ ನಡೆಯುವದು.

ಇಲ್ಲಿಯ ತಾಲೂಕಿನ ರೈತರ ಸಂಘ ಸ್ಥಾಪನೆಯಾಗಿದೆ ತೀವ್ರ ತರುವದು ಅಸಾಧ್ಯವಿದ್ದದರಿಂದ ಸರಕಾರವು ಈ ವರ್ಷದ ಮಟ್ಟಿಗೆ ತೆರಿಗೆ ಮಾಫ ಮಾಡಬೇಕೆಂಬ ಠರಾವಾಗಿದೆ. ರಾ|| ಲಕ್ಷ್ಮೀನಾರಾಯಣ ಭಟ್ಟ ಕಕೇರಿಯವರು ಸಭಾಧ್ಯಕ್ಷರಿದ್ದರು.

ಇದೇ ಕಳೆದ ಸೋಮವಾರ ಮೈಸೂರಿನ ರಾಜಕುಮಾರರಾದ ಶ್ರೀ ಜಯಚಾಮರಾಜ ಒಡೆಯರವರು ಗೇರಸಪ್ಪೆಗೆ ಬಂದು ಹೋದರು.

ಭಟಕಳ— ಮೈಸೂರ ಮಹಾರಾಜರು ಇದೇ ಬರುವ ೧೬ನೇ ತಾರೀಖಿನಿಂದ ಮಲೆನಾಡಿನ ಸಂಚಾರವನ್ನು ಪ್ರಾರಂಭಿಸುತ್ತಾರೆ. ಮೊಟ್ಟಮೊದಲು ಕಾರ್ಗಲಿಗೆ ಬ...ವರು. ಅಲ್ಲಿಂದ ಈ ತಿಂಗಳ ಅಂತ್ಯದ ಸುಮಾರಿಗೆ

ಚಹ, ಸಕ್ಕರೆಗಳ ಮೇಲಿನ ಬಹಿಷ್ಕಾರ ಬಹಳ ಜಾಗ್ರತೆಯಿಂದ ನಡೆದಿದೆ. ಅನೇಕ ವರ್ತಕರು ಪ್ರತಿಜ್ಞಾಪತ್ರಕ ಮೇಲೆ ಸಹಿ ಕೊಟ್ಟಿರುತ್ತಾರೆ. ಕೊಡತಕ್ಕವರೂ ಇದ್ದಾರೆ. ಅಜೆ ರವಿವಾರ ತರುಣರು ಬಹಿಷ್ಕಾರದ ಪ್ರಚಾರಕ್ಕಾಗಿ ಒಂದು ಮೆರವಣಿಗೆ ತೆಗೆದರು. ಒಬ್ಬ ಕಾಫಿ ಅಂಗಡಿಯವನು ಬಹಿಷ್ಕಾರ ಪ್ರತಿಜ್ಞೆ ಪತ್ರಿಕೆಯ ಮೇಲೆ ಸಹಿ ಮಾಡಿದ್ದನು. ಪರದೇಶಿ ಸಕ್ಕರೆಯನ್ನು ಕಳ್ಳತನದಿಂದ ಪ್ರತಿಜ್ಞೆ ಮಾಡಿದ ಅಂಗಡಿಕಾರರಿಂದ ಒಯ್ದು ಸುಳುವು ತರುಣರಿಗೆ ಹತ್ತಿತು. ಅಂಗಡಿಯಲ್ಲಿ ಈ ಸಕ್ಕರೆ ಟಪಾಲ ಎ... ಹಾಕಿ ಆತನ ಅನುಮತಿ ಪಡೆದು ಸುಟ್ಟರು

ಬೆಳಗಾವಿಯ ಶ್ರೀ| ಶ್ರೀನಿವಾಸ ಶಾಸ್ತ್ರಿಗಳ ಕೀರ್ತನೆಗಳಾಗುತ್ತಿವೆ. ಜನರ ಸ್ತೋಮ.

ಸಿದ್ದಾಪುರ— ಹೀಗಾದ ಸೀಮೆಯೊಳಗಿನ ೧೦೦-೧೫೦ ಕೋವಿಗಳನ್ನು ಮಾಮಲೇದಾರರು ಜಪ್ತ ಮಾಡಿ ಒಯ್ದಿದ್ದಾರೆ. ಇದರಿಂದ ಕಳ್ಳರ ಕಾರುಬಾರು ಮಾಡಲು ಹಳ್ಳಿಗರಿಗೆ ಬಹಳೇ ತೊಂದರೆಯಾಗಿದೆ ಅಧಿಕಾರಿಗಳು ವಿಚಾರ ಮಾಡಿ ಲೈಸೆನ್ಸುಗಳನ್ನು ಜನರಿಗೆ ಕೊಡಬೇಕಾಗಿ ಸೂಚನೆ.

ವಿಸಾಪುರ ಜೈಲಿಗೆ ಕಳಿಸಲ್ಪಟ್ಟ ಸಿದ್ದಾಪುರ ತಾಲೂಕ ಹಾಲುಕಂಡದ ರಾ| ಸೀತಾರಾಮ ಹೆಗಡೆಯವರು ಅಸ್ವಸ್ಥರಿದ್ದರುವದಾಗಿಯೂ, ಈ ಅಸ್ವಾಸ್ಥ್ಯದಲ್ಲಿಯೇ ತಾವು ತೀರಿಕೊಂಡಲ್ಲಿ ತಮ್ಮ ಆಸ್ತಿಯನ್ನೆಲ್ಲ ಕೊಂಗ್ರೆಸ ಸಂಸ್ಥೆಗೆ ಕೊಡಬೇಕಾಗಿಯೂ, ಅವರು ಅಣ್ಣಂದಿರಿಗೆ ಪತ್ರ ಬರೆದಿರುವರಂತೆ!

ಶಿರಸಿ— ಈ ತಾಲೂಕಿನಲ್ಲಿಯೂ ಕಳ್ಳರ ಹಾವಳಿಯುಂಟಾಗುತ್ತಿದೆ ಇವರಿಗೆ ಧಕ್ಕೆ ಮತ್ತು ಬೇಕು ಹುಲಿಮನೆ ಗ್ರಾಮದಲ್ಲಿ ಬುಧವಾರ ರಾತ್ರೆ ೧೦-೧೨ ಮಂದಿಗಳು ಧಕ್ಕೆಯ ಮತ್ತಿ ಜನರಿಗೆ ಕೈಕಾಲಿ ಹೊಡೆದರು. ಈ ಊರಲ್ಲಿ ಎರಡೇ ಮನೆ ರಾ|| ರಾಂಜಪ್ಪ ಹೆಗಡೆರ ಹೆಂಡತಿಗೆ ಗದ್ದರಿಸಿ ಮೈಮೇಲೆ ಕೈಹಾಕಹೋದರು "ಆಸ್ತಿಯೆಲ್ಲಿದೆ, ತೋರಿಸು," ಎಂದು ಗದ್ದರಿಸಿದರು. ಅವಳು ಹೆದರಿ ಒಳ ಹೋಗಿ ಸ್ಥಳ ತೋರಿಸಿದಳು. ಸುಮಾರು ೧೬೦ ರೂಪಾಯಿ ನಗದು, ದಾಗಿನ ಇವೆಲ್ಲ ಕೂಡಿ ೪೦೦-೫೦೦ ರೂಪಾಯಿಗಳ ಕಳವು ಈಗ ಎರಡೂ ಮನೆಯವರು ಎಡಳ್ಳಿಗೆ ಹೋಗಿ ಉಳಕೊಂಡಿದ್ದಾರೆ. ಹುಲಿಮನೆ ಬಿಟ್ಟರು. ಮಾರನೇ ದಿನ ಕಾನಗೋಡ ಸರ ಅಂಗಡಿಯಲ್ಲಿ ಕಳವು ಅಧಿಕಾರಿಗಳು ಇತ್ತ ಬಂದೋಬಸ್ತ ಮಾಡಬೇಕು. ಅಲ್ಲಲ್ಲಿಯ ಪ್ರಮುಖರೂ ಗ್ರಾಮ ಬಂದೋಬಸ್ತಿಯ ಆಲೋಚನೆ ಮಾಡಬೇಕು

ಇಲ್ಲಿಯ ಮ್ಯುನಿಸಿಪಾಲಿಟಿಗೆ ‹ಹಿತಚಿಂತಕ"ರೊಬ್ಬರು ಸೂಚನೆ ಮಾಡುವದೇನಂದರೆ,— ೨-೩ ವರ್ಷಗಳಿಂದ ಅಕ್ಕಿಯ ಗಿರಣಿ ಕಾಲದಲ್ಲಿ ೪೦೦-೫೦೦ ದನಗಳು ಮೈ ಸುಟ್ಟ ಸತ್ತುಹೋದವು ಗಿರಣಿಯವರು ಹಿಟ್ಟಿನ ಕೊಬ್ಬಟ್ಟನ್ನ ಮಾರ್ಗಗಳ ಮೇಲೆ ಚೆಲ್ಲಿ ಅದಕ್ಕೆ ಬೆಂಕಿ ಕೊಡುತ್ತಾರೆ. ದನಗಳು ಅದನ್ನು ತಿನ್ನಹೋಗಿ ಕಾಲು-ಮೋರೆ-ಹೊಕ್ಕಿ ಸುಂಕಾದವುಗಳನ್ನು ಸುಟ್ಟುಕೊಳ್ಳುತ್ತವೆ. ಕೊಬ್ಬಟ್ಟಿನಲ್ಲಿ ಬೆಂಕಿ ಇದ್ದದ್ದು ಕಾಣುವದಿಲ್ಲ, ಒಳಗಿಂದ ಉರಿಯುತ್ತದೆ ೫-೬ ಜನರು ದನಗಳನ್ನು ಹಾಕಹೋಗಿ ಕಾಲುಸುಟ್ಟುಕೊಂಡಿದ್ದಾರೆ ಅಂತಮೇಲೆ ಮೂಕ ದನಗಳದೇನು ಗತಿ? ಕೊಬ್ಬಟ್ಟಿನಿಂದ 'ಜಲಿಗೆ, ರೋಗಕ್ಕೆ ಅನುಕೂಲ. ಇದನ್ನೆಲ್ಲ ಪರಾಂಬರಿಸಿ ಕೊಬ್ಬಟ್ಟು ಚೆಲ್ಲುವ ಜಾಗಕ್ಕೆ ಬೇಲಿಹಾಕಬೇಕಾಗಿ ಗಿರಣಿಯವರಿಗೆ ವಿಧಿಸಬೇಕು ಗಿರಣಿಯವರಾದರೂ ದನಗಳಮೇಲೆ ಕರುಣೆಯನ್ನಿಟ್ಟು ಸುತ್ತ ಬೇಲಿಕಟ್ಟಿದರೆ, ಅವರಿಗೆ ಪುಣ್ಯ ಬರುವದು.

ಅಂಕೋಲಾ— ಇಲ್ಲಿ ರಾಷ್ಟ್ರೀಯ ಕೆಲಸ ಮಾಡುತ್ತಿದ್ದ ರಾ| ಎಸ್. ಬಿ ಪದಕಿ ಹಾಗು ರಾಮಚಂದ್ರಭಟ್ಟ ಇವರಿಬ್ಬರ ಮೇಲೆ ಹದ್ದುಪಾರಿಯ ನೋಟೀಸು ಜ್ಯಾರಿಯಾಗಿದೆ. ಇನ್ನೂ ೪ ಜನರಮೇಲೆ ನೋಟೀಸು ಬರುವ ಸು

ಸೆರೆಮನೆಯೊಳಗೆ.

ಸೆರೆಮನೆಯಲ್ಲಿ ಮಹಾತ್ಮಾಜಿ ಲೋಕನಾಯಕರು ನರಳುತ್ತಿರುವರಷ್ಟೇ. ಕೆಲ ಪ್ರಮುಖರ ನೂತನ ನೂಲಿನ ಪರಿಮಾಣವು ಪ್ರಕಟ ಹೊಂದಿದೆ. ಸರದಾರ ವಲ್ಲಭಭಾಯಿಯವರು ಸಾಬರಮತಿಯಲ್ಲಿ ೮ ರತ್ತಲು, ಯೆರವಡೆಯಲ್ಲಿ ೯ ರತ್ತಲು, ಹೀಗೆ ೧೭ ರತ್ತಲು ನೂಲು ತೆಗೆದರು. ಶ್ರೀ ಮಹಾದೇವಭಾಯಿ ದೇಸಾಯಿಯವರು ೧½ ಲಕ್ಷ ಗಜ ನೂಲು ನೂತರು. ಶ್ರೀ ಮುಕುಂದ ಮಾಲವೀಯರವರು ೧ ಲಕ್ಷ ಗಜ, ಶ್ರೀ ಗಂಗಾಧರರಾವ ದೇಶಪಾಂಡೆಯವರು ೮೦ ಸಾವಿರ ಗಜ, ಶ್ರೀ ಬಿ. ಜಿ. ಖೇರರವರು ೧೭ ಸಾವಿರ ಗಜ ನೂಲು ನೂತರು. [illegible] ಜೈಲಿನ ಕೈದಿಗಳು ಮಹಾತ್ಮರ ಜಯಂತಿಯ ಹಿಂದಿನ ದಿನ ನಾಳು ಆದರಿಂದ ಖಾದಿ ಧರಿಸಿ [illegible] ಜೈಲಿಗೆ ಮಹಾತ್ಮರೆಡೆ ಕಳುಹಿದರು. ಖಾದಿ ಧರಿಸಬಾರದು [illegible] ಬೇಕಾಗಬಾರದು ಎಂಬುದಾಗಿ ಕೈದಿಗಳು ಬರೆದಿದ್ದರಂತೆ. [illegible] ಸಂತೋಷದಿಂದ ಅಂಗೀಕರಿಸಿ ತಾವು ಈವಾಗ [illegible] ಖಾದಿಯನ್ನೇ ಧರಿಸುತ್ತೇವಾಗಿಯೂ, ಈ ವಾದಿಯಲ್ಲಿ ದೇಶಪ್ರೇಮಿಗಳ ಅಂತಃಕರಣವಿರುವದರಿಂದ ಇದರಿಂದ [illegible] ಸಂತೋಷವಾಗಿರುವದಾಗಿಯೂ ಬರೆದ ಪತ್ರವು ಪ್ರಕಟ ಹೊಂದಿದೆ.

* * *

ಶೇರಾಪನ್ನಿನ ಕನ್ಯಾಗುರುಕುಲದ ಮುಖ್ಯಾಧ್ಯಾಪಿಕೆಯಾದ ಶ್ರೀಮತಿ ಸತ್ಯವತೀದೇವಿ, ಎಮ್. ಎ. ಇವರು ಅಲ್ಲಿಯ ಜೈಲಿನೊಳಗಿಂದ ಹೊರಬಿದ್ದಾರೆ. ಅವರ ಜೊತೆಗೆ ಶೇರಾಪನ್ನಿನ ಇನ್ನು ಕೆಲವು ಸ್ತ್ರೀ ಸತ್ಯಾಗ್ರಹಿಗಳು ಶಿಕ್ಷೆಯನ್ನನುಭವಿಸುತ್ತಿದ್ದರು. ಸೆರೆಮನೆಯಲ್ಲಿ ಈಶಪ್ರಾರ್ಥನೆ ಮಾಡಗೊಡುವದಿಲ್ಲ, ಗ್ರಂಥ ಪಠಣ ಮಾಡಗೊಡುವದಿಲ್ಲ, ದಿನಾ ೧೯ ತಾಸು ಕೋಣೆಯಲ್ಲಿ ಕೂಡಿಹಾಕುತ್ತಾರೆ. ಹಲವು ದಿನ ೨೪ ತಾಸು ಕೋಣೆಯಲ್ಲಿ ಹಾಕಿಟ್ಟರು. ಸಾಕಷ್ಟು ಆಹಾರ ಕೊಡುವದಿಲ್ಲ, ಕೊಟ್ಟ ಆಹಾರ ತಿನ್ನುವಂಥದ್ದಲ್ಲ. ನನ್ನ ಜೊತೆಗಿದ್ದ ಶ್ರೀಮತಿ ಸತ್ಯವತೀದೇವಿಯವರು ಪರರು ಬೇಯಿಸಿದ ಅನ್ನ ಉಣ್ಣುವದಿಲ್ಲ. ಅವರಿಗೆ ಕಚ್ಚಾ ಹಾಲು ಸಹ ಸಿಗುವದಿಲ್ಲ. ಹೀಗೆ ಅವರಿಗೆ ಜೈಲ ಅಧಿಕಾರಿಗಳು ಪೀಡಿಸಿದರಾಗಿ ಶ್ರೀಮತಿ ಸತ್ಯವತೀದೇವಿಯವರು ಶೇರಾಪನ್ನಿನ ಯುದ್ಧಮಂಡಳದ ಅಧ್ಯಕ್ಷರಿಗೆ ವರದಿ ಕೊಟ್ಟಿದ್ದಾರೆ.

* * *

ರಾವಳಪಿಂಡಿ ಜೈಲಿನಲ್ಲಿ ಸಾಂಗಲಾ ಬೆಟ್ಟದ ರಾಷ್ಟ್ರಸೇವಕರಾದ ಗಿಯಾನ ಚಂದರರವರು ಸಪ್ತವರ್ಷದ [illegible] ಕೊಡದ್ದರಿಂದ ಶಿಕ್ಷೆಯನ್ನನುಭವಿಸುತ್ತಿದ್ದಾರೆ. ಅವರು ೧೯೩೦ರ ಸನೇ ತಾರೀಖಿನಿಂದ ಉಪವಾಸ ಮಾಡಿದರು. ಇನ್ನೇ ತರಗತಿಯ ಕೈದಿಗಳವರು. ಉಪವಾಸ ಮಾಡಿದ್ದರಿಂದ ಜೈಲ ಖಾತೆಯ ೧೯೩೦ನೇ ಕಲಮಿನಂತೆ ಇವರಾದ ಕಾರಣ ಈ ಕಾರಣ ರಾವಳಪಿಂಡಿ ಜೈಲಿನಲ್ಲಿ ಬಿಟ್ಟಿ ನಡದಿದೆ. ಈ ಬಿಟ್ಟಿಯಲ್ಲಿ ಬ್ರಾಹ್ಮಣರ ಭಾಟಿಯಾ [illegible] ಸಿಂಗ ಹಾಗು ಡಾ। ಸ್ವೀಫುದ್ದೀನ ಕಿಚಲೂರವರ ಸಾಕ್ಷಿಗಳು ದವು. ಪ್ರಲಿಶರ ಕೊಟ್ಟ ಚನ್ನಾಗಿ ಬೇಯುವದಿಲ್ಲ. ಮತ್ತು ದಲ್ಲಿ ಪದಾರ್ಥ ಬೇಕಾದದ್ದೆಂದು ರುಚಿತಿಳಿಯುವದಿಲ್ಲ, ಕೊಟ್ಟ ರೊಟ್ಟಿ ತಣ್ಣಗೆ ತಿನ್ನಲಾಗುವದಿಲ್ಲ, ಕಾಯಿಪಲ್ಲೆಯ ರುಚಿ ಹುಲ್ಲಿನಂತೆ ಆಗುತ್ತದೆ. ಜೈಲಿನ ಅಧಿಕಾರಿಗಳ ಕಡೆ ಇಂಥ ಆಹಾರ ತಿನ್ನಲಾಗುವದಿಲ್ಲವಾಗಿ ಗಿಯಾನಚಂದರು ಬಹಳ ಸಾರೆ ಹೇಳಿದಾಗ್ಯೂ ಸುಧಾರಣೆಯಾಗದ್ದರಿಂದ ಅವರು ಉಪವಾಸಕ್ಕೆ ತೊಡಗಿದರು ಎಂಬುದಾಗಿ ಚೌದ್ರಿಯವರೂ, ಶೀರಸಿಂಗರವರೂ ಹೇಳಿದರು. ಡಾ। ಸ್ವೀಫುದ್ದೀನ ಕಿಚಲೂರವರ ಸಾಕ್ಷಿಯ ಪತ್ರದ್ದಿದೆ. ರೊಟ್ಟಿಯಲ್ಲಿ ಉಸುಕಿರುತ್ತದೆ, ಪದಾರ್ಥದ ಸ್ವಾದ್ಯವು ತಿನ್ನುವಂಥಾದ್ದಲ್ಲ, ತಾವು ಕೆಲವು ದಿನ ಈ ತರಗತಿಯ ಆಹಾರ ಕೊಂಡು ನೋಡಿದ್ದೇವೆ, ಇನ್ನೇ ತರಗತಿಯ ಕೈದಿಗಳು ತಮಗೆ ಕೊಡುವ ಆಹಾರವನ್ನೂ, ರೊಟ್ಟಿಯನ್ನೂ ತೋರಿಸುತ್ತಿದ್ದರು, ನಾವದನ್ನು ನೋಡಿದ್ದೇವೆ. ಇನ್ನೇ ತರಗತಿಯ ಕೈದಿಗಳಿಗೂ ತಮಗೂ ಭೆಟ್ಟಿಯಾಗದಂತೆ ತನ್ನ ಮೇಲೆ ಹಗಲಿರುಳು ಇತ್ತಲಾಗಿ ಕಾವಲಿಟ್ಟಿದೆ, ಆದಾಗ್ಯೂ ತಮಗೆ ಜೈಲಿನಲ್ಲಿ ಸೇವೆಮಾಡುವ ಕೈದಿಗಳು ತಮಗೆ ಸಿಕ್ಕ ಆಹಾರವನ್ನು ತೋರಿಸುತ್ತಾರೆ, ಇತ್ತೀಚೆಗೆ ತಮಗೆ ಪ್ರತ್ಯೇಕ ಅಡಿಗೆಮನೆಮಾಡಿಕೊಟ್ಟಿದೆ. ಅಡಿಗೆಮನೆ ಮಾಡುವ ಮುಂಚೆ ಇದು ಮಲವಿಸರ್ಜನೆ ಮಾಡುವ ಕೋಣೆಯಾಗಿತ್ತು, ಪ್ಲಾಟಫಾರ್ಮ್ ಯಾನೆ ಸಣ್ಣದ ಸಿರೊಂದು ತೆಗೆದು ಅಡಿಗೆಮನೆ ಮಾಡಿಕೊಟ್ಟಿದ್ದಾರೆ. ಆರೋಗ್ಯಕಾರಿಯಾದ್ದರಿಂದ ಹಾವು ಬಂದಿರಬೇಕೆಂದಿಲ್ಲ. ಹೀಗೆ ಡಾ। ಸ್ವೀಫುದ್ದೀನ ಕಿಚಲೂರವರು ಹೇಳಿದರು. ಬಿಟ್ಟಿಯ ಕೆಲಸ ಮುಗಿದ ತರುವಾಯ ಗಿಯಾನಚಂದರಿಗೆ ಉಪವಾಸ ಮುರಿಯಲು ಡಾ। ಕಿಚಲೂರವರು [illegible] ಮನವೊಲಿಸಿದರು. [illegible] ಕೊಳಕು ಜೈಲನ್ನು ನಾನೆಲ್ಲಿಯೂ ನೋಡಿಲ್ಲ. ಭೂಲೋಕದೊಳಗಿನ ನರಕವಿದು ಎಂದು ಡಾ। ಕಿಚಲೂರವರು ಮ್ಯಾಜಿಸ್ಟ್ರೇಟರ ಸಮಕ್ಷಮ ಗಿಯಾನಚಂದರಿಗೆ ಹೇಳಿ ಒಳ್ಳೇ ಆಹಾರದ ಏರ್ಪಾಡು ಮಾಡುವ ಭಾಷೆಯಿರುವದಾಗಿ ನುಡಿದರು. ಗಿಯಾನಚಂದರು ಮೆಂದು ಒಪ್ಪಲಿಕ್ಕಿಲ್ಲ. ನಾನು [illegible] ಪ್ರತಿಜ್ಞೆ, ನನಗೆ ಕೈ-ಕಾಲಿಗೆ ಬೇಡಿ ಹಾಕಿಸಿದರು, [illegible] ಬೇಡಿ ಹಾಕಿದರು, ನನ್ನ ಕಾಲು ಕೈಗಳ ಘಾಯಗಳಾಗಿವೆ, ಬಿಗಿದವೆ, [illegible] ಅವುಗಳ ಉಪಯೋಗವಿಲ್ಲ. ಉಪವಾಸ ಮಾಡುತ್ತಿದ್ದ ಬಳಿಕ ಅವುಗಳ [illegible] ಬಿಡಲಿಲ್ಲ. ಹೀಗೆ ಗಿಯಾನಚಂದರು ಕಷ್ಟಗಳನ್ನು ವಿವರಿಸಿದರು. ಡಾ। [illegible] ಬಹಳ ಬಹಳ ಸಮಾಧಾನ ಹೇಳಿದ ಬಳಿಕ ಗಿಯಾನಚಂದರು ಒಂದಿಷ್ಟು ಹಾಲು ಕೊಂಡು ಪಾರಣಮಾಡಿದರು. ಬಿಟ್ಟಿಯ ಅಂತ್ಯ ಇನ್ನೂ ತಿಳಿಯಲಿಲ್ಲ. ಈ ಜೈಲಿನಲ್ಲಿ ಬಡ್ಡು ಸತ್ಯಾಗ್ರಹಿಗಳಿಗೆ ಕೊಟ್ಟ ಕಷ್ಟದಿಂದ ಬಗ್ಗೆ ಭ್ರಾಂತವಾಗಿದೆ.

* * *

ಮುಲ್ತಾನದ ಜೈಲಿನಲ್ಲಿ ಮೂವರು ಸೋಧ್ಯಾ ಪ್ರಸಾದ ಸತ್ಯಾಗ್ರಹಿಗಳು ಉಪವಾಸ ತೆಗೆದಿದ್ದಾರೆ. ಡಿಸೆಂಬರ ೧೧ನೇ ತಾರೀಖಿನಿಂದ ಉಪೋಷಣಕ್ಕೆ ಪ್ರಾರಂಭ. ದಿನಾ ೩ ತಾಸು ನೂಲುಗೊಡಬೇಕಾಗಿ ಅವರ ಜೈಲಿನ ಅಧಿಕಾರಿಗಳ ಕಡೆ ಹೇಳಿಕೊಂಡರು. ಜೈಲಿನವರು ಒಪ್ಪಲಿಲ್ಲ, ಕಾರಣ ಉಪವಾಸ.

* * *

[illegible]ದೊಳಗಿನ ಶ್ರೀ ವೆಲ್ಲಾರಿ ರಾಮರಾಯರು ಸೇಲಂ ಜೈಲಿನೊಳಗಿಂದ ಬಿಡುಗಡೆಹೊಂದಿದ್ದಾರೆ. ಇವರು ಅಲ್ಲಿಯ ಜೈಲಿನ ಸ್ಥಿತಿಯ ವಿಷಯ ಮಾಡಿದ್ದೇನಂದರೆ— ಜೈಲಿನೊಳಗಿನ ಜನರ ಸ್ಥಿತಿ ಸುಧಾರಿಸುವಂಥಾದ್ದಲ್ಲ, ಮನಸ್ಸು ವಿಕೃತವಾಗುತ್ತದೆ, ಕಲಿಕೆಯಲ್ಲಿ ಆದೇಶ ಮುಂತಾದವುಗಳ ಕಡೆ ಲಕ್ಷಗೊಡುವದಿಲ್ಲ. ೧೯೨೧ನೇ ಇಸ್ವಿಗಿಂತ ಈಗ ಜೈಲುಗಳ ಸ್ಥಿತಿ ಬಿಗಿಸಾಗಿದೆ.

* * *

ಆಸಾಮ ಪ್ರಾಂತದ ಸಿಲಹೆಟ್ ಜೈಲಿನಲ್ಲಿ ಸರಕಾರ ಕಲಮು ೧೭ ಎ ದ ಬಂದಿ ಬಂದ ಜೈಲ ಅಧಿಕಾರಿಗಳಿಗೆ ನಿಂತು ಸಲಾಮು ಮಾಡಬೇಕು ಹಾಗೆ ಮಾಡದಿದ್ದವರಿಗೆ ಶಿಕ್ಷಾಕಾರ ಅಂದರೆ, ಉಪ್ಪು ಹೆಚ್ಚು ಹಾಕಿದ ಅನ್ನಕೊಟ್ಟ ಆಹಾರ

* * *

ಪಂಜಾಬದ ಮೊಂಗೊಮರಿ ಜೈಲಿನಲ್ಲಿ ಲಾಲಾ ಲಕ್ಷರಾಮ ಸತ್ಯಾಗ್ರಹಿಗಳು ೯ ದಿನ ಉಪವಾಸ ತೆಗೆದು ತೀರಿಕೊಂಡರು. ಮೊಂಗೊ ಜೈಲಿನಲ್ಲಿ ಸಾಕಷ್ಟು ಅರಿವೆ—ಅಂಚಡಿ ಕೊಡದ್ದರಿಂದ ಬಹಳ ಕೈದಿಗಳಿಗೆ ಕಫ ಜ್ವರ ಬಂದು ಅವರು ತೀರಿಕೊಂಡರು. ರಾಜಕೀಯ ಕೈದಿಗಳ ಸಂಖ್ಯೆಯು ದಿನೇ ದಿನೇ ವಿಪರೀತವಾದ್ದರಿಂದ ಪಂಜಾಬ ಪ್ರಾಂತದ ಜೈಲುಗಳೊಳಗಿಂದ ೫೦೦ ಮಂದಿ ಅಪರಾಧಿ ಕೈದಿಗಳನ್ನು ಬಿಡುಗಡೆಮಾಡಿದ್ದಾರೆ. ಶಿಕ್ಷೆ ಆಗಿಯುತ ಮುಂಚೆಯೇ ಬಿಡುಗಡೆ.

* * *

ಮಥುರಾ ಜೈಲಿನಲ್ಲಿ ಶ್ರೀ ಮುಖ್ತರಸಿಂಗರವರು ಅವ್ಯ ಉಚ್ಚನ್ನು ತಲೆ, ಮೈ-ಕೈ ಮೇಲೆ ಎರಕೊಳ್ಳುತ್ತಾರೆ, ಅವರಿಗೆ ಹುಚ್ಚು ಹಿಡಿದಿದೆ. ಧಾವಿಕರಿದ್ದರವರು ಜೈಲಿನೊಳಗಿನ ಕಷ್ಟಗಳನ್ನು ತಾಳಲಾರದೆ, ಅವರು ಭ್ರಮಿಷ್ಟರಾಗಿದ್ದಾರೆ.

* * *

ಕಲಕತ್ತೆಯ ಕೈದಿ ಸತ್ಯಾಗ್ರಹಿಗಳು ತಮ್ಮ ದೂರುಗಳನ್ನು ಜೈಲಿನ ಅಧಿಕಾರಿಗಳು ಪರಿಹರಿಸದ್ದರಿಂದ ಉಪವಾಸ ಮಾಡಿದ್ದರು. ಸ್ತ್ರೀಯರು ಸಹ ಅನ್ನಸ್ಪರ್ಶಮಾಡಲಿಲ್ಲ. ಜೈಲಿನವರು ಅವುಗಳನ್ನು ಪರಿಹರಿಸಲೊಪ್ಪಿದ್ದರಿಂದ ಅವರು ಉಪವಾಸ ಬಿಟ್ಟು ಅನ್ನಗ್ರಹಣ ಮಾಡಲಾರಂಭಿಸಿದ್ದಾರೆ.

* * *

ನಾಗಪುರದ ಡಾ। ಮುಂಜೆಯವರು ಜೈಲಿನಲ್ಲಿದ್ದರು. ಅಸ್ವಾಸ್ಥ್ಯದ ಕಾರಣ ಅವರು ಬಿಡುಗಡೆ ಹೊಂದಿದ್ದಾರೆ. ಕೈದಿಗಳಿಗಾಗಿ ಹಲವು ಗ್ರಂಥಗಳನ್ನು ಜೈಲಿನ ವಾಚನಾಲಯಕ್ಕೆ ಅವರು ಅರ್ಪಿಸಿದ್ದಾರೆ.

* * *

ವಿಸಾಪುರ ಜೈಲಿನಿಂದ ಶ್ರೀ ಆಲೇಕರರವರು ಬಿಡುಗಡೆ ಹೊಂದಿದ್ದಾರೆ. ಮೊದಲು, ಈ ಜೈಲಿನಲ್ಲಿ ಬಹಳ ನಿರ್ಬಂಧ, ನಡಿಸಿಕೊಳ್ಳುತ್ತಿದ್ದರು; ಈಗ ಕೆಲ ಸುಧಾರಣೆಗಳಾಗಿವೆ. ಎರಡೂ ಹೊತ್ತು ಜೋಳದ ರೊಟ್ಟಿ ತಿನ್ನಬೇಕಾಗಿತ್ತು, ಈಗ ಒಮ್ಮೆ ಅನ್ನ, ಒಮ್ಮೆ ರೊಟ್ಟಿ; ಹೀಗೆ ತಿರುವಾಳುವಾಗಿದೆ. ಆದಾಗ್ಯೂ ಕೆಲ ಮಟ್ಟಿಗೆ ವಿಸಾಪುರದ ವಿಶೇಷ ಹೇಳತಕ್ಕಂಥಾದ್ದಿದೆ. ಅನ್ನದಲ್ಲಿ ಸಣ್ಣ ಸಣ್ಣ ಮಣ್ಣಿನ ಹೆಂಟೆಗಳಿರುತ್ತವೆ, ೫ ತೊಲಿ ಅಂದರೆ ಸಾಧಾರಣವಾಗಿ ೧೦ ತೊಲೆ ಬೇಳೆ ಪದಾರ್ಥ ಕೈದಿಗಳಿಗೆ ಸಿಗಬೇಕು, ಮುಂಚೆ ಅದು ಬಹಳ ಪತ್ಲವಾಗಿರುತ್ತಿತ್ತು; ಘನವಾಗಿರುತ್ತಿತ್ತು, ಅದರಿಂದ ಉಣ್ಣಲಿಕ್ಕೆ ಕೊಂಡರೆ ಯಾಗುತ್ತದಾಗಿ ಹೇಳಿದ ಮಾತನ್ನು ಜೈಲಿನವರು ಮನ್ನಿಸಿ ಈಗ ತೆಳುವಾಗಿ ಮಾಡಿಕೊಡುತ್ತಾರೆ. ಆದರೆ, ಅದರೊಳಗೆ ಕಾಳು ಮಾತ್ರ ಬೇಳೆಯಿರುವದಿಲ್ಲ. ಇಲ್ಲಿಯ ಕೈದಿಗಳಿಗೆ ಮೂರು ಶಿಕ್ಷೆಯ. ಹೊರತು ಅನೇಕ ಶಿಕ್ಷೆಗಳನ್ನನುಭವಿಸಬೇಕಾಗುತ್ತದೆ. ಅಪರಾಧ ಒಂದು ಕಡೆ, ಶಿಕ್ಷೆ ಮತ್ತೊಂದು ಕಡೆ, ಇಂಥ ಪ್ರಕಾರಗಳೇ ಹೇರಳ. ದಿನಾ ಜಸೆಂಟಿಗೆ ಕೈದಿಗಳನ್ನು ಎಣಿಸುತ್ತಾರೆ. ಹೀಗೆ ಎಣಿಸುವಾಗ ಒಬ್ಬ ಮಾಸ್ತರನು ಒಬ್ಬ ಕೈದಿಗೆ ಚಲೋ ಪೆಟ್ಟುಕೊಟ್ಟನು. ಇದು ಕಂಡ ಕೋಣೆಯೊಳಗಿನ ಕೈದಿಗಳು ಅದನ್ನು ನೋಡಿ 'ಹೊಡೆಯಬೇಡ, ಹೊಡೆಯಬೇಡ' ವೆಂದು ಕೂಗಿದರು. ಮಾಸ್ತರನು ಉಪಾಯವಿರಲಿಲ್ಲ. ಜೈಲಿನ ಅಧಿಕಾರಿಗಳ ಬಂದರು. "ಮಾಸ್ತರನು ಕೈದಿಗೆ ಹೊಡೆದರೆ, ಹೊಡಕೊಂಡ ಕೈದಿಯೇ ದೂರಕೊಳ್ಳಬೇಕು, ನೀವು ಯಾಕೆ ಬೊಬ್ಬೆ ಹೊಡೆದಿರಿ? ಇದು ಜೈಲ ಕಾಯಿದೆಯಂತೆ ಅಪರಾಧ, ಕಾರಣ ನಿಮಗಿರುವ ಪತ್ರ ಬರೆಯುವ ಹಕ್ಕು ಮತ್ತು ಪುಸ್ತಕ ಓದುವ ಹಕ್ಕು ರದ್ದುಮಾಡಲಾಗಿದೆ, ಎಂಬುದಾಗಿ ಜೈಲ ಅಧಿಕಾರಿಗಳು ತೀರ್ಪುಕೊಟ್ಟರು. ಹೀಗೆ ಬೊಬ್ಬೆ ಹೊಡೆದ ಅಪರಾಧ ಚೌಕಶಿಯಾದ ಮೇಲೆ, ಮಾಸ್ತರನ ಕಡೆಯಿಂದ ಹೊಡಕೊಂಡ ಅಪರಾಧದ ಚೌಕಶಿ ನಡೆಯಿತು. 'ನೀನು ಮಾಸ್ತರನ ಕಡೆಯಿಂದ ಹೊಡಕೊಂಡ ಕಾರಣದಿಂದ ಅಲ್ಲ ಗೊಂದಲವಾಯಿತು, ಕಾರಣ, ನಿನಗೆ ೧ ತಿಂಗಳ ಕಾಲ ಬೇಡಿ ಹಾಕಿಡ್ಡಬೇಕಾಗಿ ಈ ಮೂಲಕ ವಿಧಿಸಲಾಗಿದೆ." ಎಂಬುದಾಗಿ ಹೊಡಕೊಂಡ ಕೈದಿಗೆ ತೀರ್ಪು !

ರತ್ನಾಗಿರಿ ಸೆಂಟ್ರಲ್ ಜೈಲಿನೊಳಗಿಂದ ಶ್ರೀ ದಾಸ್ತಾನೇ ಪಟವರ್ಧನರವರು ಬಿಡುಗಡೆ ಹೊಂದಿದ್ದಾರೆ. ಈ ಜೈಲಿನಲ್ಲಿ ಜಾತಿಭೇದವನ್ನು ಪಾಲಿಸುತ್ತಾರೆ. ಭಂಗಿ ಕೆಲಸವನ್ನು ಭಿಲ್ಲ, ಕಟಕಾರಿ, ಚಮಗಾರ, ಹೊಲೆಯ ಮೊದಲಾದವರಿಗೆ ಕೊಡುತ್ತಾರೆ; ಉಳಿದವರಿಗೆ ಕೊಡುವದಿಲ್ಲ. ಭಂಗಿ ಜಾತಿಯವರು ಮಾತ್ರ ಭಂಗಿ ಕೆಲಸ ಮಾಡುತ್ತಾರಲ್ಲದೆ, ಬೇರೆ ಜಾತಿಯವರು ಮಾಡುವದಿಲ್ಲ. ಉಚ್ಚಜಾತಿಯವರಂತೆಯೇ ಈ ಕೆಲಸವು ಹೀನವಾದದೆಂದು ಉಳಿದವರು ಎಣಿಸುತ್ತಾರೆ. ಕಾರಣ, ಹೀಗೆ ಪಂಗ್ತಿಭೇದ ಮಾಡುವದು ತರವಲ್ಲವೆಂದು ನಾವು ಭಂಗಿಯ ಕೆಲಸ ಮಾಡಲು ಮುಂದಾದೆವು. ಜೈಲಿನವರು ನಮಗೆ ಆ ಕೆಲಸ ಮಾಡಲು ನಿಯಮವಿಲ್ಲವಾಗಿ ಹೇಳಿದರು. ನಮ್ಮ ಭಂಗಿಯ ಕೆಲಸವನ್ನಾದರೂ ನಾವು ಮಾಡಿಕೊಳ್ಳುತ್ತೇವೆಂದು ಜೈಲಿನವರಿಗೆ ನಾವು ತಿಳಿಸಿದೆವು. ಅದಕ್ಕೂ ಅವರು ಒಪ್ಪಲಿಲ್ಲ. ಹೀಗೆ ಕೈದಖಾನೆಯಲ್ಲಿ ಪ್ರಜೆಗಳೊಳಗೆ ಪಕ್ಷಪಾತ ಮಾಡುವದು ತರವಲ್ಲವಾಗಿ ಶ್ರೀ ದಾಸ್ತಾನೇ-ಪಟವರ್ಧನರವರ ಹೇಳಿಕೆ

* *

ನಾಗಪುರದ 'ಹಿತವಾದ' ಪತ್ರಿಕಾಕರ್ತರು ಅಲ್ಲಿಯ ಜೈಲನ್ನು ನೋಡಿಬಂದರು. ಜೈಲಿನ ಅಧಿಕಾರಿಗಳು ೩ನೇ ತರಗತಿಯ ಕೈದಿಗಳಿಗೆ ಹೀನಾಯಿಸುತ್ತಾರೆ, ಆಗಿಂದಾಗ ಅಧಿಕಾರದರ್ಪ ತೋರಿಸಿ ಅಪಮಾನಗೊಳಿಸುತ್ತಾರೆ. ಅವರಿಗೆ ಬೇಕಾದ ಒದವಿಗಳ ಪೂರೈಕೆ ಮಾಡುವದಿಲ್ಲ. ಸಾಕಷ್ಟು ಅರಿವೆ-ಕಂಬಳಿ ಕೊಡುವದಿಲ್ಲ, ಅಸ್ವಸ್ಥತೆಯಿಂದ ಔಷಧೋಪಚಾರವಾಗುವದಿಲ್ಲ, ಪತ್ರಿಕೆಗಳು ಓದಸಿಗುವದಿಲ್ಲ. ೩ನೇ ತರಗತಿಯ ಕೈದಿಗಳ ಸ್ಥಿತಿಯಂತು ಬಹಳ ಕಷ್ಟಕರ. ಅವರಿಗೆ ಬೇಳೆ-ಕಾಯಿಪಲ್ಲೆ ಒಟ್ಟುಗೂಡಿಸಿ ಕೊಡುತ್ತಾರೆ. ಒಂದು ದಿನ ಅದು ಸಪ್ಪೆ, ಒಂದು ದಿನ ಉಪ್ಪೇ ಉಪ್ಪು! ಅವನ್ನು ಪ್ರತ್ಯೇಕವಾಗಿ ಕೊಡಬೇಕಾಗಿ ಕೈದಿಗಳು ಹೇಳಿದಾಗ್ಯೂ ಆ ಕಡೆ ಲಕ್ಷ್ಯಗೊಡುವದಿಲ್ಲ. ಎಂಥ ಸತ್ವದ ಜವಾರಿಯ ರೊಟ್ಟಿ ಕೊಡುತ್ತಾರೆ. ಒಂದು ಬಾರಿ ಗೋದಿ ರೊಟ್ಟಿ ಕೊಡಬೇಕಾಗಿ ಕೈದಿಗಳ ಅಂಬೋಣ. ಬೆಳಿಗ್ಗೆ ಗಂಜಿ ಕೊಡುತ್ತಾರೆ. ಬಾಲ್ದಿಯೊಳಗೆ ತುಂಬಿತಂದ ಗಂಜಿಯನ್ನು 'ಹಿತವಾದ' ಪತ್ರಿಕಾಕರ್ತರು ನೋಡಿದರು, ಅದರ ಕೆಳಗೆ ನೋಡಿ 'ಹಿತವಾದ' ಪತ್ರಿಕಾಕರ್ತರು ಹೇಸಿದ್ದಾರೆ. ಉಣ್ಣುವ ಬಟ್ಟಲು ಕಬ್ಬಿಣದ್ದು, ಅವನ್ನು ಬಹು ಜಾಗ್ರತೆಯಿಂದ ತಿಕ್ಕದಿದ್ದರೆ ಜಂಗು ಬಂದು ಹೊಲಸಾಗುತ್ತವೆ. ಕಾರಣ ಬೇರೆ ಪಾತ್ರೆ ಕೊಡಬೇಕಾಗಿ ಕೈದಿಗಳು ಹೇಳಿದರು. ಕಬ್ಬಿಣದ ಕಿಲುಬು ಶಕ್ತಿವರ್ಧಕವೆಂದು ಜೈಲಿನ ಅಧಿಕಾರಿಗಳು ಕೈದಿಗಳಿಗೆ ಉತ್ತರ ಕೊಟ್ಟರಾಗಿ 'ಹಿತವಾದ'ಕರ್ತರು ಬರೆಯುತ್ತಾರೆ

* *

ಶ್ರೀ ಕಾ. ಕ್ಷೇತ್ರದ ಶ್ರೀ ಕೃ. ಪ್ರಕಾಶರವರು ಶ್ರೀ ಕಾ. ಜೈಲಿನೊಳಗಿನ ತಮ್ಮ ಅನುಭವಗಳನ್ನು ಪ್ರಕಟಿಸಿದ್ದಾರೆ. ಅವರು ಬರೆಯುವದೇನೆಂದರೆ:— ಜೈಲಿನ ನಿಯಮಗಳ ಪುಸ್ತಕ ಕೊಡಿರೆಂದು ನಾನು ಜೈಲಿನ ಅಧಿಕಾರಿಗಳಿಗೆ ಕೇಳಿದೆ. ನಿಯಮಗಳಂತೆ ನಡೆಯಬೇಕಾಗಿ ನನ್ನ ಇಚ್ಛೆಯಿದೆ. ನಿಯಮಗಳ ಪುಸ್ತಕ ತೋರಿಸುವದು ನಿಯಮಕ್ಕೆ ವಿರುದ್ಧವಾದದ್ದೆಂದು ನನಗೆ ಹೇಳಲಾಯಿತು. ಇಲ್ಲಿ ೨-೩ನೇ ತರಗತಿಯಲ್ಲಿ ಭೇದವಿಲ್ಲ; ಎರಡನೇ ತರಗತಿಯವರಿಗೆ ಬಾಧೆ ಇರುತ್ತಾರೆ. ಒಬ್ಬ ಶ್ರೀಮಂತನಾದ ಗುತ್ತಿಗೆದಾರರು ೧ನೇ ತರಗತಿಯವರು. ಅವರಿಗೆ ೨-೩ನೇ ತರಗತಿಯ ಕೋಣೆಯಲ್ಲಿ ಹಾಕಿಟ್ಟರು. ನಾನು ೩ನೇ ತರಗತಿಯಲ್ಲಿ ೩ ದಿನ ಇದ್ದೆ. ಆ ಮೇಲೆ ನನಗೆ ೧ನೇ ತರಗತಿ ಕೊಟ್ಟರು. ನಾನು ಒಲ್ಲೆಂದರೂ ನನಗೆ ಆ ಕಷ್ಟ ನೀಡಿದರು. ಜೈಲಿನ ಅಧಿಕಾರಿಗಳು ಮಾಡಿದ್ದೇ ಪೂರ್ವದಿಕ್ಕು! ಕೈದಿಗಳ ಇಷ್ಟಾನಿಷ್ಟತೆಯನ್ನು ವಿಚಾರಿಸುವದಿಲ್ಲ ಶ್ರೀ ಕೃ. ಪ್ರಕಾಶರವರು ರಾಷ್ಟ್ರೀಯ ಸಭೆಯ ಕಾರ್ಯದರ್ಶಿಗಳಿದ್ದರು.

ಸೆರೆಮನೆಯಲ್ಲಿ ರಾಜಕೀಯ ಕೈದಿಗಳ ಮೇಲೆ ಬೆತ್ತ ಪ್ರಹಾರವಾಯಿತು.

* *

ಈ ಸೆರೆಮನೆ ಸೇರಿದ ಸ್ತ್ರೀ-ಸತ್ಯಾಗ್ರಹಿಗಳಿಗೆ ೩ನೇ ತರಗತಿಯಲ್ಲಿ ಸೇರಿಸಿದ್ದರು. ಇದರಿಂದ ಅಲ್ಲಿಯ ಜೈಲಿನಲ್ಲಿರುವ ೧ನೇ ತರಗತಿಯ ಕೈದಿಗಳಾದ ಶ್ರೀ ಜತೀಂದ್ರ ಮೋಹನ ಸೇನಗುಪ್ತ ಮುಂತಾದವರು ನಿಷೇಧಾರ್ಥವಾಗಿ ಉಪವಾಸ ಮಾಡಿದರು. ಜೈಲಿನ ಅಧಿಕಾರಿಗಳು ಸತ್ಯಾಗ್ರಹಿ ಸ್ತ್ರೀಯರಿಗೆ ೨ನೇ ತರಗತಿಯಲ್ಲಿ ಸೇರಿಸಿದ್ದಾರೆ.

* *

ನಾ| ವಿಠ್ಠಲಭಾಯಿ ಪಟೇಲರ ಪ್ರಕೃತಿಯು ಚಿಂತಾಜನಕವಾಗಿದೆ. ಮುಂಬಯಿಯ ಡಾಕ್ಟರರಿಂದ ಪಟೇಲರನ್ನು [illegible] ಅವರಿಗೆ ಕೊಡುವಷ್ಟರ ಜೈಲಿನಲ್ಲಿ [illegible] ಸರಕಾರಿ ಡಾಕ್ಟರ [illegible] ಇವರ ಹೇಳಿಕೆ. ಶ್ರೀ ಪಟೇಲರು ಬಹಳ ಅಶಕ್ತರಾಗಿದ್ದಾರೆ; ಮುಂದೆ ವ್ಯಕ್ತ, ಹಾಲು-ಹಣ್ಣು ಮೊದಲಾದವುಗಳ ಮೇಲೆ ಅವರ ಪ್ರಕೃತಿ ಹೀನವಾಗಿದೆ. ಅವರಿಗೆ ಈಗ ಹಲ್ಲುಗಳಿವೆ, ಅವು ಅಲುಗಾಡುತ್ತಿವೆ, ತಿಂದ ಆಹಾರ ಜೀರ್ಣವಾಗುವದಿಲ್ಲ, ಕಾರಣ, ಅವರ ಪ್ರಕೃತಿಯನ್ನು ಬೇಗನಾಗಿ ತಪಾಸ ಮಾಡಬೇಕು; ಹೀಗೆ ಅವರ ಅಂಬೋಣ. ಇಲ್ಲದಿದ್ದರೆ, ಅನರ್ಥವೊದಗುವದಾಗಿಯೂ ಡಾಕ್ಟರರು ಸೂಚಿಸುತ್ತಾರೆ. ಶ್ರೀ ಪಟೇಲರು ಶಸ್ತ್ರಪ್ರಯೋಗಕ್ಕೆ ಮೋಜಿನ ಮೇಲಿಂದ ಬೆಸ್ತರಿಂದ [illegible] ಅಶಕ್ತಿ ಹೆಚ್ಚಿದೆ. [illegible] ಈ ಸಂಗತಿಯು [illegible] ಡಾಕ್ಟರರು ಸರಕಾರಕ್ಕೆ [illegible] ರು. ಈ ಸಲಹೆಯನ್ನು ಶ್ರೀ ಪಟೇಲರಿಗೆ ತೋರಿಸಬೇಕಾಗಿ ಸರಕಾರಿ ಡಾಕ್ಟರರು ಶ್ರೀ ಪಟೇಲರಿಗೆ ಹೇಳಿದರಂತೆ. ಪಟೇಲರವರು ಎಲ್ಲ ಸಂಗತಿಗಳನ್ನು ಸರ್ದಾರರಿಗೆ ತಿಳಿಸಿದ್ದಾರೆ ಮತ್ತು ಸರಕಾರಕ್ಕೆ ತಿಳಿಸಿದ್ದಾರೆ. ಪಟೇಲರವರೊಳಗೆ ಡಾ| ಪುರುಷೋತ್ತಮದಾಸ ಪಟೇಲರವರು ಶ್ರೀ ವಿಠ್ಠಲಭಾಯಿಗಳ ಮನೆತನದ ವೈದ್ಯರು. ಶ್ರೀ ವಿಠ್ಠಲಭಾಯಿಗಳ ಆಯುರ್ದಿನ [illegible], ಶ್ರೀ ವಿಠ್ಠಲಭಾಯಿಯವರಿಗೆ ಅವರು ಹೊರಬರುವವರೆಗೆ ಸ್ವರಾಜ್ಯ ದೊರೆಯದವಾಗಿ ಒಂದು ಸಂದೇಶ ಕಳಿಸಿದ್ದಾರಂತೆ!

* *

ಮೌ| ಅಬ್ದುಲ್ ಕಲಾಮ್ ಆಝಾದರವರು ಮೀರಠ ಜೈಲಿನಲ್ಲಿದ್ದಾರೆ. ಅವರ ಕಾಲು ಬಾಗಿದೆ. ನೋಯುತ್ತಿದೆ. ಮೀರಠದಿಂದ ಅವರಿಗಿನ್ನೂ ವರ್ಗವಾಗಿಲ್ಲ. ಶ್ರೀ ಮಾಸ್ಟರ್ ಕಾಶಿಲಾಲ, ಎಮ್. ಏ. ರವರಿಗೆ ಏಕಾಂತವಾಸದ ಶಿಕ್ಷೆಯಾಗಿದೆ. ಜೈಲ ಸೂಪರಿಂಟೆಂಡೆಂಟರು ಜೈಲಿನ ಒಳಬಂದ ಕೂಡಲೆ ೧-೩ನೇ ತರಗತಿಯ ಕೈದಿಗಳು ಸಾಲಾಗಿ ಎದ್ದು ನಿಲ್ಲಬೇಕು

* *

ತಮುಜನ್ ಜೈಲಿನಲ್ಲಿ ಶ್ರೀಮತಿ ಬೇನೆ ಬಂದಿವೆ. ಕಲಕತ್ತೆಯ ಜೈಲಿನಲ್ಲಿ ೧೦ ವರ್ಷದ ಒಬ್ಬ ಹುಡುಗಿಯು ೪ ತಿಂಗಳ ಶಿಕ್ಷೆಯನ್ನನುಭವಿಸುತ್ತಿದ್ದಳು. ಅವಳಿಗೆ [illegible] ವಾಯಿತು. ಶಸ್ತ್ರಪ್ರಯೋಗಕ್ಕಾಗಿ ತಾನು ಪಿರ್ಯಾದಿ ಮಾಡುತ್ತೇನೆಂದು ಅವಳ ತಂದೆ ಮೆಜಿಸ್ಟ್ರೇಟರ ಕಡೆಗೆ ಅರ್ಜಿ ಮಾಡಿದನು. ನೆರೆವೇರಿಸಿದ ಬಳಿಕ ಆ ಹುಡುಗಿಯು ಕಾಯಿದೆಭಂಗದಲ್ಲಿ ಪುನಃ ಸೇರುವದಿಲ್ಲವಾಗಿ ಬರೆದುಕೊಟ್ಟರೆ, ತಕ್ಷಣ ಅಪ್ಪಣೆ ಕೊಡುತ್ತೇನಾಗಿ ಮೆಜಿಸ್ಟ್ರೇಟರು ಹುಕುಮು ಮಾಡಿದರು. ತಂದೆ ಹಾಗೆ ಬರೆದುಕೊಡಲಿಲ್ಲ. ಅವಳ ತಾಯಿಯೂ ಅದೇ ಸೆರೆಮನೆಯಲ್ಲಿದ್ದಾಳೆ.

* *

ಬಿಹಾರದ ರಾಜಧಾನಿಯಾದ ಪಾಟನಾ ಪಟ್ಟಣದಲ್ಲಿ ಹೊಸ ಜೈಲು! ಅದು ಮುಂಚೆ ಕುದುರೆಗಳ ಲಾಯವಾಗಿತ್ತು. ೧೫ ದಿವಸಗಳಲ್ಲಿ ೩ ಸತ್ಯಾಗ್ರಹಿಗಳು ಅಲ್ಲಿ ತೀರಿಕೊಂಡರು

* *

ಸಂಯುಕ್ತ ಪ್ರಾಂತದ ಜೌನಪುರ ಜೈಲಿನಲ್ಲಿ ಸತ್ಯಾಗ್ರಹಿಗಳಿಗೆ ಕಂಡ ಹಾಗೆ ಹೊಡೆಯುತ್ತಾರೆ. ಏಕಾಂತವಾಸದ ಶಿಕ್ಷೆ ವಿಧಿಸುತ್ತಾರೆ. ಸಾಲ್ಟಿಗೆ ಚಳಿಯ ಪಟ್ಟು ಕೊಟ್ಟರು. ಇದರಿಂದ ಅವರಿಗೆ [illegible]ವಾಗಲಿಲ್ಲ. ಗೋರಖಪುರದ ಶ್ರೀ ಇಂದ್ರದೇವ ತ್ರಿಪಾಠಿಯವರು ಏಕಾಂತವಾಸದ ಶಿಕ್ಷೆ ಅನುಭವಿಸಿದ ಬಳಿಕ, ಬಿಡುಗಡೆಯಾಗುವ ದಿವಸ ಜೈಲ ಆಫೀಸಿಗೆ ಕರೆಯಿಸಿದರು. ಅಲ್ಲಿ ಅವರಿಗೆ ಹೊಡೆಯಲಾಯಿತು. ಅನೇಕ ಬಾರಿ ಅವರು ಮೂರ್ಛೆಗೊಂಡು ಬಿದ್ದರು. ಈಗ ಅವರಿಗೆ ಮಾತನಾಡಲಾಗುವದಿಲ್ಲ; ಕೈಯ ಸ್ವಾಧೀನವಿಲ್ಲ. ಕೈದಖಾನೆಯಲ್ಲಿ ಬೀಸುವ, ಗಾಣ ಎಳೆಯುವಂಥ ಕಷ್ಟದ ಕೆಲಸಗಳನ್ನು ಸತ್ಯಾಗ್ರಹಿಗಳಿಗೆ ಕೊಡುತ್ತಾರೆ. ಸತ್ಯಾಗ್ರಹಿಗಳಿಗೆ ಬೆತ್ತದ ಪ್ರಹಾರ ಮಾಡುವದೂ ಉಂಟು.

* *

ಪಂಜಾಬದ ಮುಲ್ತಾನ ಸೆರೆಮನೆಯಲ್ಲಿ ೧೧೦೦ ಕೈದಿಗಳಿದ್ದಾರೆ. ಕಸೂರ ಸೆರೆಮನೆಯಲ್ಲಿ ೧೫೦ ಕ್ಷಯರೋಗಿ ಕೈದಿಗಳನ್ನು ಇಟ್ಟಿದ್ದಾರೆ. ಇದು ಅಪಾಯಕರವೆಂದು ಸರಕಾರಕ್ಕೆ ಅರಿಕೆ ಮಾಡಿಕೊಂಡರೆ, ಆಕಸ್ಮಿಕ [illegible] ಕ್ಷಮಾಗುತ್ತಿದ್ದ. ೧ ತಿಂಗಳಲ್ಲಿ ೧೨ ಕೈದಿಗಳು ಕ್ಷಯರೋಗದಿಂದ ತೀರಿಕೊಂಡರು. ಅಲ್ಲಿ ಬಂದ ಸತ್ಯಾಗ್ರಹಿ ಕೈದಿಗಳಿಗೆ ಈ ಹವೆ ಸೇರುವದಿಲ್ಲ. ಆದ್ದರಿಂದ ಅವರ ತೂಕ ಬಹಳ [illegible] ಇದೆ. ಅವರು ಅಕ್ಷರ ಬಿಡಿದ್ದಾರೆ. ದಿಲ್ಲಿಯೊಳಗಿನ 'ಹಿಂದುಸ್ಥಾನ ಟೈಮ್ಸ' ಪತ್ರಿಕೆಯ ಸುದ್ದಿಗಾರರಿಂದ ಶ್ರೀ ಚಮನಲಾಲರವರು ಕಳೆದ ೩ನೇ ತಾರೀಖಿಗೆ ಬಿಡುಗಡೆ ಹೊಂದಿದರು. ಅವರ ತೂಕ ೧೭ ರತ್ತಲು ಕಡಿಮೆಯಾಗಿದೆ. ಅವರಿಗೆ ಏಕಾಂತವಾಸದ ಶಿಕ್ಷೆಯಾಗಿತ್ತು. ದಿನದ ೨೩ ತಾಸು ಕೋಣೆಯಲ್ಲಿ ಬೀಗ ಹಾಕುತ್ತಿದ್ದರು. ಇದರಿಂದ ಅವರಿಗೆ ವಿದ್ಯಾವ್ಯಾಸಂಗದ ಅಭ್ಯಾಸವಾಗಿ ದೇಶಸೇವೆ ಮಾಡಲು ಮನಸ್ಸು ಮತ್ತು ನಿಶ್ಚಯವಾಯಿತಾಗಿ ಅವರು ಹೇಳುತ್ತಾರೆ. ಸಿಯಾಲ್ಕೋಟ ಯುದ್ಧಮಂಡಳದ ಅಧ್ಯಕ್ಷರಾದ ಶ್ರೀ ಪಂಡಿತ ಗಂಡಮಲ್ಲ ಕರ್ಮಾಕರರವರು ಅದೇ ದಿನ ಬಿಡುಗಡೆ ಹೊಂದಿದರು. ಅವರ ಸಂಗಡ ೧೬ ಮಂದಿ ಸತ್ಯಾಗ್ರಹಿಗಳನ್ನೂ ಬಿಟ್ಟರು. ಬಿಟ್ಟದ್ದು ರಾತ್ರಿ. ಸತ್ಯಾಗ್ರಹಿಗಳಿಗೆ ಅಂಥ ಸಮಯ ಒಂದೊಂದು ಬ್ಲಾಂಕೆಟು ಯಾನ ಕಂಬಳಿ ಕೊಡಬೇಕೆಂದು ನಿಯಮವಿದೆ. ಅದನ್ನು ಕೊಡದೆ ಅವರಿಗೆ ಹೊರದೂಡಿದರು

* *

ಪಂಜಾಬದ ಗುಜರಾತ ಕೈದಖಾನೆಯಲ್ಲಿ ವಾಯವ್ಯ ಸರಹದ್ದಿನ ಪ್ರಾಂತಿಕ ಕಾಂಗ್ರೆಸ ಕಮೀಟಿಯ ಉಪಾಧ್ಯಕ್ಷರಾದ ಶ್ರೀ ಖಾನ ಅಲ್ಲೀ ಗುಲಖಾನರವರಿದ್ದಾರೆ. ಅವರ ತೂಕವು ೧೫ ರತ್ತಲು ಕಡಿಮೆಯಾಗಿದೆ. ಆ ಹವೆ ಅವರಿಗೆ ಆಗುವದಿಲ್ಲ. ಅವರು ಸೆರೆಯಾಳಾಗಿ ೮ ತಿಂಗಳಾಯಿತು. ೬ ತಿಂಗಳು ಆಸ್ಪತ್ರೆಯಲ್ಲಿದ್ದರು. ಈಗ ಕ್ಷಯರೋಗ ಹತ್ತಿರುವದಾಗಿ ವಾರ್ತೆ. ಖಾನ ಅಬ್ದುಲ್ ಗಫ್ಫರಖಾನ ಸತ್ಯಾಗ್ರಹಿಗಳಿಗೆ ಬಹಳ ದಣಿಸುತ್ತಾರೆ. ಅವರಿಗೆ ಬಂದ ಪತ್ರಗಳನ್ನು ಪ್ರಾಂತಿಕ ಸರಕಾರಕ್ಕೆ ಕಳುಹಿ, ಗುಪ್ತ ಪೋಲೀಸ ಖಾತೆಯ ವಿಶ್ವಸ್ತರ ತಪಾಸ ಮಾಡಿ ಆ ಮೇಲೆ ಅವರಿಗೆ ಕೊಡುತ್ತಾರೆ. ಇಂಗ್ಲಿಷ ಪತ್ರಗಳಿದ್ದರೂ ಅದೇ ಪಾಡು! ಇದರಿಂದ ೨ ತಿಂಗಳ ತನಕ ಪತ್ರ ಅವರ ಕೈ ಸೇರುವದಿಲ್ಲ. ಆದಾಗ್ಯೂ ಅವರು ಸಂತೋಷದಿಂದ ಇದ್ದಾರೆ. ಗ್ರಂಥ ಪಠಣ ಮಾಡಿ ಈಶ್ವರಚಿಂತನೆ ಮಾಡುತ್ತ ದಿನಗಳೆಯುತ್ತಾರೆ

* *

ಅಜಮೀರ ಸೆರೆಮನೆಯೊಳಗಿಂದ ನವಯುವಕ ಮಂಡಳದ ಶ್ರೀ ಕಲ್ಯಾಣಮಲ್ಲ ಕಮಾರರವರು ಬಿಡುಗಡೆ ಹೊಂದಿದ್ದಾರೆ. ೩ನೇ ತರಗತಿಯ ಕೈದಿಗಳಿಗೆ ಬಹಳ ದಣಿಸುತ್ತಾರೆ. ಮುಂಜಾವು-ಸಂಜೆ ಈ ಕೈದಿಗಳು ಪತಿತ ಕೈದಿಗಳಂತೆ ಸಾಲ್ಗಾಗಿ ನಿಂತು ಜೈಲ ಅಧಿಕಾರಿಗಳಿಗೆ ಸಲಾಮು ಮಾಡಬೇಕು. ಅದಕ್ಕೊಪ್ಪದವರಿಗೆ ಎಳೆದು ಹೊಡೆಯುತ್ತಾರೆ. ಅವರ ದೂರುಗಳನ್ನು ಕೇಳುವದಿಲ್ಲ. ದೂರು ತಮ್ಮ ಕಡೆ ತರಬಾರದಾಗಿ ಕೈದಿಗಳ ಮೇಲಿನ ಮಾರ್ಗಳಿಗೆ ಜೈಲಿನವರು ಹುಕುಮು ಮಾಡಿದ್ದಾರೆ. ಹಗಲಿಗೆ ಸಹ ಕೋಣೆಯಲ್ಲಿ ಹಾಕಿ ಬೀಗ ಹಾಕುತ್ತಾರೆ. ಇದರ ನಿಷೇಧವೆಂದು ಕೆಲ ಕೈದಿಗಳು 'ರಾಜ್ಯಕ್ರಾಂತಿಗೆ ಜಯವಿರಲಿ' ಎಂದು ಜಯಘೋಷ ಮಾಡಿದರು. ಇದಕ್ಕಾಗಿ ಅವರಿಗೆ ಹಿಡಿದು ಕೋಣೆಯೊಳಗೆ ಹಾಕಿ ಏಕಾಂತವಾಸದ ಶಿಕ್ಷೆ ವಿಧಿಸಿದರು. ೩ ದಿನಗಳ ತನಕ ಹೀಗೆ ಬಂಧಿಸಿಟ್ಟರು. ಆಹಾರ ಕೊಡಲಿಲ್ಲ, ನೀರು ಕೊಡಲಿಲ್ಲ. ಮಲ-ಮೂತ್ರವಿಸರ್ಜನೆ ಮಾಡಗೊಡಲಿಲ್ಲ. ಕಾಲಿಗೆ ಬೇಡಿ, ಕೈ ಬೆನ್ನಹಿಂದ ಕಟ್ಟಿ ಬೇಡಿ! ಬಾಯಿಯಲ್ಲಿ ಬಟ್ಟೆ ತುರುಕಿ ಕಟ್ಟಿದರು.

'झंडू'

द्राक्षासव- – मृद्विकारिष्ट – शारंगधर म. अ. १०

रामबाण औषध

सर्दि घालविणारें
भूक वाढविणारें
शौच्यास साफ करणारें
झोंप आणणारें
शक्ति देणारें
तेजस्वीपणा आणणारें

रुचिकर पेय

किंमत एक रतलास १॥ रुपये

झंडु फार्मास्युटिकल वर्क्स लिमिटेड
मुंबई नं. १४

तीर्थहळ्ळी एजंट पंडित आणी कंपनी.
मेवि एजंट **एम. एल. धाकप्पा आणि ब्रदर्स**
हुबळी एजंट **तिप्पण्णा क्षत्रि. भुसपेठ**

ದಿಲ್‌ಖುಶ್ ಜವಳಿ ಅಂಗಡಿ!

ನಮ್ಮಲ್ಲಿ ಗಂಡಸರು, ಹೆಂಗಸರ, ಹುಡುಗರ, ಹುಡುಗಿಯರಿಗೆ ಶೃಂಗಾರದ ಉಡಿಗೆ ತೊಡಿಗೆಗಳು ಬಗ್ಗೆ ಬೇಕಾಗುವ ಎಲ್ಲ ತರದ ಹೊಸ ಹೊಸ ನಮುನೆಯ ಎಲ್ಲ ದೇಶದ ಫ್ಯಾಶನಿನ ಮತ್ತು ಮನಸ್ಸಿಗೆ ಆನಂದ ಆಗುವ ಊಲನ್, ರೇಶ್ಮೆ, ಮರ್ಸರ್ಯಾಯ್ಝ ಸಿಲ್ಕ, ಜರತಾರಿ, ದೇಶಿ ಮ ವಿಲಾಯ್ತಿ ಜವಳಿ, ಟ್ರಂಕುಗಳೂ, ಹ್ಯಾಂಡ ಬ್ಯಾಗಗಳೂ, ಎಲ್ಲ ತರದ ಹಿಮಾಲಯದ ಪೆಟ್ಟಿಗೆಗಳೂ,



ಛತ್ರಿಗಳೂ ಮ ಬಹುತರದ ಮಾಲು ಸಿಗುವದು. ಒಂದ ಸಾರಿ ಬಂದು ದಯಮಾಡಿಸಿ ನೋಡಿರಿ.

ನಾರಾಯಣರಾವ ಗೋವಿಂದ ಕಾಮತ,
ದಿಲ್‌ಖುಶ್ ಜವಳಿ ಅಂಗಡಿ, ಶಿರಸಿ.

ಸ್ಟಾರ ಆಫ್ ಕೆನರಾ ಪ್ರೆಸ್, ಕುಮಟಾ.

ಈ ಛಾಪಖಾನೆಯಲ್ಲಿ ಎಲ್ಲ ತರದ ಕೆಲಸಗಳು ಕನ್ನಡ, ಮರಾಠಿ, ಇಂಗ್ಲಿಷ ಮತ್ತು ಗಜರಾಥಿಯಿಂದ ಅಂದವಾಗಿಯೂ, ನಿಯಮಿತವಾಗಿಯೂ, ಸೋವಿಯಾಗಿಯೂ, ಮಾಡಿ ಕೊಡಲ್ಪಡುತ್ತವೆ ಅವಶ್ಯವುಳ್ಳವರು ಒಮ್ಮೆ ಅನುಭವಕ್ಕೊಳ್ಳಬಹುದು.

ಅಕ್ಷರಶಿಕ್ಷಣಾರ್ ಉಮೇದ್ವಾರರ, ಕೋರ್ಟ ವಕೀಲರ ಪರಸ್ಪರ ಸಹಕಾರ ಸಂಘದ ಶೇಂಡಿ-ಟೋಲ ವಗ್ಯೆರೆ ಪತ್ರೀವಾರದ ಫಾರ್ಮುಗಳೂ ಹುಂಡಿ ಪುಸ್ತಕ ಗೇಣಿ ರಸೀದಿ ಬೂಕುಗಳೂ ಮಾರಾಟಕ್ಕೆ ತಯಾರಿರುತ್ತವೆ.

ಇದನ್ನು ಮಂಜುನಾಥ ಕೃಷ್ಣ ಶ್ಯಾನಭಾಗ

ಸುಲಭ ಕ್ರಯ! ಡಾಕ್ಟರ ಜೀ. ಬೀ. ಯವರ ಸುಗಂಧಿ ನಶ್ಯದ ಪುಡಿ. ಸುಲಭ ಕ್ರಯ!!

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕಂಡು ಹಿಡಿಯಲಟ್ಟು ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವಂದರೆ— ಪಿನಸಿ, ಒಂಟಿತಲೆನೋವು ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು ಉಬ್ಬಸ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೇ ಕಂಠಕ್ಕೆ ಮೇಲ್ಪಟ್ಟ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕ ಶಕ್ತಿಯನ್ನೂ ಹೆಚ್ಚು ಮಾಡುತದೆ, ಮೂರು ಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಯಿಸಿದರೆ ಎಲ್ಲವೂ ಪರಿಮಳವಾಗುವದು ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿ ಸೀಸೆ ಪ್ಯಾಕೆಟ ಕಳಿಸಲಾದೀತು ಡಬ್ಬಿ ಒಂದಕ್ಕೆ ಕ್ರಯ ರೂ ೦ ೪ ೦. ಸ್ಟಾಂಪಿ ೪ ಆಣೆ ಡಜನ್ ೧ ಕ್ಕೆ ರೂ. ೩-೮-೦. ವ್ಹಿ. ಪಿ. ೦-೮-೦ ದಯವಾಡಿ ನಿಮ್ಮ ಹೆಸರನ್ನೂ, ಅಡ್ರೆಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ

ಡಾ. ಗುರು ಬಸವ ಅಂಡ್ ಕಂಪನಿ ಲಿಮಿಟೆಡ್ ಫ್ರೋ ಬಾ ೫೧೦, ಪೋರ್ಜಟೌನ, ಮದರಾಸ

Wanted-- Candidate desiring to serve in Government Railway and Canal Departments Full particulars and Railway Pass Certificate on 2 annas stamps Apply under registered cover to

Imperial Telegraph College
Nai Sarak, DELHI

ಅಪೂರ್ವ ವಸ್ತುಗಳು.

ಮಿಂಚುತ್ತಣಗೆ ವಸ್ತು— ಕ್ರಯ ರೂ ೦-೧೦-೦
ರೇಡಿಯಮ್ಮಿನ ವಸ್ತು— ,, ,, ೦-೮-೦.
ಹಣ ಕಳಿಸಿ ತರಿಸಿಕೊಳ್ಳಿರಿ. ವ್ಹಿ. ಪಿ.ಯಿಂದ ಬರೋದಿಲ್ಲ

ಪತ್ತೆ: **ಕಲ್ಲಭಾಗ ಗಂಗಾಧರ** ಎಂಡ ಸನ್ಸ್
ಕುಮಟಾ. [ಉತ್ತರ ಕಾನಡಾ]

Tel Address — "OMNIBUS." ತಂತಿ ಪತ್ತೆ— "OMNIBUS"-

ಟಿ. ಎಸ್. ಮೋಟರ ಸರ್ವೀಸ, ಶಿವಮೊಗ್ಗಾ.

ಗವರ್ನಮೆಂಟ ಮೇಲ್ ಕಂಟ್ರ್ಯಾಕ್ಟರ್ಸ

☞ ಶಿವರಾತ್ರಿ ಸಮಯ ಗೋಕರ್ಣಕ್ಕೆ ಸ್ಪೆಶಲ್ ಲಾರಿಗಳು ಸಿಗುತ್ತವೆ!

ಸರ್ವೀಸುಗಳು :-

(೧) ಹುಬ್ಬಳ್ಳಿ-ಯಲ್ಲಾಪುರ-ಅಂಕೋಲಾ ಮೇಲ್ ಲ್ಯಾನ, (೨) ಹುಬ್ಬಳ್ಳಿ-ಮುಂಡಗೋಡ-ಶಿರ್ಸಿ, (೩) ಹಾವೇರಿ-ಹಾನಗಲ್-ಶಿರ್ಸಿ ಮೇಲ್ ಲ್ಯಾನ, (೪) ಅಂಕೋಲಾ ಕುಮಟಾ, ಅಂಕೋಲಾ-ಕಾರವಾರ-ಈ ಮಾರ್ಗಗಳಲ್ಲಿ ರೆಗ್ಯುಲರ್ ಸರ್ವ್ಹೀಸ್ ನಡೆಯುತ್ತವೆ ಪ್ರಯಾಣಿಕರಿಗೆ ಅನುಕೂಲವಾಗುವದಕ್ಕೆ ಎಲ್ಲಾ ಸ್ಟೇಶನುಗಳಲ್ಲಿ ವಕ್ಯ್ಯಾ ವರ್ದಾಡು ಮಾಡಿದೆ. ವಿಶೇಷ ಮಾಹಿತಿ ಆಫೀಸಿನಲ್ಲಿ ಕೇಳಿದರೆ ಸಿಗಬಹುದು

ಹುಬ್ಬಳ್ಳಿ (ಜಿನ್ನಾ ದಾ ವಾತ) **M. Manjappa.**
PROPRIETOR.

ಅ ಮೃ ತಾಂ ಜ ನ

ಎಲ್ಲ ನೋವುಗಳ ಮೇಲೆ ಅತ್ಯುತ್ತಮ ಹಿಂದೀ ಪೇನಬಾಮ!

ರಿಜಿಸ್ಟರ್ಡ್

ಎಲ್ಲ ಪ್ರಕಾರದ ನೋವು, ಕಾಯಿಲೆಗಳನ್ನು ಗುಣಪಡಿಸುತ್ತದೆ ಇಡೀ ಹಿಂದುಸ್ಥಾನದಲ್ಲೆಲ್ಲ ಇದನ್ನು ಉಪಯೋಗಿಸುತ್ತಾರೆ.

ಬೆಲೆ ಡಬ್ಬಿ ೧ಕೆ ೧೦ ಆಣೆ.

(ಅಂಚೆವೆಚ್ಚ ಬೇರೆ)

ಎಲ್ಲ ಕಡೆಯಲ್ಲೂ ಸಿಗುತ್ತೆ: —

ಅಮೃತಾಂಜನ ಡಿಪೋ,

ಮುಂಬಯಿ ಮತ್ತು

Regd. No. B 1270.

Monday, 12th January, 1931.

ವರ್ಷ ೧೫

ಸಂಚಿಕೆ ೧೧

ಕಾನಡಾವೃತ್ತ.

THE KANARA NEWS.

नरपतिहितकर्ता द्वेष्यतां याति लोके जनपदहितकर्ता त्यज्यते पार्थिवेन्द्रैः
इति महति विरोधे वर्तमाने समाने नृपतिजनपदानां दुर्लभः कार्यकर्ता

ಪ್ರತಿ ಸೋಮವಾರಕ್ಕೆ ಹೊರಡಿಸಲ್ಪಡುವದು.

ಪತ್ರದ ವರ್ಗಣಿ.

ಕುಮಟೆಯಲ್ಲಿ ಅಗಾವು:
ರೂಪಾಯಿ 2-4-0.
ಮನಿಯಾರ್ಡರಿಯಿಂದ
ರೂ. 3-0-0.
ವ್ಹಿ ಪಿ ಅಂಚೆವೆಚ್ಚ ಸೇರಿ
ರೂಪಾಯಿ 3-2-0.
ಬಿಡಿ ಸಂಚಿಕೆಗೆ 0-1-0.
ಹಳೇ ಸಂಚಿಕೆಗೆ 0-2-0

ಜಾಹೀರಾತುಗಳ ದರ.

ಕನ್ನಡ, ಇಂಗ್ಲಿಷ ಸ್ಮಾಲ ಪ್ಯಾಯಿಕ (೧೫ ಎಮ್ ಉದ್ದ) ೮ ಸಾಲುಗಳವರೆಗೆ ರೂ 1-0-0 ಆ ನಂತರ ಪ್ರತಿಸಾಲಿಗೆ 0-2-0 ಹೆಚ್ಚಿಗದ ಸಾಲು ಎಷ್ಟು ಹೊಕ್ಕಿರುವದೋ ಆ ಮಾಪದಿಂದ ಅಷ್ಟು ಸಾಲುಗಳು ಹಿಡಿಯಲ್ಪಡುವವು.

ಬಾಕಿ ಜಾಹಿರಾತುಗಳ ಬಗ್ಗೆ ಪತ್ರದ್ವಾರ ಯಾ ಸಮಕ್ಷ ತಿಳಿಸಲ್ಪಡುವದು.

(ಕುಮಟಾ— ಕಾನಡಾವೃತ್ತ ಸೋಮವಾರ, ತಾರೀಖು ೧೨ ಮಾಹೆ ಜನವರಿ ಸನ್ ೧೯೩೧ನೇ ಇಸವಿ.)

ಕೃಷ್ಣರಾವ ಕೇಶವ ಗ್ಯಾತೊಂಡೆ,
ಆಯರ್ನ ಮರ್ಚಂಟ,
ಕುಮಟಾ (ಉ. ಕನ್ನಡ.)

ನಮ್ಮಲ್ಲಿ

ಈ ಕೆಳಗಿನ ಸಾಮಾನುಗಳು ಅಗ್ಗವಾಗಿ ರಖಂ ಆಗಿಯೂ, ಚಿಲ್ಲರೆಯಾಗಿಯೂ ಸಿಗುತ್ತವೆ:- ಸ್ಟೇಶನರಿ, ಹಾರ್ಡವೇರ, ಕಬ್ಬಿಣ, ಸುಗಂಧದ್ರವ್ಯ, ಔಷಧಿಗಳು, ತರತರದ ಸಾಬಾಣಗಳು, ಬಣ್ಣ-ಬ್ರಶ್ಶಗಳು, ಗಾಜಿನ ಸಾಮಾನು ಇತ್ಯಾದಿ ಕಿರಕೋಳ ವ್ಯಾಪಾರಸ್ಥರು ಠೋಕ ಮಾಲವನ್ನು ಕೊಂಡರೆ, ಸವಲತ್ತು ಸಿಗುತ್ತೆ. ನಿಮ್ಮ ಗಿರಾಕಿಯಾಗಿ ಲಾಭ ಪಡೆಯತಕ್ಕದ್ದು.

ಪ್ರಸಿಡೆನ್ಸಿ ಪ್ರಾವಿಡೆಂಟ ಎಂಡ್ ಜನರಲ್ ಇನ್ಶೂರನ್ಸ ಕಂಪನಿ, ಲಿಮಿಟೆಡ್.
ಹೆಡ್ ಆಫೀಸ:- ಅವ್ಯಾಕ ಬಿಲ್ಡಿಂಗ,
ಬೆಲಾರ್ಡ ಇಸ್ಟೇಟ, ಫೋರ್ಟ, ಮುಂಬಯಿ.

“ಇಂಡಿಯನ್ ಇನ್ಶೂರನ್ಸ ಜರ್ನಲ್” ಎಂಬ ಪತ್ರಿಕೆಯು ಸಪ್ಟೆಂಬರ ಸಂಚಿಕೆಯಲ್ಲಿ ಬರೆದದ್ದೇನಂದರೆ:- ಜೀವ ವಿಮೆ ಕಂಪನಿಯ ಸಾಂಪತ್ತಿಕ ಸ್ಥಿತಿಯನ್ನು ಪರೀಕ್ಷಿಸಬೇಕಾದರೆ, ವಿಮೆಯ ಲೆಖ್ಖದ ಮಾಹಿತಿಯಿದ್ದ ತಪಾಸಣೆಯು ಮಾಡಿದ ಕಂಪನಿಯ ಸ್ಥಿತಿ-ಗತಿಯು ಪತ್ರಿಕೆಯನ್ನೋದಬೇಕು. ಪ್ರಾವಿಡೆಂಟ ಸೊಸೈಟಿಯ ಸ್ಥಿತಿಯಾದರೂ ಹಾಗೆಯೇ. 'ದಿ ಪ್ರೆಸಿಡೆನ್ಸಿ ಪ್ರಾವಿಡೆಂಟ' ಕಂಪನಿಯು ಇಂಥ ಪರೀಕ್ಷೆಯಲ್ಲಿ ತಗ ಕೆಳಗಡೆ ಹೋಗದಿರುವದು. ಇಡೀ ಹಿಂದುಸ್ಥಾನದಲ್ಲಿ ಚಲೋ ಸಮೃದ್ಧ ಸ್ಥಿತಿಯುಳ್ಳದ ಪ್ರಾವಿಡೆಂಟ ಕಂಪನಿಯೆಂದರೆ ಇದೊಂದೇ ಎಂದು ನಿರ್ವಿವಾದವಾಗಿ ಸಿದ್ಧವಾದ ಮಾತು. ವಿಮೆ ಇಳಿಸುವ ಬವರಿಗಾಗಿ ಈ ಕಂಪನಿಯು ಭದ್ರತೆಯುಳ್ಳಾದರಿಯನ್ನೊದಗಿಸಿದೆಂದು ಹೇಳಬಹುದು. ಸ್ತ್ರೀ-ಪುರುಷರೂ, ಮಕ್ಕಳೂ ವಿಮೆ ಇಳಿಸಬಹುದು.

ಪ್ರೀಮಿಯಮ್:- ರೂ. ೩, ೧, ೦-೮-೦.

ಮೆಹನತಿಯಿಂದ ಕಂಪನಿಯ ಕೆಲಸ ಮಾಡುವವಗೆ ಚಲೋ ಪ್ರತಿಫಲ ಸಿಗುತ್ತೆ

ಅಪೂರ್ವ ವಸ್ತುಗಳು.

ವ ಕಣ್ಣಿಗೆ ಮದ್ದು:— ಕ್ರಯ ರೂ. ೦-೧೦-೦
ಶುಕ್ತಿಗೆ ಮದ್ದು— ,, ,, ೦-೮-೦
ಪಿ ತರಿಸಿಕೊಳ್ಳಿರಿ ವ್ಹಿ. ಪಿ. ಯಿಂದ

ಷರ ಎಂಡ್ ಸನ್ಸ,

Established 1900.

ಓಂ

FIXED RATE.

ದಾಸಪ್ಪಾ ಕೃಷ್ಣಪ್ಪಾ ಧಾಕಪ್ಪನವರ ಬ್ರದರ್ಸ.

ಇವರ ಒಂದೇ ದರದ ಜವಳಿ ಅಂಗಡಿ, ಶಿರ್ಸಿ.

ನಮ್ಮಲ್ಲಿ ಬೇರೆ ಬೇರೆ ಊರಿನ ಹೊಸ ಹೊಸ ನಮೂನೆವಾರ ಸೀರೆಗಳೂ, ತರತರದ ಪಾಶ್ಯಾಕ್ಕೆ ರೇಶ್ಮೆಯ ಖಣಗಳೂ, ಕೋಟಿಂಗ ವ ಶರ್ಟಿಂಗ ಥ್ಯಾಕ ಟೇಬಲ್ ಬಟ್ಟೆಗಳೂ, ಅಲ್ಲದೆ ನಾನಾ ಜಾತಿಯ ವಸ್ತ್ರಗಳೂ, ಜರೀ ರುಮಾಲು, ಉಪ್ಪರ್ಣೆ, ಟೊಪ್ಪಿಗಳೂ, ಧೋತರ ಜೋಡುಗಳೂ ಮುಂತಾದ ಎಲ್ಲಾ ತರದ ಜವಳಿಯೂ, ಕಬ್ಬಿಣದ ಮಜಬೂತ ಟ್ರಂಕುಗಳೂ, ಛತ್ರಿಗಳೂ ವಗೈರೆ ಎಲ್ಲಾ ತರದ ಮಾಲು ಆಬಾಲವೃದ್ಧರಿಗೂ ಬೇಕ ಹೋಗುವ ಪನೊಂದೂ ಧರ್ಮವಿಲ್ಲದೆ ಸೋಯಿ ದರದಿಂದ ಸಿಗುವದು. ಠೋಕ ವ್ಯಾಪಾರಕ್ಕೆ ಕಮೀಶನ್ ದೊರೆಯುವದು.

Tel:-"HONESTY."; **D. K. DHAKAPPA BROS.**

ಹೊಸ ಮ್ಯಾಲು

Cloth Merchants,
SIRSI N. Kanara

ದರ ಅಗ್ಗ.

ಆರ್ಯಧನ್ವಂತರಿ ಔಷಧಾಲಯ, ಕುಮಟಾ

ನಮ್ಮಲ್ಲಿ ಆಯುರ್ವೇದ ಪದ್ಧತಿಯಿಂದ ಶಾಸ್ತ್ರೋಕ್ತ ತಯಾರಿಸಿದ ಔಷಧಗಳು ಮಾರಾಟಕ್ಕೆ ಸಿದ್ಧವಿರುವವು ಬೇಕಾದವರು ತರಿಸಿಕೊಂಡು ಅನುಭವ ಪಡೆಯಬೇಕು.

ಚ್ಯವನಪ್ರಾಶಾವಲೇಹ—	ರತ್ತಲ ೧ಕ್ಕೆ	ರೂ ೨ ೮-೦
ಅಶ್ವಗಂಧಿಮಿಶ್ರ ಕುಷ್ಮಾಂಡ ಪಾಕ	ರತ್ತಲಕ್ಕೆ	ರೂ ೨ ೮-೦
ಮಹಾ ನಾರಾಯಣ ತೈಲ—	೬೦ ತೊಲೆ ಬಾಟ್ಲಿಕ್ಕೆ . .	ರೂ ೬-೦ ೦
ಹಿಮಸಾಗರ ತೈಲ -	೬೦ ತೊಲೆಗೆ	ರೂ ೬-೦-೦
ಬೃಹತ್ ಭೃಂಗರಾಜ ತೈಲ—	೬೦ ತೊಲೆಗೆ	ರೂ ೩ ೦-೦.

ಆರ್ಡರಿನ ಜೊತೆಗೆ ಅರ್ಧ ಹಣ ಕಳಿಸಬೇಕು ರೋಗಿಗಳು ತಮ್ಮ ಪ್ರಕೃತಿಮಾನ ಸವಿಸ್ತರವಾಗಿ ಬರೆದು ತಿಳಿಸಿದಲ್ಲಿ ಯೋಗ್ಯ ಔಷಧಗಳು (ಅನುಪಾನ ಸಹಿತ) ಕಳುಹಿಸಿಕೊಡಲಾಗುವವು

ನಮ್ಮ ಪತ್ತೆ— **ಪಿ. ಅಚ್ಯುತ ಪಂಡಿತ,**
ಆರ್ಯಧನ್ವಂತರಿ ಔಷಧಾಲಯ ಕುಮಟಾ.

ದನಗಳ ದೊಡ್ಡ ಬೇನೆ.

[illegible] ಈಗ ದನಗಳ ರೋಗವು ಬಹಳವಾಗಿ ಹಬ್ಬಿದೆ. ಇದು [illegible] ರೋಗ ಇದು ಒಂದು ಅಪಾಯಕಾರಕವಾದ ರೋಗ [illegible] ದನಗಳು ಬದುಕುವದಿಲ್ಲ. ರೋಗ [illegible] ದನಗಳು ೯ ದಿನಗಳ [illegible] ಬದುಕಿದರೆ [illegible] ಯಾವ ಭಯವಿಲ್ಲ. ರೋಗದ ಲಕ್ಷಣವೇನಂದರೆ ದನ ಹುಲ್ಲು ಮೇಯುವದಿಲ್ಲ, ನೀರು ಕುಡಿಯುವದಿಲ್ಲ, ಮೈ ಬಹಳ [illegible] ದನಕ್ಕೆ ಜ್ವರ ಬರುತ್ತದೆ, ಸ್ವಲ್ಪ ನಿಂತುಕೊಳ್ಳುತ್ತದೆ [illegible] ಗಳಿಂದ [illegible] ಸುರಿಯುತ್ತಿರುತ್ತದೆ [illegible] ಕೆಲವು [illegible] ವಾಗಿ [illegible] ಸಾಂಕ್ರಾಮಿಕವಾಗುವದ [illegible] ರೋಗಗಳಿಂದ [illegible] ದನಗಳನ್ನು [illegible] ಸ್ಥಳಗಳಲ್ಲಿ [illegible] ಕಟ್ಟಬೇಕು [illegible] ಅದರಿಂದ ರೋಗವು [illegible] ರೋಗದ [illegible] ಕಂಡ ಕೂಡಲೆ ಆ ದನವನ್ನು ಪ್ರತ್ಯೇಕವಾಗಿ ಕಟ್ಟಬೇಕು. ಮತ್ತು ರೋಗದ [illegible] ಕೊಳೆತ ನೀರನ್ನು [illegible] ರೋಗದ [illegible] ಬೇಕು. ಸ್ವಲ್ಪವೇ ಕೊಡುತ್ತಿರಬೇಕು. ರಾಗಿ ಹಿಟ್ಟು ಬೇಯಿಸಿ [illegible] ಗಂಜಿ ನೀರಿನಲ್ಲಿ ಹಾಕಿ ಹಿಟ್ಟು [illegible] ಬೇಯಿಸಿ ಸ್ವಲ್ಪ ಸ್ವಲ್ಪ ಕೊಡುತ್ತಿರಬೇಕು. ಯಾವದಕ್ಕೂ [illegible] ದನಗಳಿಗೆ [illegible] ದನ ತಾನಾಗಿ ಕುಡಿಯುತ್ತಿದ್ದರೆ ಮಾತ್ರ ಕೊಡತಕ್ಕದ್ದು [illegible] ಈ ನೀರನ್ನು [illegible] ಮುಂದೆ ಒಂದು ಅರ್ಧ [illegible] ಕುಡಿಸಬೇಕು, [illegible] ಪ್ರಯೋಗ [illegible] ಜನರಿಗೆ [illegible] ರೋಗಿ ದನಗಳನ್ನು [illegible] ಬೇಕು [illegible] ಗುದದ್ವಾರ [illegible] ಗಳ ಮೇಲೆ [illegible] ತೊಳೆದ ನೀರನ್ನು [illegible] ಸಿಂಪಡಿಸ ಬೇಕು [illegible] ದನಗಳು ತಿನ್ನದೆ, [illegible] ದಿನ [illegible] ಅದರಿಂದ [illegible] ಸಾಯುವದಿಲ್ಲ. ಈ [illegible] ಮಾಡಿ [illegible]

[illegible]

ಯುನಿವ್ಹರ್ಸಲ್ ಮ್ಯುಚ್ಯುವಲ್ ಏಡ ಇಂಡ್, ಪ್ರೊವಿಡೆಂಟ್ ಅಸೋಸಿಯೇಶನ್ ಲಿಮಿಟೆಡ ನ ಡ್ರಾ.

[illegible] ತಾರೀಖಿಗೆ [illegible] ತೆಗೆಯಲು [illegible] ಈ [illegible] ತಾರೀಖು [illegible] ೧೯೩೧ನೇ [illegible] ಇನ್ನೂ ಈ ಬೋಂಡು ಕೊಳ್ಳುವವರಿಗೆ ಅನುಕೂಲವಾಗಬೇಕೆಂದು ಇದೇ ಬರುವ ಜನವರಿ ೩೧ನೇ ತಾರೀಖಿನೊಳಗೆ ಬೋಂಡುಗಳ ಬಗ್ಗೆ ಅರ್ಜಿ ಮಾಡುವವರ ಹೆಸರುಗಳು ೧೫-೨-೧೯೩೧ನೇ ಸೋಡ್ತಿಯಲ್ಲಿ ಸೇರಿಸಲ್ಪಡುವವು. ಬೋಂಡು ಕೊಳ್ಳಲಿಚ್ಛಿಸುವವರು ಈ ಕೆಳಗಿನ ಪತ್ತೆಗೆ ಬರಕೊಳ್ಳಬೇಕು, ಯಾ ಸಮಕ್ಷ ಸಿಗಬೇಕು.

ಕುಮಟಾ.
ತಾ ೯-೧-೧೯೩೧ } ಏ. [illegible] ಶೆಣ್ವೈ, ಪೈ,
ಏಜಂಟ

ಪ್ರಕಟಣೆ

ವ್ಯಾ[illegible]ಟ ಕೆರೊಸೀನ ಎಂಡ ಮಿನರಲ್ ಆಯಿಲ್ ಕಂಪನಿ, ೧೨೧, ಎಸ್ಪ್ಲನೇಡ ರೋಡ, ಮುಂಬಯಿ.

ಏಜಂಟರ ಏ ಜಿ. ಹಬ್ಬು ಎಂಡ್ ಕೋ., ಕಾರವಾರ.

ನಮ್ಮಲ್ಲಿ ಅಮೇರಿಕೆಯ [illegible] ಕೆಂಪು [illegible] ಮತ್ತು ಪೆಟ್ರೋಲ ಕೆಳಗಿನ ಊರುಗಳ [illegible] ಯಿಂದ ಮಾರಲಿಕ್ಕೆ ಸಿಗುತ್ತದೆ. ಯಾರಿಗಾದರೂ ಬೇಕಾದಲ್ಲಿ ನಮ್ಮ ಕಾರವಾರ ಆಫೀಸಿಗೆ ಪತ್ರವ್ಯವಹಾರದಿಂದಾಗಲಿ, ಸಮಕ್ಷಮವಾಗಲಿ ಕೇಳಿಕೊಳ್ಳಬೇಕು. ಊರುಗಳು — ಶಿರಸಿ, ಹೊನ್ನಾವರ, ಕುಮಟಾ, ಅಂಕೋಲಾ, ಕಾರವಾರ, ಯಲ್ಲಾಪುರ, ಹಳಿಯಾಳ ತಾ ೮-೧-೧೯೩೧

A. G Habbu & Co.
Karwar.

ಮನೋಹರವಾದ ಕೂದಲನ್ನು ಚನ್ನಾಗಿ ಸಾಕಬೇಕು.

[illegible] ಕೆಲವು ಸ್ತ್ರೀಯರು ಯಾವಾಗಲೂ ತಮ್ಮ ಕೂದಲುಗಳ [illegible] ಮಾಡುತ್ತಾರೆ. ಕೂದಲು ಮನೋಹರವಾಗಿರಬೇಕಾದರೆ, ನೀವು ದಿನಾ ೮ ನಿಮಿಷ ಲಕ್ಷ್ಯಕೊಡಬೇಕು. ಕೂದಲುಗಳನ್ನು ಅಲಕ್ಷ್ಯ ಮಾಡಿದರೆ ಅವು [illegible] ಮತ್ತು [illegible] ನೀವು ಅವಕ್ಕೆ ಔಷಧ '[illegible]' [illegible] ಕೂದಲನ್ನಾವದು?

ಕಾಮಿನಿಯಾ ಆಯಿಲ್. (ರಿಜಿಸ್ಟರ್ಡ

ದಿನಾ ಮುಂಜಾನೆ ಅರ್ಧ ಚಮಚ ಎಣ್ಣೆಯನ್ನು ಚನ್ನಾಗಿ ತಿಕ್ಕಬೇಕು. ಒಮ್ಮೆ ತಿಕ್ಕಿದ ಕೂಡಲೆ ತಲೆಯ ಹೊಟ್ಟು ಹೋಗುತ್ತದೆ, ಕೇಶರಂಧ್ರಗಳು ತೆರೆದು ಎಣ್ಣೆಯಿಂದ ತಲೆಗೆ ತಂಪು ದೊರಕಿ ಕೂದಲುಗಳ ಬೇರುಗಳಿಗೆ ಆಹಾರ ಸಿಗುತದೆ. ಹೀಗೆ ಸಿಕ್ಕಿದ ಚೈತನ್ಯವು ಕೂದಲುಗಳಿಗೆ ಮುಟ್ಟಿ ನಿಮ್ಮ ಕೂದಲು ಹಸನಾಗಿ ಬೆಳೆಯುತ್ತವೆ.

ಎಲ್ಲಾ ಔಷಧಿ ಅಂಗಡಿಕಾರರಲ್ಲಿ
ಈ ತೈಲವು ದೊರೆಯುತ್ತದೆ.
ಅಥವಾ
ನಮ್ಮಿಂದ ಒರೆದು ತರಿಸಿಕೊಳ್ಳಿರಿ

ಬಾಟ್ಲಿ ೧ಕ್ಕೆ	ರೂ	೧—೦—೦
೩ ಬಾಟ್ಲಿ	,,	೦—೩—[illegible]
೬ ಬಾಟಲಿಗಳಿಗೆ	,,	೪—೧೨—೦
ಅಂಚೆವೆಚ್ಚ	,,	೦—೭—೦

ನಿಮ್ಮ ಅಂಗಡಿಕಾರರಿಂದ
ತರಿಸಿಕೊಳ್ಳಿರಿ

೨ ಔನ್ಸಿಗೆ	ರೂ	೨ ೦ ೦
೫ ಸಿಸೆ	”	೧ ೪ ೦
ಡ್ರಾಮಿಗೆ	,,	೦—೧೪—೦
ಅಂಚೆವೆಚ್ಚ	,,	೦ ೬ [illegible]

ಒಟ್ಟೋ-ದಿಲ್ ಬಹಾರ
ಮೇಲಿಕ್ಕೆ ಮರೆಯಬೇಡಿರಿ

“ಹೂದೋಟವೆಲ್ಲ ಒಂದೇ ಬಾಟ್ಲಿಯಲ್ಲಿ”

[illegible] ಸುಗಂಧದ್ರವ್ಯದಲ್ಲಿ ಇವನ್ನು [illegible] ಎಲ್ಲಾ ಹೂವುಗಳ ಸುವಾಸನೆಯನ್ನು ಒಂದೇ ಸುಗಂಧದ್ರವ್ಯದಿಂದ [illegible] ಅದ್ಭುತವು?

ಒಟ್ಟೋ-ದಿಲ್ ಬಹಾರ್!

(ರಜಿಸ್ಟರ್ಡ)

ಪೇಟೆಯಲ್ಲಿ ಅನೇಕ [illegible] ಸುಗಂಧ ದ್ರವ್ಯಗಳು ಸಿಗುತ್ತವೆ. ಅವರ ಅವುಗಳ [illegible] ಅವುಗಳಲ್ಲಿ ಆಲ್ಕೋಹೋಲ್ ಯಾನೆ ಮದ್ಯವು ಸೇರಿರುತ್ತದೆ. ಇದರಿಂದ [illegible] ಒಟ್ಟೋ-ದಿಲ್ ಬಹಾರದಿಂದ [illegible] ಸುಗಂಧವನ್ನು ಅನುಭವಿಸುಕ [illegible]

THE ANGLO INDIAN DRUC & CHEMIC

ಪ್ರಾಸಂಗಿಕ ವಿಷಯ.

ಶ್ರೀ| ವಿಠ್ಠಲಭಾಯಿ ಪಟೇಲರ ಬಿಡುಗಡೆ.

ಕೊಯಿಮುತ್ತೂರ ಜೈಲಿನಲ್ಲಿದ್ದ ಶ್ರೀ| ವಿಠ್ಠಲಭಾಯಿ ಪಟೇಲರಿಗೆ ಕಳೆದ ೭ನೇ ತಾರೀಖಿಗೆ ಬಿಡುಗಡೆ ಮಾಡಿದ್ದಾರೆ. ಶ್ರೀ| ಪಟೇಲರ ಪ್ರಕೃತಿ ಬಹಳ ಕೆಟ್ಟಿದ್ದರಿಂದ ಹಿಂದುಸ್ಥಾನ ಸರಕಾರವು ಅವರಿಗೆ ಬಿಡುಗಡೆ ಮಾಡಿದೆ. ಶ್ರೀ| ಪಟೇಲರು ಕೊಯಿಮುತ್ತೂರ ಜೈಲಿಗೆ ವರ್ಗಹೊಂದುವ ಮೊದಲು ಅಂಬಾಲಾ ಜೈಲಿನಲ್ಲಿದ್ದರು. ಅಂಬಾಲಾ ಜೈಲಿನಿಂದ ದಿಲ್ಲಿಗೆ ತಂದು, ಅಲ್ಲಿಂದ ಕೊಯಿಮುತ್ತೂರಿಗೆ ಒಯ್ಯುವಾಗ ದಿಲ್ಲಿ ಸ್ಟೇಶನದಲ್ಲಿ ಇಳಿದ ಕೂಡಲೆ ಡೆಪ್ಯುಟಿ ಪೋಲೀಸ ಸುಪರಿಂಟೆಂಡೆಂಟರಾದ ಮಿ| ಅಲ್ಲಿಯವರು ಶ್ರೀ| ಪಟೇಲರಿಗೆ ಸಲಾಮು ಮಾಡಿದರು. ಕಾರಣವಿಷ್ಟೆ: ಮಿ| ಅಲ್ಲಿಯವರು ವರಿಷ್ಠ ಕಾಯಿದೆ ಕೌನ್ಸಿಲಿನ ಮುಖ್ಯ ಪೋಲೀಸ ಅಧಿಕಾರರು. ಪಟೇಲರು ಅಧ್ಯಕ್ಷರಿದ್ದಾಗ ಇವರು ಪಟೇಲರ ಅಧೀನರಾಗಿ ಕಾಯಿದೆ ಕೌನ್ಸಿಲಿನ ಬಂದೋಬಸ್ತನ್ನಿಡುತ್ತಿದ್ದರು. ಕಾರಣ, ಈಗ ಕೈದಿಯಾಗಿದ್ದಾಗ್ಯೂ, ಶ್ರೀ| ಪಟೇಲರಿಗೆ ಕಂಡೊಡನೆ ಮಿ| ಅಲ್ಲಿಯವರು ಸಲಾಂ ಮಾಡಿಬಿಟ್ಟರು. ಶ್ರೀ| ವಿಠ್ಠಲಭಾಯಿಯವರು ನಸುನಕ್ಕರು, "ವರಿಷ್ಠ ಕಾಯಿದೆ ಕೌನ್ಸಿಲನ್ನು ನಾನು ವಿಸರ್ಜಿಸಿಬಿಟ್ಟಿದ್ದೇನೆ, ಈಗ ನಿಮ್ಮ ಮೇಲೆ ನನ್ನ ಹುಕುಮತ್ತು!" ಹೀಗೆ ಉದ್ಗರಿಸಿದರು. ಮಿ| ಅಲ್ಲಿಯವರು ಪಟೇಲರಿಗೆ ದಿಲ್ಲಿ ರೇಲ್ವೆ ಸ್ಟೇಶನ್ನಿಗೆ ಒಯ್ದು ಮದ್ರಾಸ ಮಾರ್ಗವಾಗಿ ಕೊಯಿಮುತ್ತೂರಿಗೆ ಕಳಿಸಲುದ್ಯುಕ್ತರಾದರು. "ಅಂಬಾಲಾದಿಂದ ದಿಲ್ಲಿ ತನಕ ಬಂದ ಪ್ರಯಾಣದಿಂದ ದಣಿದಿದ್ದೇನೆ, ಈ ಹೊತ್ತು ರಾತ್ರಿ ದಿಲ್ಲಿಯಲ್ಲಿ ನಾನು ಇರಲೇ ಬೇಕು," ಹೀಗೆ ಶ್ರೀ| ಪಟೇಲರು ನುಡಿಯಲು, "ನಮ್ಮ ಉಪಾಯವಿಲ್ಲ, ಈಗಲೇ ತಮಗೆ ಮದ್ರಾಸಿಗೆ ಕಳಿಸಬೇಕಾಗಿ ನನಗೆ ಹುಕುಮವಾಗಿದೆ," ಹೀಗೆ ಮಿ| ಅಲ್ಲಿಯವರು ನುಡಿದರು. ಶ್ರೀ| ಪಟೇಲರು ನಿರಾಶರಾಗಿ ನಗೆಮೊಗದಿಂದ ನುಡಿದದ್ದೇನಂದರೆ.— "ನಿಮ್ಮ ಆಜ್ಞೆಯನ್ನು ರದ್ದು ಮಾಡುವ ಅಧಿಕಾರ ಈಗ ನನಗಿಲ್ಲ!" ಹೀಗೆ ಉದ್ಗರಿಸಿ, ಶ್ರೀ| ಪಟೇಲರು ಮದ್ರಾಸ ಉಗಿಬಂಡಿಯನ್ನೇರಿದರು.

⁂

ಒಕ್ಕಲಿಗರ ದೈನ್ಯ.

ಮಿ| ಬ್ರೈಲ್ಸಫರ್ಡರವರು ಲಂಡನಿನ 'ನೆಶನ್' ಪತ್ರಿಕೆಯಲ್ಲಿ ಸಂಯುಕ್ತ ಪ್ರಾಂತದ ಮೈನಾಪುರಿ ಜಿಲ್ಲೆಯ ಗ್ರಾಮಗಳಲ್ಲಿ ಸಂಚರಿಸಿ ಕಂಡು ಬಂದ ಸಂಗತಿಗಳನ್ನು ಪ್ರಕಟಿಸಿದ್ದಾರೆ. ಅವರೊಳಗಿನ ಕೆಲಸಂಗತಿಗಳು ವಿಚಾರಾರ್ಹವಿವೆ "ಅದು ಚಿಕ್ಕ ಗ್ರಾಮ, ಅದರ ಹೆಸರು ಶಿವಾನಪುರ. ಅಲ್ಲಿಯ ಹೊಲಗಳು ರಾಶಿಯಾಗಿತ್ತು. ಮುಗಿದು ಸಂಜೆಯ ಸಮಯ ನಾನಲ್ಲಿ ಮುಟ್ಟಿದೆ, ಎಲ್ಲರೂ ಕೆಲಸಮಾಡಿ ಬಂದು ಆಲದ ಮರದಡಿ ಕೂತಿದ್ದರು; ನಾನು ಅಲ್ಲೇ ಕೂಳಿತುಕೊಂಡೆ. ಎಲ್ಲರೂ ಸಾಲದಲ್ಲಿ ಮುಳುಗಿದ್ದಾರೆ; ಒಬ್ಬರಿಗೂ [illegible] ರುವದಿಲ್ಲ; ಮಕ್ಕಳು ಶಾಲೆಗೆ ಹೋಗುವದಿಲ್ಲ, [illegible]ರ ಸಾಲ ದರ ಶೇಕಡಾ ೩೭||ಯಂತೆ; ಕೆಲವ[illegible] ದೆಸೆಯಿಂದ ಸಾಲ, ಹಲವರಿಗೆ [illegible] ಯವನ್ನು ತೀರಿಸುವದ[illegible]ಕ್ಕಾಗಿ ಸಾವುಕಾರರಿಗೆ ಹಾಲು ಕೊಟ್ಟು ಬೆಳೆ ಕೊಡುತ್ತಾರೆ. ಸುಮನೆ ಮಾಡಿಕೊಂಡವರು ಹಣ ದೊರಕದೆ ಕೆಲವರು ಒಪ್ಪೊತ್ತಿನ ಉಪವಾಸಿಗಳಾಗಿದ್ದರು. ಒಬ್ಬನಿಗೆ ಹರಕು ಪೈರಣ ಹೊಲಕೊಳ್ಳಲು ಅನುಕೂಲತೆಯಿಲ್ಲ. ಕೂಗಿ ಬಂಡಿಯಲ್ಲಿ ೧೨ ತಾಸು ಕೆಲಸ ಮಾಡಿ ಒಂದೆ ಆಣೆ ಗಳಿಸುತ್ತಿದ್ದನು. ಒಬ್ಬ ಹೆಂಡತಿ, ಇಬ್ಬ ಮಕ್ಕಳು, ಸಾಲದ ಬಡ್ಡಿ; ಇಷ್ಟು ಕೆಟ್ಟ ಸಂಸಾರ ನಡೆಸುವದು ಕಷ್ಟವಾಗಿತ್ತು. ಇದು ಕೂಲಿಯಾಳಿನ ಸ್ಥಿತಿ. ಒಕ್ಕಲಿಗರ ಸ್ಥಿತಿ ಇದಕ್ಕೂ ಕನಿಷ್ಠ. ಮಿ| ಬ್ರೈಲ್ಸಫರ್ಡರವರು ಗೋದಿ ಬೆಳೆಸುವ ೧ ಎಕ್ರೆ ಕ್ಷೇತ್ರದ ಸಾಗುವಳಿ ಖರ್ಚಿನ ಲೆಕ್ಕ ಹಾಕಿದರು. ೧೦ ಸಾರೆ ಹೊಡೆಯಬೇಕು, ೭-೮ ಮಂದಿಗಳು ಕೊಯ್ಯಲಿಕ್ಕೆ ಬೇಕು; ಮೂರಾವರ್ತಿ ನೀರು ಬಿಡಬೇಕು. ಇದಕ್ಕೆ ೫ ದಿನ ತಗಲುತ್ತವೆ. ಆ ಮೇಲೆ ಪೈರು ಒಕ್ಕಬೇಕು. ಹೀಗೆ ೪೦ ಮಂದಿ ಆಳು ೧ ಎಕ್ರೆ ಸಾಗುವಳಿಗೆ ತಗಲುತ್ತಾರೆ. ಆಳಿಗೆ [illegible]ಯಂತೆ ರೂ ೧೦ ೦-೦ ಖರ್ಚು ಬರುತ್ತದೆ. ಬೀಜಕ್ಕೆ ರೂ. ೩, ಗೇಣಿ ರೂ ೧೦, (ರೂ. ೧೫-೨೦ರ ತನಕ ಗೇಣಿ ಕೊಡುವದೂ ಉಂಟು) ಹೀಗೆ ೧ ಎಕ್ರೆಗೆ ರೂ ೨೩ ರಿಂದ ರೂ ೪೩ರ ತನಕ ಖರ್ಚು ಬರುತ್ತದೆ. ಹುಟ್ಟುವಳಿ ೬ರಿಂದ ೧೦ ಮಣ ಗೋದಿ, ಇದರ ಬೆಲೆ ರೂ ೧೪ ರಿಂದ ೨೩. ಇದರೊಳಗೆ ಎತ್ತುಗಳ ಲೆಕ್ಕವಿಲ್ಲ, ಗೊಬ್ಬರದ ಲೆಕ್ಕ ಹಿಡಿಯಲಿಲ್ಲ, ಬೇಸಾಯದ ಸಾಹಿತ್ಯಗಳ ಎಣಿಕೆಯಿಲ್ಲ, ೩ ತಿಂಗಳ ತನಕ ಒಕ್ಕಲಿಗರು ಸಿರ ದುಡಿಯುತ್ತ ಇದ್ದುದರ ಬಗ್ಗೆ ಪ್ರತಿಫಲ ಹಿಡಿಯಲಿಲ್ಲ. ತಮ್ಮ ಲೆಕ್ಕ ಅಂದಾಜೆಂತ ಎಣಿಸಿದ್ದಾಗ್ಯೂ ಸ್ವಲ್ಪ ಹೆಚ್ಚು-ಕಡಿಮೆ ಹಿಡಿದರೂ, ಒಕ್ಕಲಿಗರಿಗೆ ಒಕ್ಕಲತನದಿಂದ ಲಾಭವಿಲ್ಲವೆಂಬ ಮಾತು ಸಿದ್ಧ. ಒಕ್ಕಲಿಗರು ಗೇಣಿ ಕೊಟ್ಟರೆ [illegible] ಸಾಯಬೇಕು; ಹೊಟ್ಟೆಗೆ [illegible] ಗೇಣಿಗಾಗಿ ಸಾಲ ತೆಗೆಯಬೇಕು, ಇಲ್ಲವೆ ಗೇಣಿ ಕೊಡದಿದ್ದರಿಂದ ಭೂಮಿ ಬಿಟ್ಟು ಕೊಡಬೇಕು. ಜಮೀನದಾರರು ಇವರಿಗೆ ನೆರವಾಗುವದಿಲ್ಲ ಕಾರಣವಿದೆ, ಅವರಿಗೂ ಸಾಲ. [illegible] ಅದೂ ಪವಿತ್ರ ವ್ಯಾಪಾರವೆಂಬ ವಿಚಾರ ಮಾಡದೆ [illegible] ಸಹ ಭಕ್ಷಿಸುತ್ತವೆ, ಎಂಬುದಾಗಿ [illegible]ರೊಬ್ಬರು ಮಿ| ಬ್ರೈಲ್ಸಫರ್ಡರವರ ಕಡೆ ನುಡಿದರು. ಇಂಥ ಸ್ಥಿತಿಯಲ್ಲಿ ನೀವು ಭೂಮಿಯನ್ನು ಯಾಕೆ ಗೇಣಿಗೆ ಕೊಟ್ಟಿರೆಂದು ಮಿ| ಬ್ರೈಲ್ಸಫರ್ಡರವರು ಒಕ್ಕಲಿಗರಿಗೆ ಕೇಳಲು, "ಕೆಲಸವೆಲ್ಲಿದೆ? ಭೂಮಿ ಗೇಣಿಗೆ ಮಾಡಿದರೆ, ಸಾವುಕಾರರೂ ಸಾಲ ಕೊಡುತ್ತಾರೆ," ಹೀಗೆ ಅವರು ಮಿ| ಬ್ರೈಲ್ಸಫರ್ಡರವರ ಕಡೆ ನುಡಿದರು

⁂

ಬಹಿಷ್ಕಾರದ ಫಲ

ಹಿಂದುಸ್ಥಾನಕ್ಕೆ ಬ್ರಿಟಿಶ ದೇಶದಿಂದ ಆಮದಾದ ನವಂಬರ ತಿಂಗಳ ಬಟ್ಟೆಯ ಅಂಕಿಗಳು ಬೋಧಪ್ರದವಿವೆ. ೧೯೩೦ನೇ ಇಸ್ವಿಯ ನವಂಬರ ತಿಂಗಳಲ್ಲಿ ಕರಾಚಿ ಬಂದರದಲ್ಲಿ ೭೨೮೦೯೦ ಗಜ, ಮುಂಬಯಿಯಲ್ಲಿ ೩೬೪೪೮೪೦ ಗಜ, ಮದ್ರಾಸದಲ್ಲಿ ೪೬೮೩೮೦೦ ಗಜ; ಬಂಗಾಲ, ಆಸಾಮು, ಬಿಹಾರ ಓರಿಸಾ ಪ್ರಾಂತಗಳಲ್ಲಿ [illegible] ಗಜ, ಬ್ರಹ್ಮದೇಶದಲ್ಲಿ ೧೨೩೩೪೦೦ ಗಜ, ೧೯೨೯ನೇ ಇಸ್ವಿ ನವಂಬರ ತಿಂಗಳಲ್ಲಿ ಆ ಪರಿ, ೧ ವರ್ಷದ ಹಿಂದೆ ಆ ಪ್ರಾಂತಗಳಲ್ಲಿ ಆಮದಾದ ಬಟ್ಟೆಯು. [illegible]ನೆ ತುಲನೆ ಮಾಡಿದರೆ, ಬಹಿಷ್ಕಾರದ ಫಲ ವ್ಯಕ್ತವಾಗುತ್ತದೆ. ಕರಾಚಿಯಲ್ಲಿ ೧೭೫೯೪೩೦೦ ಗಜ, ಮುಂಬಯಿಯಲ್ಲಿ [illegible] ಗಜ, ಮದ್ರಾಸದಲ್ಲಿ ೧೧೭೭೮೯೦೦ ಗಜ, ಬಂಗಾಲ ಆಸಾಮು-ಬಿಹಾರ-ಓರಿಸಾ ಪ್ರಾಂತಗಳಲ್ಲಿ ೫೫೭೯೭೩೦೦ ಗಜ, ಬ್ರಹ್ಮದೇಶದಲ್ಲಿ ೪೪೬೭೪೦೦ ಗಜ, ಹೀಗೆ ಬಟ್ಟೆ ಆಮದಾಗಿತ್ತು ಅಂದರೆ, ಅನುಕ್ರಮವಾಗಿ ಶೇಕಡಾ [illegible] ೬೪॥ ೬೯॥, ಹೀಗೆ ವ್ಯಾಪಾರವು ಇಳಿಯಿತು, ಒಟ್ಟಿಗೆ ಶೇಕಡಾ ೮೩ ರಿಂದ ಇಳಿಯಿತು. ೧೯೨೯ನೇ ಇಸ್ವಿಯ ನವಂಬರ ತಿಂಗಳಿನಲ್ಲಿ ೧೦೪೫೭೧೩೦೦ ಗಜ ಬಟ್ಟೆ ಆಮದಾಗಿತ್ತು, ಅದು ೧೯೩೦ನೆ ಇಸ್ವಿ ನವಂಬರ ತಿಂಗಳಿನಲ್ಲಿ ೧೮೯೩೨೦೦ ಗಜ ವರೆಗೆ ಆಮದಾಯಿತು. ೧೯೩೦ನೇ ಇಸ್ವಿ ನವಂಬರ ತಿಂಗಳಿನಲ್ಲಿ ಮೇಲ್ಕಂಡ ಪ್ರಾಂತಗಳಲ್ಲೆಲ್ಲ ಕೂಡಿ ೩೭೮೭೦೦ ರತ್ತಲು ಹತ್ತಿಯ ನೂಲು ಆಮದಾಯಿತು. ೧೯೨೯ನೇ ಇಸ್ವಿ ನವಂಬರ ತಿಂಗಳಲ್ಲಿ ೫೭೮೬೭೦ ರತ್ತಲು ನೂಲು ಬಂದಿತ್ತು. ಹೀಗೆ ೧ ವರ್ಷದಲ್ಲಿ ನೂಲಿನ ಆಮದು ಸಾಧಾರಣ ಶೇಕಡಾ ೬೦ರಷ್ಟು ಕುಗ್ಗಿದೆ. ಕಲಕತ್ತೆಯ ಒಂದರಲ್ಲಿ ಬ್ರಿಟಿಶ ಅರಿವೆಗೆ ಕೇಳುವವರಿಲ್ಲವಾಗಿ ಕಲಕತ್ತೆಯ 'ಸ್ಟೇಟ್ಸಮನ್' ಪತ್ರಿಕೆಯು ಮರುಗುತ್ತದೆ. ಬ್ರಿಟಿಶ ಜವಳಿ ಚೀನ ದೇಶದಲ್ಲಿ ಖರ್ಚಾಗುತ್ತಿತ್ತು ಅಲ್ಲಿಯೂ ಈಗ ಸರಕು ಖರ್ಚಾಗುವದಿಲ್ಲ. ಕಾರಣವಿದೆ, ಅಲ್ಲಿ ಇಲ್ಲಿಯ ಸರಕು ಹುಟ್ಟಿ ಬೀಳುತ್ತಿದೆ, ಮೇಲಾಗಿ ಚೀನ ಸರಕಾರವು ಶೇಕಡಾ ೭॥ ಯಿಂದ ೧೨॥ಯ ತನಕ ಆಮದು ತೆರಿಗೆ ಹೇರಿದೆ. ಇದರಿಂದ ಬ್ರಿಟಿಶ ದೇಶದಲ್ಲಿ ಶೇಕಡಾ ೮೦ರಷ್ಟು ಜನರು ಕೆಲಸವಿಲ್ಲದೆ ಸಿಲುಕಿದ್ದರೆಂದು ಬ್ರಿಟಿಶ ವರ್ತಕ ಮಂಡಳದ ನವಂಬರ ತಿಂಗಳಿನ ರಿಪೋರ್ಟ. ಬಹಿಷ್ಕಾರವು ದಿನ ಹೋದ ಹಾಗೆ ಜಾರಿಯಾಗುವದೆಂದೂ, ಕಾರಣ ಮುಂದಿನ ದಿನಗಳು ಮತ್ತೂ ಕಠಿಣವೆಂದೂ [illegible] ಸಂಘದ ಎಣಿಕೆ. ಜನರು ಬಡವರಾಗಿದ್ದಾರೆ, ಜವಳಿ ಕೊಳ್ಳುವ ತ್ರಾಣವಿಲ್ಲವಾಗಿಯೂ ವರ್ತಕ ಮಂಡಳವು ಪ್ರಕಟಿಸಿದೆ. ಮದ್ರಾಸದ 'ಇಂಡಿಯನ್ ರಿವ್ಯೂ' ಪತ್ರಿಕೆಯಲ್ಲಿ ಮಿ| ಜೀ ಎಸ್ ಘೋಣಸಕಾರರವರು ಒಂದು ಲೇಖ ಬರೆದಿದ್ದಾರೆ. ಅದರೊಳಗೆ ಬಹಿಷ್ಕಾರದ ಇತಿಹಾಸದೊಳಗಿನ ಹಲವು ಉದಾಹರಣೆಗಳನ್ನು ವಿವರಿಸಿದ್ದಾರೆ. ಅಮೇರಿಕೆಯ ಸಂಯುಕ್ತ ಸಂಸ್ಥಾನದವರು ಬಹಿಷ್ಕಾರ ಶಸ್ತ್ರದಿಂದ ಬ್ರಿಟಿಶರು ಹೇರಿದ ಸ್ಟಾಂಪು ಟ್ಯಾಕ್ಸ, ಕಾಗದ ಮೊದಲಾದವುಗಳ ಮೇಲಿನ ಸಾಮಾನವರ ಒಪ್ಪಿಗೆ ಪಡೆಯದೆ ಹೇರಿದ ತೆರಿಗೆಯನ್ನು ರದ್ದುಪಡಿಸಿಕೊಂಡಿದ್ದಾರೆ. ಎಡಮ್ ಸ್ಮಿಥ ಎಂಬ ಅರ್ಥಶಾಸ್ತ್ರಜ್ಞರು [illegible] ಬಹಿಷ್ಕಾರವು ಭಯಪ್ರದವೆಂದು [illegible] ಅರ್ಥಶಾಸ್ತ್ರ ಗ್ರಂಥದಲ್ಲಿ ಬರೆದಿದ್ದಾರೆ. ಬ್ರೂಕ್ಸ ಎಡಮ್ಸ ಎಂಬ ಇನ್ನೊಬ್ಬ ಗ್ರಂಥಕಾರರು ಹಿಂದುಸ್ಥಾನದಿಂದ ಇಂಗ್ಲಂಡಕ್ಕೆ ಸಿಕ್ಕಿದ ಸಂಪತ್ತಿನ ಲೆಕ್ಕ ಹಾಕಿದ್ದಾರೆ. ಪ್ಲಾಸಿ ಕಾಳಗದಿಂದ ಅಂದರೆ ೧೭೫೭ನೇ ಇಸ್ವಿಯ ವಾಟರಲೂ ಕಾಳಗದ ವರೆಗೆ, ಅಂದರೆ ೧೮೧೫ನೇ ಇಸ್ವಿಯ ವರೆಗಿನ ಅವಧಿಯಲ್ಲಿ ಹಿಂದುಸ್ಥಾನದಿಂದ ೫ ಅಬ್ಜ ಡಾಲರು, ಅಂದರೆ ೧ ಖರ್ವ ರೂಪಾಯಿಗಳ ಸಂಪತ್ತು ರವಾನೆಯಾಯಿತು. ೧೮೭೫ನೇ ಇಸ್ವಿಯಿಂದ ೧೯೦೦ರ ಸನ್ [illegible] ವರ್ಷಗಳಲ್ಲಿ ೧ ಖರ್ವ ರೂಪಾಯಿ ಸಂಪತ್ತು ಹರಿದು ಹೋಯಿತು. ಇತ್ತ ೩೦-೩೦ ವರ್ಷಗಳಲ್ಲಿ ಇನ್ನಷ್ಟು ಖರ್ವ ಸಂಪತ್ತು ಹರಿದುಹೋ

ತ್ರೇನೋ ಏನೋ! ಅಗಣಿತ ಸಂಪತ್ತು ಪಸಾಯುವಾಗುತ. ಬಡತನಕ್ಕೆ ಇದೇ ಮುಖ್ಯ ಕಾರಣ. ಬ್ರಿ...ಂಬಂಥ ದೇಶದೊಳಗೆ ಕೈಗಾರಿಕೆಗಳಿಂದಾಗಿ ...ದ ಸಂಪತ್ತು ಬೆಳೆಯುತ್ತದೆ. ಅದಕ್ಕೆ ಸದ್ಯ ...ರಿಕೆಯ ಸಂಯುಕ್ತ ಸಂಸ್ಥಾನವೇ ಸಾಕ್ಷಿ. ಬ್ರಿ...ರವನ್ನು ಪುರಸ್ಕರಿಸುವಾಗ ಅಲ್ಲಿ ದ್ರವ್ಯ ವಳಿಗೊಂಡಿಲ್ಲ; ಕೈಗಾರಿಕೆಯಿಲ್ಲ, ಬಂಡವಲಿಲ್ಲ; ವ್ಯವಹಾರ ಚಾತುರ್ಯವಿಲ್ಲ, ಕೌಶಲ್ಯವಿಲ್ಲ; ಹೀಗ ಇರುವಾಗ ...ವದು!

* *

ಕೆಟಿನಲ್ಲಿ ಧೋತರ ಬೇಡ!

ಕಲಕತ್ತೆಯೊಳಗೆ ಆಟಗಾರರಲ್ಲಿ ಸಣ್ಣ ಕೋಲಾಹಲ ಹುಟ್ಟಿದೆ. ಅಲ್ಲಿ ಮೋಹನ ಬೇಗನ್ ಎಂಬುವೊಂದು ಹಿಂದೀ ಕ್ರಿಕೆಟ್ ಸಂಘವಿದೆ. ಈ ಸಂಘದವರು ಕಲಕತ್ತೆಯ [illegible] ಆಟಗಾರರೊಡನೆ [illegible] ಆಡಹೋಗಿದ್ದರು. ರಾ|| ಗುಪ್ತ ಹಾದಿ ಮುಂತಾದವರು ಧೋತರ ಉಟ್ಟುಕೊಂಡು ಆಡಹೋಗಿದ್ದರು. ಧೋತರ ಉಟ್ಟು ಯಾಕೆ ಆಡುತ್ತೀರೆಂದು ಕಲಕತ್ತೆಯ ಕ್ರಿಕೆಟ್ ಕ್ಲಬ್ಬಿನ ಕಪ್ತಾನರಾದ ಮಿ|| ಲೀಗರ್ಸನ್‌ರವರು ರಾ|| ಬೋಸ್‌ರವರಿಗೆ ಕೇಳಿದರು. ಧೋತರ ಉಟ್ಟುಕೊಂಡರೆ ನಮಗೆ ಸುಖವಾಗುತ್ತದೆ, ರಾ|| ಬೋಸ್‌ರವರು ನುಡಿಯಲು, ಇನ್ನು ಮುಂದೆ ಮೋಹನ ಬೇಗನ್ ಸಂಘದವರೊಡನೆ ತಾವು ಆಡಲಿಕ್ಕಿಲ್ಲವಾಗಿ ಕಪ್ತಾನರು ಗದ್ದರಿಸಿದರು. ಆದಾಗ್ಯೂ ಆಟ ನಡೆಯಿತು. ಹಿಂದೀ ಕ್ಲಬ್ಬಿನ ಕಪ್ತಾನರು ಕಲಕತ್ತೆ ಕ್ಲಬ್ಬಿನ ಕಾರ್ಯದರ್ಶಿಗಳ ಬಳಿ ಮಿ|| ಲೀಗರ್ಸನ್‌ರವರ ವರ್ತನವನ್ನು ನಿಷೇಧಿಸಿದರು. ಧೋತರ ಉಟ್ಟು ಆಡಿದರೆ, ನಮಗೆ ಅವಮಾನವಾಗುತ್ತದಾಗಿ ಕಾರ್ಯದರ್ಶಿಗಳಾದ ಮಿ|| ರೊಬರ್ಟ್ಸನ್‌ರವರು ಅಭಿಪ್ರಾಯಪಟ್ಟರು. "ಕೂಲಿಕರು ಧೋತರ ಉಟ್ಟು ಇವರು ಆಡುತ್ತಾರೆ." ಎಂದು ಮಿ|| ಲೀಗರ್ಸನ್‌ರವರು ತಿರಸ್ಕಾರದಿಂದ ಮಾತಾಡಿದರು. ಮೋಹನ ಬೇಗನ್ ಸಂಘದವರು ಆಟವನ್ನು ಅರ್ಧಕ್ಕೇ ಬಿಟ್ಟು ನಡೆದುಬಿಟ್ಟರು. ರಾಷ್ಟ್ರಪ್ರವೃತ್ತಿಯು ಎಲ್ಲೆಲ್ಲಿಯ ತನಕ ಹಿಂಡಿಸುವ ಹಾಗೆ ನಡೆದಿದೆ ನೋಡಿ!

* *

ರಾಜ್ಯಖರ್ಚಿನಲ್ಲಿ ಉಳಿತಾಯ ಮಾಡುವ ಬಗೆ.

ಲಾಹೋರಿನಲ್ಲಿ ಅಖಿಲ ಭಾರತೀಯ ಅರ್ಥಶಾಸ್ತ್ರ ಪರಿಷತ್ತಿನ ೧೪ನೇ ಅಧಿವೇಶನ ಜರುಗಿತು. ಪಂಜಾಬಿನ ಗವ್ಹರ್ನರರು ಅನಾವರಣ ಸಮಾರಂಭ ಮಾಡಿದರು. ಆ ಕಾಲಕ್ಕೆ ಪೋಲೀಸರು ಕಠಿಣ ಬಂದೋಬಸ್ತನ್ನಿಟ್ಟಿದ್ದರು. ವಿಶ್ವವಿದ್ಯಾಲಯದಲ್ಲೇ ಈ ಸಭೆ ಜರುಗಿತು. ಇಲ್ಲಿಯೇ ಗವ್ಹರ್ನರರ ಮೇಲೆ ಹರಿಕಿಸನ್‌ರವರು ಗುಂಡು ಹಾರಿಸಿದರು. ಗವ್ಹರ್ನರರು ಈ ಸಮಾರಂಭಕ್ಕೆ ಬರುವಾಗ ಗುಂಡಿನ ಹೊಡೆತ ತಾಗಿದ ತೋಳನ್ನು ಉಣ್ಣೆಯ ಚವಕೆಯಲ್ಲಿ ತೂಗಡಿಸಿಕೊಂಡು ಬಂದಿದ್ದರು. ಪ್ರಸಂಗೋಚಿತವಾದ ಉಪನ್ಯಾಸ ಮಾಡಿ ಪರಿಷತ್ತನ್ನು ತೆರೆದ ಬಳಿಕ, ಅಧ್ಯಕ್ಷರಾದ ಡಾ|| ಪ್ರಮಥನಾಥ ಬ್ಯಾನರ್ಜಿಯವರು ಸರಕಾರಿ ಖರ್ಚಿನಲ್ಲಿ ಉಳಿತಾಯ ಮಾಡುವ ಉಪಾಯಗಳನ್ನು ವಿವರಿಸಿದರು. ಸೈನ್ಯ ಖರ್ಚು ವಿಪರೀತ ಬೆಳೆದದೆ; ಶಿಕ್ಷಣ, ಆರೋಗ್ಯ ಮೊದಲಾದ ರಾಷ್ಟ್ರಸಂವರ್ಧಕ ಖಾತೆಗಳಲ್ಲಿ ಹಣವನ್ನು ಖರ್ಚಾಗುವದಿಲ್ಲ; ಕಾರಣ ಬ್ರಿಟಿಶ ಸೈನಿಕರ ಸಂಖ್ಯೆಯನ್ನು ಅರ್ಧಕ್ಕಿಳಿಸಬೇಕು; ಇಷ್ಟು ಶಾಂತಿಯನ್ನು ಒಮ್ಮೆಲೇ ಒದಗಿಸಲಾಗದಿದ್ದಲ್ಲಿ ೧೦ ಸಾವಿರ ಸೈನಿಕರನ್ನು ಮೊಟ್ಟ ಮೊದಲು ಇಳಿಸಿ, ೧೦ ವರ್ಷಗಳ ತನಕ ವರ್ಷಾವರ್ಷ ೨-೩ ಸಾವಿರ ಸೈನಿಕರನ್ನು ಇಳಿಸುತ್ತ ಹೋಗಬೇಕು, ಇತರ ಖರ್ಚನ್ನು ತಗ್ಗಿಸಬೇಕು. ಕಾಳು-ಕಡಿಯ ದರ ಇಳಿದಿದೆ, ಕಾರಣ, ಸಂಬಳಗಳನ್ನು ಇಳಿಸಿ ಖರ್ಚಿನಲ್ಲಿ ಉಳಿತಾಯ ಮಾಡಬೇಕು. ಯುರೋಪಿಯನ್ ಅಧಿಕಾರಿಗಳ ಸಂಬಳ ಇಳಿಸಬರದಿದ್ದಲ್ಲಿ ಹಿಂದೀ ಅಧಿಕಾರಿಗಳ ಸಂಬಳವನ್ನಾದರೂ ಇಳಿಸಬೇಕು; ಹೀಗೆ ಸಹ ಡಾ|| ಪ್ರಮಥನಾಥ ಬ್ಯಾನರ್ಜಿಯವರು ಸರಕಾರಕ್ಕೆ ಸೂಚನೆ ಮಾಡಿದ್ದಾರೆ. ಯುರೋಪಿಯನ್ ಅಧಿಕಾರಿಗಳ ಪಗಾರ ಇಳಿಸಲಿಕ್ಕೆ ಎಂಥ ಅಡ್ಡಿಯಿರುವದೆಂದು ಸಂದೇಹಪಟ್ಟರೋ, ಏನೋ! ಇರಲಿ. ಈ ಸಮಯ ಬಿಹಾರ ಪ್ರಾಂತದ 'ಸರ್ಚ್‌ಲೈಟ್' ಪತ್ರಿಕೆಯಲ್ಲಿ ರಾ|| ಶ್ರೀನಿವಾಸರಾವ ವಾಗೀಲರವರು ಪ್ರಕಟಿಸಿದ ಅಂಕಿಗಳು ಬೋಧಪ್ರದವಿವೆ. ಹಿಂದುಸ್ಥಾನದಲ್ಲಿ ಬ್ರಿಟಿಶ ಸೈನಿಕರ ತಲದಿಗಾಗಿ ೯೭೩೪೨೫೦ ರೂಪಾಯಿಗಳು ಖರ್ಚಾಗುತ್ತವೆ. ಸೈನಿಕರಾಗಿ ಕೆಲಸ ಮಾಡಿ ಬ್ರಿಟಿಶ ದೇಶದಲ್ಲಿಳಿದವರ ಪೆನ್ಶನಿಗಾಗಿ ರೂ. ೧೩೩೫೦೦೦೦ ಖರ್ಚಾಗುತ್ತದೆ. ಏವಂ ಬ್ರಿಟಿಶ ಅಧಿಕಾರಿಗಳ ಪೆನ್ಶನಿಗಾಗಿ ರೂ. ೬೫ ಲಕ್ಷ ಖರ್ಚು; ಬ್ರಿಟಿಶ ಅಧಿಕಾರಿಗಳ ಪಗಾರಿಗಾಗಿ ರೂ. ೩೦೮೩೭೫೦೦೦ ಖರ್ಚು. ಇಂಗ್ಲಂಡದೊಳಗೆ ನಡೆಯುವ ಹಿಂದುಸ್ಥಾನ ದೇಶದ ಕಾರಭಾರಕ್ಕಾಗಿ ರೂ. ೧೩೬೮೭೫೦೦ ಖರ್ಚು ಹೀಗೆ ಬ್ರಿಟಿಶರ ಪಗಾರ-ಪೆನ್ಶನ ರೂಪದಿಂದ ರೂ. ೫೫೦೪೦೩೫೫೦ ಖರ್ಚಾಗುತ್ತವೆ. ಬ್ರಿಟಿಶರ ಸ್ಥಳದಲ್ಲಿ ಹಿಂದೀಯರಿಗೆ ನೇಮಿಸಿದರೆ, ಖರ್ಚಿನಲ್ಲಿ ಉಳಿತಾಯವಾಗಿ ಹೊಸ ಕರ ಹೇರದೆ ಆರೋಗ್ಯ, ಶಿಕ್ಷಣ, ನೀರಕಾಲುವೆ, ಬೇಸಾಯ ಮುಂತಾದ ರಾಷ್ಟ್ರಸಂವರ್ಧಕ ಖಾತೆಗಳಿಗೆ ಕೋಟ್ಯವಧಿ ರೂಪಾಯಿ ವೆಚ್ಚ ಮಾಡಲು ಸರಕಾರಕ್ಕೆ ಅನುಕೂಲವಾಗುವಂತಿದೆ.

* *

ದಕ್ಷಿಣ ಆಫ್ರಿಕೆಯೊಳಗೆ ಹಿಂದೀಯರ ದ್ವೇಷ.

ಹಿಂದೀಯರು ನಮ್ಮ ಬಂಧುಗಳು; ಅವರ ಕಲ್ಯಾಣಕ್ಕಾಗಿಯೇ ನಾವು ಹಿಂದುಸ್ಥಾನದೊಳಗಿದ್ದೇವೆ; ದಕ್ಷಿಣ ಆಫ್ರಿಕೆಯಲ್ಲಿಯೂ ಹಿಂದೀಯರಿಗೆ ನ್ಯಾಯವಾದಂತೆ ನಾವು ನಡಿಸಿಕೊಳ್ಳುತ್ತೇವೆ; ಎಂಬದಾಗಿ ಬ್ರಿಟಿಶರು ಹೇಳುತ್ತಿರುತ್ತಾರೆ. ಅಲ್ಲಿಯ ಹಿಂದು ಪ್ರಕಾರವು ಬೋಧಪ್ರದವಿದೆ. ಜೋಹಾನ್ಸಬರ್ಗದೊಳಗಿನ ದೆಸಾನಿ ಕೇರಿಯಲ್ಲಿ ಕರೋಲಿಯಾ ಹೆಸರಿನ ಹಿಂದೀ ಗೃಹಸ್ಥರು ವಿಶ್ರಾಂತಿ ಗೃಹವನ್ನು ತೆರೆಯಲುದ್ಯುಕ್ತರಾದರು; ಮ್ಯುನಿಸಿಪಾಲಿಟಿಯ ಬಳಿ ಅಪ್ಪಣೆ ಬೇಡಿದರು. ವಿಶ್ರಾಂತಿಗೃಹ ತೆರೆಯಲು ಆ ಸ್ಥಳ ಉಚಿತವಲ್ಲವಾಗಿ ಹೇಳಿ ಮ್ಯುನಿಸಿಪಾಲಿಟಿಯವರು ಅರ್ಜಿಯನ್ನು ತಿರಸ್ಕರಿಸಿದರು. ಮುಂಚೆ ಅಲ್ಲಿ ವಿಶ್ರಾಂತಿಗೃಹವಿತ್ತು; ಮ್ಯುನಿಸಿಪಾಲಿಟಿಯವರು ಆ ಸ್ಥಳ ವಿಶ್ರಾಂತಿಗೃಹಕ್ಕೆ ಯೋಗ್ಯವಾದುದೆಂದು ಹಿಂದೆ ಅಭಿಪ್ರಾಯಪಟ್ಟದ್ದುಂಟು; ಎಂಬದಾಗಿ ಹೇಳಿದಾಗ್ಯೂ ಅರ್ಜಿ ತಿರಸ್ಕರಿಸಲ್ಪಟ್ಟಿತು. ಕರೋಲಿಯಾರವರು ಮ್ಯುನಿಸಿಪಾಲಿಟಿಯ ಮೇಲೆ ದಾವೆ ಮಾಡಿದರು; ಅರ್ಜಿ ತಿರಸ್ಕರಿಸಿದ್ದು ಅಯೋಗ್ಯ; ಅಪ್ಪಣೆ ಕೊಡುವಂತೆ ಮ್ಯುನಿಸಿಪಾಲಿಯ ಮೇಲೆ ಹುಕುಮ ಮಾಡಬೇಕು; ಹೀಗೆ ದಾವೆ. ನ್ಯಾಯಮೂರ್ತಿ ಕ್ರಾಸ್‌ರವರು ಮ್ಯುನಿಸಿಪಾಲಿಟಿಯ ಮೇಲೆ ದಾವೆಯಂತೆ ಹುಕುಮವು ಹೊರಡಿಸಿದರು. ಅವರು ಬರೆಯುವದೇನಂದರೆ:– "ನಾನು ಸ್ಪಷ್ಟವಾಗಿಯೇ ಪ್ರತಿಪಾದಿಸಿಬಿಡುತ್ತೇನೆ; ಏಶಿಯಾ ಖಂಡದ ಜನರಿರುವಲ್ಲಿ ಯುರೋಪಿಯನ್ನರಿಗೆ ಉಳಿಯಲಾಗದವವಿದ್ದವಾಗಿ ಮಹಾ ದೊಡ್ಡ ಆಕ್ಷೇಪ ಮುಂದೆ ಬಂದಿದೆ. ಕಾರಣ ಏಶಿಯಾದವರಿಗೆ ಹೊರನೂಕಲು ಅವರು ಬಯಸುತ್ತಾರೆ. ಏಶಿಯಾ ಜನರ ಹಕ್ಕುಗಳನ್ನು ಕಡಿಮೆ ಮಾಡುವದಕ್ಕಾಗಿ ಮ್ಯುನಿಸಿಪಾಲಿಟಿಯವರ ಕಡೆಯಿಂದ ದೇಶಾಯಿದೇಶೀರ ಅರ್ಥ ಹೊರಡಿಸುತ್ತಾರೆ. ಇದು ಅಪ್ರಾಮಾಣಿಕತನ. ಇವರು ಬಿಳಿ; ಇವರು ಕಪ್ಪು; ಹೀಗೆ ನ್ಯಾಯಾಸನದಲ್ಲಿ ಭೇದ ಮಾಡಬರುವದಿಲ್ಲ" ಹೀಗೆ ನ್ಯಾಯಮೂರ್ತಿಗಳು ನಮೂದಿಸಿ ಮ್ಯುನಿಸಿಪಾಲಿಟಿ ಕಡೆಯ ಆಕ್ಷೇಪವನ್ನು ರದ್ದು ಮಾಡಿದ್ದಾರೆ. ವಿಚಾರದ ಕಾಲಕ್ಕೆ ಮ್ಯುನಿಸಿಪಾಲಿಟಿಯು ಒಂದು ಹುಡುಗಾಟಿಕೆಯ ತಕರಾರು ಮಾಡಿತು: ಕರೋಲಿಯಾರವರಿಗೆ ಸಾಧಾರಣವಾಗಿ ಇಂಗ್ಲಿಷ ಬರುತ್ತಿದ್ದಾಗ್ಯೂ, ಅವರು ಅಂಗ್ಲಭಾಷಾಕೋವಿದರಲ್ಲವಂತೆ!

* *

ಜಳಗಾವಿಯ ಪ್ರದರ್ಶನ.

ಜಳಗಾವಿಯಲ್ಲಿ ಅಖಿಲಭಾರತೀಯ ಸ್ವದೇಶಿ ಪ್ರದರ್ಶನ ನಡೆಯಿತು. ಈ ಪ್ರದರ್ಶನದಲ್ಲಿ ೧೦ ನಂಬರದಿಂದ ೧೪೫ ನಂಬರದ ವರೆಗಿನ ನೂಲೂ, ಅದಕ್ಕೆ ತಕ್ಕ ಹತ್ತಿಯ ಪ್ರಕಾರಗಳೂ ಇಡಲ್ಪಟ್ಟಿದ್ದವು. ೧೦-೧೫ ಮಿನಿಟುಗಳಲ್ಲಿ ೪೦೦-೫೦೦ ಗಜ ನೂಲುವಷ್ಟು ಹತ್ತಿ ಹಿಂಜಿ ಪೇಳು ತಯಾರಿಸುವ ಕೆಲಸವನ್ನು ಶ್ರೀ ಸಮರ್ಥ ಆಶ್ರಮ ಹಾಗು ವರ್ಧಾ ಆಶ್ರಮದೊಳಗಿನ ಕಾರ್ಯನಿರ್ವಾಹಕರು ಮಾಡಿ ತೋರಿಸಿದರು. ಚರಾಟಿಯ ಮೇಲೆ ತಾಸಿಗೆ ೪೦೦-೫೦೦ ಗಜ ನೂಲು ಸಹಜ ನೂತು ತೋರಿಸಿದರು. ಇಷ್ಟೇ ಅಲ್ಲ, ಟಕಳಿಯ ಮೇಲೆ ೩೦೦-೪೦೦ ಗಜ ನೂಲು ಬರುತ್ತದಾಗಿ ವರ್ಧಾ ಆಶ್ರಮದ ರಾ|| ಭಾವುರಾವ ಘಾಸ್ಸೇ ಹಾಗು ಕುಮಾರಿ ವತ್ಸಲಾಬಾಯಿ ದಾಸ್ತಾನೇರವರು ಪ್ರತ್ಯಕ್ಷ ತೋರಿಸಿದರು. ಸಾಧಾರಣವಾಗಿ ಕನ್ಯಾಶಾಲೆಯೊಳಗಿನ ವಿದ್ಯಾರ್ಥಿನಿಯರು ಟಕಳಿಯ ಮೇಲೆ ೨೫೦ ಗಜ ನೂಲು ತೆಗೆದರು. ೪-೫ ವರ್ಷದ ಕುಮಾರಿ ಸುಶೀಲಾಬಾಯಿ ರಾಜೂರಕರವರು ತಾಸಿಗೆ ೨೩೦ ಗಜ ನೂಲು ತೆಗೆದರು. ಕುಮಾರಿ ನಿರ್ಮಲಾ ರಾಜೂರಕರವರು ೧೦೦ ನಂಬರಿನ ೧೫೦ ಗಜ ನೂಲನ್ನು ೧ ತಾಸಿನಲ್ಲಿ ತೆಗೆದರು. ಇವೆಲ್ಲ ನೋಡ ತಕ್ಕಂಥ ಕೌಶಲಗಳು; ಬೋಧಪ್ರದ ಸಂಗತಿಗಳು.

* *

ಉಪಯುಕ್ತ ಮಾಹಿತಿ.

ಕಬ್ಬಿನ ಸಸ್ಯ ಬೆಳೆಸಬೇಕಾದರೆ, ಒಂದು ಉಪಾಯವಿದೆ. ೧೨ ತಾಸು ನೀರಿನಲ್ಲಿ ೪ ರತ್ತಲು ಸುಣ್ಣ ಕಲಿಸಿ ಅದರೊಳಗೆ ಕಬ್ಬಿನ ಗಣಿಕೆಗಳನ್ನು ನೆನಿಸಿಟ್ಟು ನೆಡಬೇಕು; ಅಂದರೆ, ಅವು ಬೇಗನೆ ಹುಟ್ಟುತ್ತವೆ. ಹುಳಗಳ ಬಾಧೆಯಿಲ್ಲ. ಕಬ್ಬು ಚೆನ್ನಾಗಿ ಬೆಳೆದು ಹುಟ್ಟುವಳಿ ಹೆಚ್ಚಾಗುತ್ತದೆ— ಈಗ ಚಹದ ಬದಲಿಗೆ ಕಾಫಿ ಕುಡಿಯುವ ಪ್ರಘಾತ ಪ್ರಾರಂಭವಾಗಹತ್ತಿದೆ. ಕಾಫಿ ಕುಡಿಯುವದರಿಂದ ಅಕಾ[illegible] ಮರಣ ಸಂಭವಿಸುತ್ತದಾಗಿ ಮದ್ರಾಸಿನ 'ಆ[illegible] ಟಿ-ವ್ಹಿಶೇಯು ಅಂಬೆಸಾಣ [illegible]

ಸತ್ಯಾಗ್ರಹದ ವಾರ್ತೆ

ಗುಜರಾಥದೊಳಗೆ.

ಮಹಾತ್ಮರ ಸಹಧರ್ಮಚಾರಿಣಿಯರಾದ ಸೌ|| ಕಸ್ತೂರಬಾಯಿ ಗಾಂಧಿಯವರು ಗುಜರಾಥದಲ್ಲಿ ಸಂಚರಿಸುತ್ತಿದ್ದಾರೆ. ಹೋದ ಹೋದಲ್ಲಿ ಅವರು ಹೇಳುವದೊಂದೇ ಮಾತು: ಕೈರಾಟೆ ಉಳಿಸಿರಿ; ಖಾದಿ ಧರಿಸಿರಿ; ಖಾದಿಯಿಂದಲೇ ಸ್ವರಾಜ್ಯ ಸಿಗುವದು. ಖಾದಿಯಿಲ್ಲದಿದ್ದರೆ ಸ್ವರಾಜ್ಯ ಸಿಗದು. ಪರದೇಶಿ ಅರಿವೆಯನ್ನು ಕೊಂಡುಕೊಳ್ಳಬೇಡಿರಿ; ಗಿರಣಿ ಅರಿವೆ ಕೊಂಡುಕೊಳ್ಳಬೇಡಿ; ಖಾದಿಯಿಂದ ಬಡವರ ಸೇವೆಯಾಗುತ್ತದೆ; ಇದು ಸತ್ಯದ ಕಾದಾಟ; ಅಹಿಂಸೆ-ಖಾದಿಗಳಿಂದ ಜಯಶಾಲಿರಿ; ಸ್ವಸಂತೋಷದಿಂದ ಮಾಡಿದ ತ್ಯಾಗವು ನಿರರ್ಥಕವಾಗದು; ಸತ್ಯದ ವಿಜಯವಾಗಲೇಬೇಕು; ಸ್ವದೇಶದಲ್ಲಿ ನಾವು ಸ್ವತಂತ್ರರಾಗುವೆವು; ಹೀಗೆ ಅವರು ಜನಗಳಿಗೆ ಬೋಧಿಸುತ್ತ ಊರೂರು ಸಂಚರಿಸುತ್ತಿದ್ದಾರೆ. ಬೆಳಗಿನ ೮ ಘಂಟೆಯಿಂದ ರಾತ್ರಿ ೧೦ ಘಂಟೆಯ ತನಕ ಸೌ|| ಯವರು ಈ ಮುಪ್ಪಿನಲ್ಲಿ ದೇಶಕಾರ್ಯ ಮಾಡುವದನ್ನು ನೋಡಿ ಜನರು ಸ್ಫೂರ್ತಿಗೊಳ್ಳುತ್ತಾರೆ. ಅಲ್ಲಲ್ಲಿಯ ಸ್ತ್ರೀ-ಗಣವನ್ನು ಸೌ|| ಯವರು ಕೇಳಿಕೊಂಡು ಹೆಚ್ಚೆಚ್ಚಿನ ಸ್ವಾರ್ಥತ್ಯಾಗ ಮಾಡಲು ಬೋಧಿಸುತ್ತಾರೆ. ಅಹಮದಾಬಾದದಲ್ಲಿ ಸೌ|| ಕಸ್ತೂರಬಾಯಿಯವರು ಖಾದಿ ಭಂಡಾರವನ್ನು ಅನಾವರಣ ಮಾಡುವಾಗಲೂ ಹೀಗೆಯೇ ನುಡಿದು ಖಾದಿಗೆ ತುಂಬಾ ಆಶ್ರಯ ಕೊಟ್ಟು ದೇಶೋದ್ಧಾರ ಸಾಧಿಸ ಬೋಧಿಸಿದರು.

ಬಾರ್ಡೋಲಿ ತಾಲೂಕಿನ ೩೦ ಗ್ರಾಮಗಳ ಸುತ್ತ ಮುತ್ತ ಪೋಲೀಸರು ಕಾವಲಿಟ್ಟಿದ್ದಾರೆ. ಸರಕಾರ ಜಪ್ತಾದ ಹೊಲಗಳನ್ನು ಇವರು ಕಾಯುತ್ತಾರೆ. ಬೆಳೆ ಒಯ್ಯದಂತೆ ಇವರು ಕಾಯುತ್ತಾರೆ. ಬಾಜಿಪುರಾ ಗ್ರಾಮದ ಶ್ರೀ|| ಗೋವಿಂದಭಾಯಿಯವರ ೧೧೨ ಎಕ್ರೆ ಭೂಮಿ ಲಿಲಾಂವಾಯಿತು. ಇದರ ಬೆಲೆ ಸುಮಾರು ರೂ. ೧ ಲಕ್ಷ. ಈಗ ರೂ. ೩೦೦೦ ಬೆಲೆಯ ಬೆಳೆ ನಿಂತಿದೆ ಎಷ್ಟೂ ಕಡಿಮೆ ರೂ. ೧೯೩೫ಕ್ಕೆ ಲಿಲಾಂವು! ಗಂಗಾಬಾಯಿ ಎಂಬ ವೈಶ್ಯರು ಅದನ್ನು ಕೊಂಡುಕೊಂಡರು. ಬೆಳೆ ರಕ್ಷಣೆಗಾಗಿ, ಆತ್ಮರಕ್ಷಣೆಗಾಗಿ ಅವರು ಡೆಪ್ಯುಟಿ ಕಲೆಕ್ಟರರ ಬಳಿ ಬಂದೂಕಿಯ ಲೈಸೆನ್ಸ ಬೇಡಿದ್ದಾರೆ, ಅವಶ್ಯವುಳ್ಳ ಪೋಲೀಸ ರಕ್ಷಣೆ ಸಿಗುವದಾಗಿಯೂ, ದೇಶಾಂತರ ಮಾಡಬಾರದಾಗಿಯೂ ಪೋಲೀಸ ಸುಪರಿಂಟೆಂಡೆಂಟರು ಆಶ್ವಾಸನ ಕೊಡುತ್ತ ಅಡ್ಡಾಡುತ್ತಿದ್ದಾರೆ. ಗ್ರಾಮದಲ್ಲಿ ಸರಕಾರ ಜಪ್ತಾದ ಭೂಮಿಯ ಯಾದಿ ತಯಾರಾಗುತ್ತಲಿದೆ. ಕರಾಡಿ ಗ್ರಾಮದಲ್ಲಿ ಉಪ್ಪಿನ ಕಾಯಿದೆ ಭಂಗ ನಾ ಅಲ್ಲಿ ಸೆರೆಹಿಡಿಯುವ ಕ್ರಮ ನಡೆದಿದೆ. ಮಾಡಿ ಗ್ರಾಮದಲ್ಲಿಯೂ ಉಪ್ಪಿನ ಕಾಯಿದೆ ಭಂಗ ನಡೆದಿದೆ. ಸೆರೆಹಿಡಿದ ಹಾಗೆ ಹೆಚ್ಚೆಚ್ಚಾಗಿ ಜನರು ಕಾಯಿದೆಭಂಗ ಮಾಡುತ್ತಿದ್ದಾರೆ. ಸುರತ ಜಿಲ್ಲೆಯಲ್ಲಿ ಗಾಂಧಿ ಬಂಧನದ ದಿನ ಬೇಕಾಯದೇಶೀರ ಸಭೆಗೆ ಹೋದ ಬಗ್ಗೆ ೧೧ ಮಂದಿ ಹೆಂಗಸರಿಗೆ, ೧೦ ಮಂದಿ ರಿಗೆ ರೂ. ೧೦೦—೧೫೦ರಂತೆ ದಂಡ ಮಾಡಿ, ದಿದ್ದಾಗಗ್ಗೆ ಬಿಟ್ಟುಕೊಟ್ಟರು. ಧ್ವಜವಂ ಗೆ ೩ ಮಂದಿಗಳಿಗೆ ಸೆರೆಹಿಡಿವ ಕ್ರಮ ಸಹ ನಡೆದಿದೆ. ಸುಂಕದಲ್ಲಿಯೂ ಇದೇ ಪ್ರಕಾರ ಧ್ವಜವಂದನಕ್ಕೆ ಅಡ್ಡಿ ಮಾಡಿದರು. ಜನರಿಗೆ ಜೈಲಲ್ಲಿ ಸೇರಗೊಡಲಿಲ್ಲ. ಕರ ಕೊಡಬಾರದೆಂದು ಪ್ರೇರೇಪಿಸಿದ ಬಗ್ಗೆ ರಾಂದೇರ ಕಾಂಗ್ರೆಸ ಕಮಿಟಿಯ ಶ್ರೀ|| ಮಗನಲಾಲ ಶಹಾರವರಿಗೆ ರೂ. ೫೦ ದಂಡವಾಗಿದೆ. ಉಪ್ಪಿನ ಕಾಯಿದೆಭಂಗ ಮಾಡಿದ ಸೌ|| ಶಾರದಾಬಾಯಿ ಅವಸೇಯವರಿಗೂ, ಇತರ ಮೂವರು ಹೆಂಗಸರಿಗೂ ೩—೩ ತಿಂಗಳ ಶಿಕ್ಷೆ.

ಬೋರಸದ ತಾಲೂಕಿನಲ್ಲಿ ಜಗಳವು ಉಲ್ಬಣವಾಗ ಹತ್ತಿದೆ. ಕಾಕ-ಪೋಲೀಸರು ದರೋಡೆ ಹಾಕಿ ಬೆಳೆ ಹೊಯ್ಯುತ್ತಾರೆ. ಈ ತಾಲೂಕಿನ ಬಹುತರ ಗ್ರಾಮದಲ್ಲಿ ಎಷ್ಟು ಭೂಮಿ ಜಪ್ತಾದ ನೋಟೀಸುಗಳು ಹೊರಟಿವೆ. ಸ್ವರಾಜ್ಯ ದಿನ, ವಾನರ ದಿನ ಹೀಗೆ ದಿನಗಳು ಪಾಲಿಸಲ್ಪಟ್ಟವು. ಸುನಾವ ಗ್ರಾಮದಲ್ಲಿ ಮಾತ್ರ ಪೋಲೀಸರು ಇವುಗಳಿಗೆ ಅಡ್ಡಿ ಮಾಡಿದರು. ವಾನರರ ಕೈಯಿಂದ ಧ್ವಜ ಕಸಕೊಂಡರು. ಹೆಂಗಸರ ಮೇಲೆ ಧೂಳಿ ತೂರಿಸಿದರು. ಗಂಡಸರಿಗೆ ದೊಣ್ಣೆಯಿಂದ ಹೊಡೆದರು. ಸ್ವಯಂಸೇವಕರಾದ ಮಾಧವಲಾಲ ಎಂಬವರಿಗೆ ೩೦ ದೊಣ್ಣೆಪೆಟ್ಟು ಬಿದ್ದು ಬಹಳ ಪೆಟ್ಟಾಗಿದೆ. ವಾನರ ಹುಡುಗರಿಗೆ ಬೆತ್ತದಿಂದ ಹೊಡೆದರು. ನಡಿಯಾದದಲ್ಲಿಯೂ ಅಲ್ಲಿಯವರು ಗಾಂಧಿ ದಿನ, ಒಕ್ಕಲಿಗರ ದಿನ, ಸ್ತ್ರೀ ದಿನ, ವಾನರ ದಿನ; ಹೀಗೆ ಜನವರಿ ೧ನೇ ತಾರೀಖಿನಿಂದ ದಿನಗಳನ್ನು ಆಚರಿಸಿದರು; ಮೆರವಣಿಗೆ ತೆಗೆದರು. ಪೋಲೀಸರು ದೊಣ್ಣೆ ಹೊಡೆದು ಒಕ್ಕಲಿಗರನ್ನು, ವಾನರ ಸೇನೆಯನ್ನೂ ಚದರಿಸಿದರು. ಸ್ತ್ರೀಯರು ಇದೇ ದಿನ ಕೈರಾಟೆಯ ಮೇಲೆ ನೂಲು ತೆಗೆದು ತಮ್ಮ ದಿನವನ್ನಾಚರಿಸಿದರು. ಬೋರಸದ ತಾಲೂಕಿನ ವಾನರರು ಜೈಲ ರೊಟ್ಟಿ ತಿಂದು ಜೈಲ ದಿನವನ್ನು ಪಾಲಿಸಿದರು. ದಿನಾ ಸ್ವಯಂಸೇವಕರು ಪಿಕೆಟಿಂಗಿಗೆ ಹೋಗುತ್ತಾರೆ. ದಿನಾ ಅಂಗಡಿಯ ಮುಂದೆ ಹೋಗಿ ನಿಂತ ಕೂಡಲೆ ಅವರಿಗೆ ಸೆರೆಹಿಡಿದು ಸಂಜೆಯ ತನಕ ಸೆರೆಮನೆಯಲ್ಲಿಟ್ಟು ಬಿಟ್ಟು ಕೊಡುತ್ತಾರೆ. ನಡಿಯಾದ ತಾಲೂಕಿನಲ್ಲಿಯೂ ಒಕ್ಕಲಿಗರಿಗೆ ಹೊಡೆಯುವ ಬೆಳೆ ಕದ್ದೊಯ್ಯುವ ಪ್ರಕಾರಗಳು ನಡೆದಿವೆ. ಬೋರಸದ ತಾಲೂಕಾ ಕಾಂಗ್ರೆಸ ಕಮಿಟಿಯ ಕಾರ್ಯದರ್ಶಿಗಳಾದ ಶ್ರೀ|| ದೇಸಾಯಿಯವರು ಸೆರೆಹಿಡಿದ ಇಪ್ಪತ್ತು ಸ್ತ್ರೀ-ಸ್ವಯಂಸೇವಿಕೆಯರಿಗೆ ಕುಡಿಯಲು ನೀರು ಕೊಡಹೋಗಿದ್ದರು; ಆಗ ಅವರಿಗೂ ಸೆರೆಹಿಡಿದರು.

ಗುಜರಾಥದಲ್ಲೆಲ್ಲ ಖಾನೇಸುಮಾರಿಯ ಬಹಿಷ್ಕಾರ ನಡೆದಿದೆ. ಮನೆಯ ನಂಬರುಗಳನ್ನು ಅಳಿಸುವ ಕ್ರಮ ನಡೆದಿದೆ. ಅಹಮದಾಬಾದ ಮ್ಯುನಿಸಿಪಾಲಿಟಿಯವರು ಖಾನೇಸುಮಾರಿಯನ್ನು ಬಹಿಷ್ಕರಿಸುವ ನಿರ್ಧಾರ ಮಾಡಿ ಈ ಕಾರ್ಯದಲ್ಲಿ ಸರಕಾರಕ್ಕೆ ತಮ್ಮಿಂದ ಸಹಾಯವಾಗಲಿಕ್ಕಿಲ್ಲವಾಗಿಯೂ ಪ್ರಸ್ತುತ ಪರಿಸ್ಥಿತಿಯಲ್ಲಿ ಅದನ್ನು ಮುಂದೂಡಬೇಕೆಂದೂ ಬರಕೊಂಡರು. “ಈ ಠರಾವಿನಿಂದ ಜನರಿಗೆ ಹಿತವಿಲ್ಲ; ಹಿಂದುಸ್ತಾನಕ್ಕೂ ಹಿತವಿಲ್ಲ; ಖಾನೇಸುಮಾರಿಯ ಕೆಲಸ ನಡೆಯಲೇಬೇಕು. ಅದಕ್ಕೆ ತಡೆಬೀಳಲಾಗದು. ಮ್ಯುನಿಸಿಪಾಲಿಟಿಯವರು ಪುನರಾಲೋಚಿಸಿ ಖಾನೇಸುಮಾರಿ ಕಾಯಿದೆಯಂತೆ ನಡೆವಾಗ ತಯಾರಾಗಿದ್ದರೆ, ಅದರಂತೆ ಅವಶ್ಯವುಳ್ಳ ಇಲಾಜು ಕೈಕೊಳ್ಳಲ್ಪಡುವದೆಂದು” ಕಲೆಕ್ಟರರು ಮ್ಯುನಿಸಿಪಾಲಿಟಿಗೆ ಬರೆದರು. ದವಾರಕ್ಕೆ ಕಲೆಕ್ಟರರ ಪತ್ರದ ವಿಚಾರವಾಯಿತು. ದೇಶದ ಹಾಗು ನಾಗರಿಕರ ಹಿತದ ಆಲೋಚನೆಯಿಂದಲೇ ಸದರ ಠರಾವಾಗಿರುವದಾಗಿ ಮ್ಯುನಿಸಿಪಾಲಿಟಿಯವರು ನಿರ್ಧಾರ ಮಾಡಿದ್ದಾರೆ. ರಾ|| ದಾಹಿವಾಲ ಪ್ರಭೃತಿ ಸರಕಾರನಿಯುಕ್ತರು ಎಂದಿನಂತೆ ಸರಕಾರಕ್ಕೆ ದೊಡ್ಡವ ಸಹಕಾರ ಮಾಡಬೇಕಾಗಿ ಮಾಡಿದ ಸೂಚನೆ ತಿರಸ್ಕರಿಸಲ್ಪಟ್ಟು, ಮೂಲ ಠರಾವು ಪ್ರಚಂಡ ಬಹುಮತದಿಂದ ಮನ್ನಿಸಲ್ಪಟ್ಟಿತು. ಇಷ್ಟೇ ಅಲ್ಲದೆ, ಇದೇ ಅಧಿವೇಶನದಲ್ಲಿ, ರಿಚಿ ರೋಡ, ಒಲಿಫಂಟ ರೋಡ ಅಹಮದಾಬಾದದೊಳಗಿನ ಮುಖ್ಯ ಮುಖ್ಯ ಮಾರ್ಗಗಳಿಗೆ ‘ಗಾಂಧಿ ಮಾರ್ಗ,’ ‘ವಲ್ಲಭ ಮಾರ್ಗ’ ಎಂದು ಹೆಸರು ಕೊಡಲಾಗಿದೆ. ಈ ಜಿಲ್ಲೆಯ ದಸ್ಕ್ರೋಯಿ-ಹಲೋಲ ತಾಲೂಕುಗಳಲ್ಲಿ ಕರ ನಿರಾಕರಣೆಯು ಚಳವಳಿ ಹುಟ್ಟುತ್ತಲಿದೆ. ಜನರು ಊರು ಬಿಟ್ಟು ಹೋಗುತ್ತಿದ್ದಾರೆ.

ವಿರಮಗಾಂವ ಸತ್ಯಾಗ್ರಹ ಶಿಬಿರದ ಸ್ವಯಂಸೇವಕರು ತಾಲೂಕಿನೊಳಗಿನ ಗ್ರಾಮಗಳಲ್ಲಿ ಮನೆಯ ನಂಬರುಗಳನ್ನು ಅಳಿಸಹೋಗಿದ್ದರು. ಡೇಕಾವಾಡಾ ಗ್ರಾಮದ ಶಾಲಾ ಮಾಸ್ತರು ಅವರ ಕೈಯಲ್ಲಿದ್ದ ಬಣ್ಣದ ಬಟ್ಟೆಯಿಂದ ಅವರ ಮೋರೆಗೇ ಬಣ್ಣ ಬಡಿದರು.!

ಮುಂಬಯಿಯೊಳಗೆ.

ಮುಖ್ಯವಾಗಿ ಮೌ|| ಮಹಮ್ಮದ ಅಲ್ಲಿಯವರ ನಿಧನವು. ರೌಂಡ ಟೇಬಲ್ ಪರಿಷತ್ತಿಗೆ ಹೋದ ಮೌ|| ಮಹಮ್ಮದ ಅಲ್ಲಿಯವರು ತೀರಿಕೊಂಡ ಸುದ್ದಿ ಸೋಮವಾರ ಊರತುಂಬಾ ಹಬ್ಬಿತು. ಅದೇ ದಿನ ಗಾಂಧಿ ದಿನವಿತ್ತು. ಊರತುಂಬ ಹರತಾಳ. ಹಿಂದು-ಮುಸಲ್ಮಾನರೆಲ್ಲರೂ ಐಕ್ಯತೆಗಾಗಿ ಇವೆರಡೂ ದಿನಗಳನ್ನಾಚರಿಸಿದರು. ಮೌ|| ಮಹಮ್ಮದ ಅಲ್ಲಿಯವರು ತೀರಿಕೊಂಡದ್ದರಿಂದ ಉಂಟಾದ ಶೋಕವನ್ನು ಪ್ರಚಂಡ ಸಭೆಸೇರಿಸಿ ವ್ಯಕ್ತಗೊಳಿಸಿದರು. ಗಾಂಧಿ ದಿನದ ಕಾರ್ಯಕ್ರಮವು ಸಂಪ್ರದಾಯದಂತೆ ನಡೆಯಿತು. ಮಹಮ್ಮದ ಅಲ್ಲಿಯವರು ದೇಶಕ್ಕಾಗಿ ಪ್ರಾಣವನ್ನೇ ಅರ್ಪಿಸಿದರೆಂದೂ ಅಂಥ ತೇಜಸ್ವಿ ಮೂರ್ತಿ ಈ ಸಮಯ ತೀರಿಕೊಂಡದ್ದರಿಂದ ಬಹಳ ನಷ್ಟವಾಗಿದೆಂದೂ ಎಲ್ಲರೂ ಮರುಗಿದರು. ಆ ದಿನ ಕೆಲವರು ಕಲ್ಲುಗಳನ್ನೆಸೆದು ಬಲಾತ್ಕಾರದಿಂದ ಟ್ರ್ಯಾಮುಗಳನ್ನು ನಿಲ್ಲಿಸುವ ಪ್ರಯತ್ನ ಮಾಡಿದರು. ಇದರಿಂದ ಪೋಲೀಸರು ದೊಣ್ಣೆ ಹೊಡೆದು ಜನರನ್ನು ಚದರಿಸಿದರು. ಸುಮಾರು ೩೫-೪೦ ಮಂದಿಗಳಿಗೆ ಘಾಯಗಳಾಗಿವೆ.

ಸರದಾರ ವಲ್ಲಭಭಾಯಿ ಪಟೇಲರ ಮೇಲಿನ ಖಟ್ಲೆಯ ತೀರ್ಪು ಮಂಗಳವಾರದಲ್ಲಾಯಿತು. ಸರದಾರ ವಲ್ಲಭಭಾಯಿಯವರು ಕಾಂಗ್ರೆಸ ಕಮಿಟಿಯ ಅಧ್ಯಕ್ಷರಾಗಿ ಬೇಕಾಯದೇಶೀರ ಸಂಸ್ಥೆಗೆ ನೆರವಾದರೆಂದು ಮೆಜಿಸ್ಟ್ರೇಟರು ತೀರ್ಪು ಕೊಟ್ಟು, ವಲ್ಲಭಭಾಯಿಯವರ ವೃದ್ಧಾಪ್ಯದ ಮೂಲಕ ದಯಾರ್ದ್ರರಾಗಿ ಅಂತು ಅವರಿಗೆ ೯ ತಿಂಗಳ ಸಜೆ ವಿಧಿಸಿದ್ದಾರೆ. ‘ನಾನು ಮುದುಕನಲ್ಲ; ಬರೇ ೫೬ ವರ್ಷಗಳಾಗಿವೆ’ ಎಂದು ಸರದಾರ ವಲ್ಲಭಭಾಯಿಯವರು ನಗೆಮೊಗದಿಂದ ಮೆಜಿಸ್ಟ್ರೇಟರಿಗೆ ತಿಳಿಸಿ, ದರಮಾನಾವಧಿಯ ಶಿಕ್ಷೆ ಕೊಡಬೇಕಾಗಿ ಧ್ವನಿಸಿದರು. ಬಾಬು ರಾಜೇಂದ್ರ ಪ್ರಸಾದರವರಿಗೆ ರಾಷ್ಟ್ರೀಯ ಸಭೆಯ ಅಧ್ಯಕ್ಷರಾಗಿ ನೇಮಿಸಿ, ಸರದಾರರು ಸೆರೆಮನೆ ಸೇರಿದರು. ಬುಧವಾರ ‘ಫ್ರೀ ಪ್ರೆಸ್ ಜರ್ನಲ್’ ಪತ್ರಿಕಾಕರ್ತರ ಮೇಲಿನ ಖಟ್ಲೆಯ

(ಮುಂದೆ ೭ನೇ ಪಾನಿನ ಮೇಲೆ ಮುಂದರಿಸಿದೆ.)

ಕಾನಡಾವೃತ್ತ

ಪ್ರಮೋದ ಸಂ। ಪುಷ್ಯ ವ। ೯ ಮಿ ಸೋಮವಾರ

ಮೌ। ಮಹಮ್ಮದ ಅಲ್ಲಿ.

ಇಸ್ಲಾಮ ಧರ್ಮವೀರರೂ ಹಿಂದಮಾತೆಯ ನಿಷ್ಠವಂತ ಸೇವಕರೂ ಎನಿಸು[illegible] ।ಹಿತಕ್ಕಾ[illegible] ದಣಿಯದೆ ದು[illegible]ದವರೂ ಆದ ಮೌ। ಮಹಮ್ಮದ ಅಲ್ಲಿಯವರು ಆದಿತ್ಯವಾರ ಮುಂಜಾನೆ ೯। ಘಂಟೆಗೆ ಲಂಡನದಲ್ಲಿ ಕಾಲಾಧೀನರಾದರೆಂಬ [illegible] ನಮಗೆ ಅತ್ಯಂತ ವ[illegible]ಯಾಗುತ್ತಿದೆ. ಮೌ। ಮಹಮ್ಮದ ಅಲ್ಲಿಯವರನ್ನರಿಯದವರು ನಮ್ಮೀ ದೇಶದಲ್ಲಿ ಈಗ ಯಾರೂ ಇಲ್ಲವಾಗಿ ಹಿಂದಿತ ಹೋಗಿಹುದು. ಅಸಹಯೋಗದ [illegible]ತರದಲ್ಲಿ ಮಹಾತ್ಮರ ಜೊತೆಗ ಅವರು ಸರಕಾರದೊಡನೆ ಹೂಡಿದ ಖಿಲಾಫತ ಕಾದಾಟವು ಸರ್ವಪ್ರಸಿದ್ಧವಿದೆ. ಈಗ ರೌಂಡ ಟೇಬಲ್ ಪರಿಷತ್ತಿಗೆ ಅವರು ಹೋದಾಗ್ಯೂ ಅವರ ಅಂತಃಕರಣವು ಹಿಂದಮಾತೆಯ ಸ್ವಾತಂತ್ರ್ಯಕ್ಕಾಗಿ ಯಾವಾಗಲೂ ತಲ್ಲಣಿಸುತ್ತಿತ್ತು. ಸ್ವಾತಂತ್ರ್ಯವನ್ನು ಜ[illegible]ಕೊಳ್ಳುವದಕ್ಕಾಗಿಯೇ ಅವರು ಲಂಡನಿನ ಪ್ರವಾಸವನ್ನು ಕೈಕೊಂಡರು ‘ಪ್ರಕೃತಿ ಕ್ಷೀಣವಾಣವಾಗಿದೆ, ಇಂಥ ಪ್ರಸಕ್ತಿಯಲ್ಲಿ ವಿಲಾಯತಿಯ ಪ್ರವಾಸವನ್ನು ಕೈಕೊಳ್ಳುವದು ಅಪಾಯಕರ”ವೆಂದು ಮುಂಬಯಿಯ ಡಾ। ಎಡೂಳಕರ ಮೊದಲಾದ ಗೆಳೆಯರು ಸಾರಿ ದೂರಿ ಹೇಳಿದಾಗ್ಯೂ, ಮೌ। ಮಹಮ್ಮದ ಅಲ್ಲಿಯವರು ಆ ಕಡೆ ಲಕ್ಷಗೊಡದೆ ದೇಶದ ಸ್ವಾತಂತ್ರ್ಯಕ್ಕಾಗಿ ಪ್ರಾಣವನ್ನೇ ಗಂಡಾಂತರದಲ್ಲಿ ಸಿಲುಕಿ ಹಾಕಿದರು “೭ ಮೈಲು ಅಡ್ಡಾಡುವಷ್ಟು ನನ್ನಲ್ಲಿ ತ್ರಾಣವಿಲ್ಲ, ೭೦೦೦ ಮೈಲು ನಾನು ಪರ್ಯಟನಮಾಡಿ ಇಲ್ಲಿಗೆ ಬಂದಿದ್ದೇನೆ ಇಸ್ಲಾಮ ಧರ್ಮಕ್ಕಾಗಿ, ಹಿಂದುಸ್ಥಾನ ದೇಶಕ್ಕಾಗಿ ಈ ಮಹಾಯಾತ್ರೆ ಮಾಡಿರುತ್ತೇನೆ, ಈಶಸೇವೆಯೆಂದು ನಾನು ಈ ಕಾರ್ಯಕ್ಕೆ ಹೊರಟಿದ್ದೇನೆ, ಸ್ವಾತಂತ್ರ್ಯಪ್ರಾಪ್ತಿ ಮಾಡಿಕೊಂಡು ಹೋಗಲು ಬಂದಿದ್ದೇನೆ, ಗುಲಾಮ ದೇಶಕ್ಕೆ ನಾನು ಹಿಂದಿರುಗಲಾರೆ, ಹಿಂದುಸ್ಥಾನ ದೇಶಕ್ಕೆ ಸ್ವಾತಂತ್ರ್ಯ ಕೊಡದಿದ್ದರೆ, ನಾನು ಇಲ್ಲಿಯೇ ಮಡಿಯುವೆನು ಸ್ವತಂತ್ರ ಭೂಮಿಯಲ್ಲಿ ದೇಹವನ್ನರ್ಪಿಸಿ ಧನ್ಯನಾಗುವೆನ” ಹೀಗೆ ಮೌ। ಮಹಮ್ಮದ ಅಲ್ಲಿಯವರು ರೌಂಡ ಟೇಬಲ್ ಪರಿಷತ್ತಿನಲ್ಲಿ ಭಾಷಣ ಮಾಡಿ, “ನಾನು ತಪ್ಪಿದಾಗ ಲೀಡಿಂಗ ದೊರೆಗಳು ನನಗೆ ಜೈಲಿಗೆ ಕಳುಹಿದರು, ಅಂತೆಯೇ ಅವರು ತಪ್ಪಿದಾಗ ಅವರಿಗೆ ಜೈಲಿಗೆ ಕಳುಹುವಷ್ಟು ಸ್ವಾತಂತ್ರ್ಯವು ನನಗೆ ಬೇಕು’ ಹೀಗೆ ಸಹ ಪರಿಷತ್ತಿನಲ್ಲಿ ಉದ್ಗರಿಸಿ ತಮಗಿರುವ ಸ್ವಾತಂತ್ರ್ಯದ ಲಾಲಸೆಯನ್ನು ಅವರು ವ್ಯಕ್ತಗೊಳಿಸಿದ್ದಾರ. ಇಂಥ ಸ್ವಾತಂತ್ರ್ಯಕಾಂಕ್ಷಿ ಪುರುಷನು ಆಚೆ ರವಿವಾರ ತೀರಿಕೊಂಡು, ಹಿಂದಮಾತೆಯನ್ನು ಶೋಕಸಾಗರದಲ್ಲಿ ಕೆಡವಿದ್ದಾನೆ ಸಾಯುವ ತನಕ ಆತನಿಗ ದೇಶಹಿತದ್ದೇ ಚಿಂತೆ. ಹಿಂದು-ಮುಸಲ್ಮಾನರೊಳಗೆ ಬಂಡಿಗಾಲಿ ಪರಿಷತ್ತಿನಲ್ಲಿ ನಡೆದ ಬಡದಾಟವನ್ನು ಎಲ್ಲರೂ ಬಲ್ಲಾದ ವಿಷಯ. ಯಾರೂ ಪ್ರಯತ್ನ ಮಾಡಿದಾಗ್ಯೂ ಈ ಪ್ರಶ್ನೆಯು ಬಿಡಿಸುವಂತಿಲ್ಲ. ಮುಖ್ಯ ಪ್ರಧಾನರಾದಿ ಬ್ರಿಟಿಶ ಪ್ರತಿನಿಧಿಗಳು ಬಹಳ ಪ್ರಯತ್ನ ಮಾಡಿದರಂತೆ. ಮೌ। ಮಹಮ್ಮದ ಅಲ್ಲಿಯವರಿಗೂ ಇದೇ ಚಿಂತೆ. ಶುಕ್ರವಾರ ಶನಿವಾರ ಮೌಲಾನಾರವರು ಈ ಕುರಿತ ತಮ್ಮ ವಿಚಾರ[illegible] ಪ್ರದರ್ಶಿಸಿ ಒಂದು ಕೈಫಿಯತನ್ನು ತಯಾರ[illegible] ಮಧ್ಯರಾತ್ರಿಯ ತನಕ ಆದರೂ[illegible] ಪ್ರ[illegible] ಬಗ್ಗೆ [illegible]ದರಂತೆ ಈ ಕೈಫಿಯತು [illegible] ಪ್ರಕಟವಾ[illegible] ಅದರ[illegible] ರವ[illegible] ಪಕ್ಕೆ [illegible]ತಂತ್ರ್ಯ [illegible] ಸ್ವಾತಂತ್ರ್ಯ [illegible] ಸ್ವಾತಂತ್ರ್ಯ [illegible] ಸತ್ಯಾಗ್ರಹ [illegible] ನಡಿಸ[illegible]ವಾಗಿ [illegible] ಸ್ವಾತಂತ್ರ್ಯ [illegible] ಮಹಮ್ಮದ ಅಲ್ಲಿಯವರ [illegible] ಸ್ವಾತಂತ್ರ್ಯ [illegible] ಆತ್ಮಶ್ಲಾಘದ್ದೇ [illegible] ಜನಾಂಗಕ್ಕೆ [illegible] ಹಿಂದುಸ್ಥಾನದಲ್ಲ ಬೇರೂರಿದ, ಬೆಳೆಯುತ್ತಿದ [illegible] ಸಹ ಮೌ। ರವರು ಉದ್ಗರಿಸಿ ಸತ್ಯಾಗ್ರಹ [illegible]ಮಕ್ಕೆ ಒಪ್ಪಿಗೆಯನ್ನಿತ್ತಿದ್ದಾರೆ.

ಮೌಲಾನಾರವರ ಇದೇ ಚರಿತ್ರವಾದರೂ ಸ್ವಾರ್ಥತ್ಯಾಗದ್ದೇ ಆದೆ. ಮೌಲಾನಾ ಮಹಮ್ಮದ ಅಲ್ಲಿಯವರ [illegible] ವರ್ಷ [illegible]ಯದಲ್ಲಿಯೇ ಅವರ ತಂದೆಯವರು ತೀರಿಕೊಂಡಾಗ್ಯೂ ಮಾತೋಶ್ರೀ ಬಾಯಿ ಅಮ್ಮಾರವರು ಮೌ। ಮಹಮ್ಮದ ಅಲ್ಲಿಯವರಿಗೆ ತಕ್ಕ ಶಿಕ್ಷಣ ಕೊಟ್ಟು, ಇಂಡಿಯನ್ ಸಿವ್ಹಿಲ್ ಸರ್ವೀಸ್ ಪರೀಕ್ಷೆಗೆ ಕುಳ್ಳಿರಿಸಿದರು. ಹಿಂದುಸ್ಥಾನದ ಭಾಗ್ಯ, ಇಸ್ಲಾಮ ಧರ್ಮದ ಸುದೈವ! ಮಹಮ್ಮದ ಅಲ್ಲಿಯವರು ಆ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಲಿಲ್ಲ. ಕೆಲ ದಿನ ಬಡೋದೆ ಸಂಸ್ಥಾನದಲ್ಲಿ ನೌಕರಿ ನಡಿಸಿ, ಅದನ್ನು ಬಿಟ್ಟು, ಕೊಮ್ರೇಡ', 'ಹಮದರ್ದ' ಪತ್ರಗಳನ್ನು ನಡಿಸಿದರು. ಈ ಪತ್ರಗಳಿಗಾಗಿ ಅವರಿಗೆ ಬಹಳ ನಷ್ಟವಾಯಿತು. ಮುಂದೆ ಮುಸಲ್ಮಾನರ ಹಿತಕ್ಕಾಗಿ ಮುಸ್ಲಿಮ ಲೀಗ ಸಂಸ್ಥೆಯನ್ನು ಸ್ಥಾಪಿಸಿದರು. ಮುಸಲ್ಮಾನರ ಅಲೀಗಡ ವಿಶ್ವವಿದ್ಯಾಲಯದ ಪ್ರವರ್ತಕರೂ ಇವರೇ! ಬಾಲ್ಕನ್ ಯುದ್ಧದಲ್ಲಿ ಘಾಯಪಟ್ಟ ತುರ್ಕೀ ಶಿಪಾಯಿಗಳ ಶುಶ್ರೂಷೆಗಾಗಿ ಒಂದು ಶುಶ್ರೂಷಾ ಪಥಕವನ್ನು ಇವರು ಕಳುಹಿದರು. ಮಹಾಯುದ್ಧಕಾಲದಲ್ಲಿ ಸಾರ್ವಭೌಮ ಪಂಚಮ ಜಾರ್ಜರ ವಿರುದ್ಧ ರಾಜ್ಯಕ್ರಾಂತಿ ಮಾಡಲುದ್ಯುಕ್ತರಾದ ಬಗ್ಗೆ ಇವರಿಗೆ ಬಂದಿವಾಸವನ್ನನುಭವಿಸಬೇಕಾಯಿತು. ಆ ಮೇಲೆ ಅಸಹಯೋಗ ಮನ್ವಂತರ ಕರಾಚಿಯ ಮಿಟ್ಟಿಯಲ್ಲಿ ಸೈನಿಕರಿಗೆ ಸ್ವಾಮಿದ್ರೋಹ ಮಾಡ ಕಲಿಸಲೆತ್ನಿಸಿದ ಅಪರಾಧದ ಮೇಲೆ ಅವರಿಗೆ ಶಿಕ್ಷೆಯಾಯಿತು. ಆ ಮೇಲೆ ಮೌ। ಮಹಮ್ಮದ ಅಲ್ಲಿಯವರು ಕಾಕಿನಾಡಿನ ರಾಷ್ಟ್ರೀಯ ಸಭೆಯ ಅಧ್ಯಕ್ಷರಾಗಿ ನಡಿಸಿದ ದೇಶಸೇವೆಯು ಇತ್ತ ಲೋಕವಿಶ್ರುತವಿದೆ. ಕಾಯಿದೆಭಂಗದ ಉಪಕ್ರಮಕ್ಕೆ ಅವರು ಪ್ರತ್ಯಕ್ಷ ಸೇರದಿದ್ದಾಗ್ಯೂ ಅವರ ಅಂತರಾತ್ಮನು ಕಾಯಿದೆ ಭಂಗದಲ್ಲಿಯೇ ಸೇರಿಕೊಂಡಿದ್ದನು. ಸ್ವಾತಂತ್ರ್ಯ ಕೊಡದಿದ್ದರೆ, ನಮ್ಮ ಜೊತೆಗಾರರೊಡನೆ ಕಾಯಿದೆ ಭಂಗದಲ್ಲಿ ತಾವು ಸೇರುವೆವಾಗಿ ಬಂಡಿಗಾಲಿ ಪರಿಷತ್ತಿನಲ್ಲಿ ಮುಖ್ಯ ಪ್ರಧಾನರ ಸಮಕ್ಷ ಅವರು ಉದ್ಗರಿಸಿದ್ದಾರೆ.

ಈ ಪ್ರಕಾರ ಮೌ। ಮಹಮ್ಮದ ಅಲ್ಲಿಯವರು ಪರಲೋಕ ಪರ್ಯಟನದ ತಯಾರಿ ನಡಿಸುತ್ತಿದ್ದಾಗ್ಯೂ ಇವರ ಅಂತ್ಯಕಾಲವು ಇಷ್ಟು ಬೇಗ ಸಮೀಪಿಸಿದೆಂದು ಒಬ್ಬರೂ ತಿಳಿದಿರಲಿಲ್ಲ. ಮೌ। ಮಹಮ್ಮದ ಅಲ್ಲಿಯವರ ಪ್ರಕೃತಿ ದಿನಾ ದಿನೇ ಸುಧಾರಿಸ[illegible]ದೆಂಬ ಸುದ್ದಿ ಬರುತ್ತಿತ್ತು. ಮೌ। ಶೌಕತ ಅಲ್ಲಿಯವರು ಆಯರ್ಲಂಡಕ್ಕೆ ಹೋಗಿ ರವಿವಾರ ಮುಂಜಾವಿಗೆ ಲಂಡನಿಗ ಹಿಂತಿರುಗಿ ತಲ್ಪಿದ್ದರು. ಮೌ। ಶೌಕತ ಅಲ್ಲಿಯವರು ಬಂದಾಗ ತಮ್ಮಂದಿರಿಗೆ ಎಚ್ಚರದ [illegible]ತ್ತು. ಮುಂಜಾವು ೫ ಘಂಟೆಗೆ ಮಹಮ್ಮದ ಅಲ್ಲಿಯವರ ಇಹಲೋಕ ಮರತಿದ್ದರು. ಹಾಸಿಗೆಯ ಸುತ್ತಮುತ್ತ ಅವರ ಹೆಂಡತಿಯೂ, ಮಗಳೂ ಶುಶ್ರೂಷೆ ಮಾಡುತ್ತಿದ್ದರು. ಹೀಗೆ ಮೌ। ಮಹಮ್ಮದ ಅಲ್ಲಿಯವರು ತಮ್ಮ ಇಹಲೋಕದ ಯಾತ್ರೆಯನ್ನು ಮುಗಿಸಿ ಪರಲೋಕಕ್ಕೆ ತೆರಳಿದ್ದಾರೆ. ಬ್ರಿಟಿಶ ಪ್ರತಿನಿಧಿಗ[illegible] ಸಂಸ್ಥಾನಿಕರೂ, ಹಿಂದು ಮುಸಲ್ಮಾನರಲ್ಲರೂ ಮೌ। ಮಹಮ್ಮದ ಅಲ್ಲಿಯವರ ರಾಷ್ಟ್ರಪ್ರೇಮವನ್ನೂ, ಧರ್ಮನಿಷ್ಠೆಯನ್ನೂ ಕಾರ್ಯದಕ್ಷತೆಯನ್ನೂ ಮನದಣಿ ಹೊಗಳಿ ಅವರ ನಿಧನದಿಂದ ಒಬ್ಬ ಲೋಕಸೇವಕ ಪುರುಷನು ಮಾಯವಾಗಿದ್ದಾನೆಂದು ಮರುಗಿದ್ದಾರೆ. ತೇಜಃಪುಂಜ ಪುರುಷನು ಅಂತರ್ಧಾನ ಹೊಂದಿದನಾಗಿ ಪಂಡಿತ ಮೋತಿಲಾಲರು ಮರುಗುತ್ತಾರೆ. ಯೆರವಡಾ ಅರಮನೆಯಲ್ಲಿ ಸೂಲುತ್ತ ಕಾಲಕ್ಷೇಪ ಮಾಡುವ ಮಹಾತ್ಮಾ ಗಾಂಧಿಯವರು ಮೌಲಾನಾರವರ ನಿಧನ ವಾರ್ತೆ ಕೇಳಿ ವ್ಯಾಕುಲಗೊಳ್ಳುವದು ಸಹಜವಿದೆ. ಅಸಹಯೋಗದ ಹೊಸ ಯುಗವನ್ನು ಹಿಂದುಸ್ಥಾನದಲ್ಲಿ ಪ್ರಚುರಗೊಳಿಸಿದ ಪುಣ್ಯ ಪುರುಷರಲ್ಲಿ ಇವರೊಬ್ಬರಲ್ಲವೆ? ಇಂಥ ಪುಣ್ಯಾತ್ಮನು ಅವಸಾನ ಹೊಂದಿದ್ದಾನ. ರೌಂಡ ಟೇಬಲ್ ಪರಿಷತ್ತಿನಿಂದ ಹಿಂದುಸ್ಥಾನಕ್ಕಾಗುವ ಪ್ರಾಪ್ತಿ ಈಗ ಸ್ಪಷ್ಟಪಡಿಸಿ ಹೇಳಬೇಕಾಗಿಲ್ಲ. ಮುಖ್ಯ ಪ್ರಧಾನರು ಸದ್ಯಕ್ಕೇ ಅದನ್ನು ಬಹಿರಂಗಗೊಳಿಸುವರಂತೆ ಆಡೇಸಿದ್ದಾಗ್ಯೂ, ಹಿಂದುಸ್ಥಾನಕ್ಕೆ ಸ್ವಾತಂತ್ರ್ಯ ದೊರಕುವ ಆಶೆ ಕಡಿಮೆ. ಇಂಥ ಪ್ರಸಕ್ತಿಯಲ್ಲಿ ಸತ್ಯಾಗ್ರಹಕ್ಕೆ ಒಳ್ಳೇ ಕಳೆ ಏರುವಾಗ ಮೌ। ಮಹಮ್ಮದ ಅಲ್ಲಿಯವರಂಥ ಪ್ರಚಂಡ ಶಕ್ತಿಯು ಕಾಣದಂತಾಗಿದ ಇದೆನ್ನು ನಮೂದಿಸಲು ನಮಗೆ ವ್ಯಸನವಾಗುತ್ತದೆ. ಮೌ। ಮಹಮ್ಮದ ಅ[illegible]ಯವರ ದಫನ ವಿಧಿಯು ಪಾಲಿಸ್ತಾನದೊಳ[illegible] ಯೆರುಸಲೆಮ ಪಟ್ಟಣದ ಖಲೀಫ ಉಮರರ ಗೋ[illegible]ಯ ಪ್ರಾಕಾರದಲ್ಲಾಗುವದು. ಉಮರರು ಆಸೇ ಖ[illegible]ಫರು. ಅವರ ಕಾಲದಲ್ಲಿ ಇಸ್ಲಾಮ ಧರ್ಮ ಸಾಮ್ರಾಜ್ಯವು ಎಲ್ಲೆಲ್ಲಿಯೂ ಹರಡಿಕೊಂಡಿತ್ತು. ಮಹಾ[illegible] ಇವರ ಕಾರಕೀರ್ದಿಯನ್ನು ರಾಮರಾಜ್ಯಕ್ಕೆ [illegible]ದ್ದಾರೆ. ಇಲ್ಲಿಯೇ ತಮ್ಮ ದಫನ ಆಗ[illegible]ದು ಮೌಲಾನಾರವ[illegible]

ನರ ಧರ್ಮ ಭಾವನೆಗೆ [illegible] ಧರ್ಮ ಭಕ್ತಿಯೂ ವ್ಯಕ್ತವಾಗುತ್ತಿದೆ. ಇಂಥ ಭಾವನಾಮಯ ದೇಶಸೇವಕ ಪುರುಷನು ಇಕಟಿನ ಸಂದರ್ಭದಲ್ಲಿ ಕಾಲಾಧೀನನಾಗಿದ್ದಾನೆ. ಮೌ| ಮಹಮ್ಮದ ಅಲಿಯವರ ಹೆಂಡರು ಮಕ್ಕಳೊಡನೆ ಸಹತಾಪವನ್ನು ವ್ಯಕ್ತಪಡಿಸಿ, ಅವರಿಗೆ ಚಿರಶಾಂತಿ ದೊರೆಯಲೆಂದು ಪ್ರಾರ್ಥಿಸಿ ಈ ಮೃತ್ಯುಲೇಖವನ್ನು ಮುಗಿಸುತ್ತೇವೆ

ಸತ್ಯಾಗ್ರಹದ ವಾರ್ತೆ.

[ಜನೇ ೩ನಿನಿಂದ ಮುಂದರಿಸಿದ್ದು]

ಕೀರ್ತಿ ಬಂಗಾಲ, ಮೆಜಿಸ್ಟ್ರೇಟರು ಹೊಸ ಪುರಾವೆಯನ್ನು ಕೇಳಿದ್ದು, 'ಕಾಂಗ್ರೆಸ ಬುಲೆಟಿನ್' ಪತ್ರಿಕೆಯೊಳಗಿನ ನಿರುಪದ್ರವಿ ಲೇಖಾಂಶವನ್ನು ಪ್ರಕಟಿಸಿದ್ದರಿಂದ ಯುದ್ಧಮಂಡಳಕ್ಕೆ ಸಹಾಯವಾಗುತ್ತದಾಗಿ ಅಭಿಪ್ರಾಯಪಟ್ಟು, ೩ ತಿಂಗಳ ಶಿಕ್ಷೆ, ರೂ ೨೦೦ ದಂಡ ವಿಧಿಸಿದರು. ಹ್ಯಾಕೋರ್ಟಿನಲ್ಲಿ ಅಪೀಲು ದಾಖಲಾಗಿ ಜಾಮೀನಿನ ಮೇಲೆ ಪತ್ರಿಕಾಲೇಖಕರು ಮಾರನೇ ದಿನವೇ ಬಿಡುಗಡೆ ಹೊಂದಿದರು.

ಗುಜರಾಥ ಬಡಳದ ಕಾರ್ಯಕ್ರಮಗಳು [illegible] ನಡೆದಿವೆ. ಪರದೇಶೀ ಜವಳಿಯ ಮೇಲೆ ಪಿಕೆಟಿಂಗ ಕಾವಲು ಅದನ್ನವರು ಎಷ್ಟಕ್ಕೂ ಬಿಡುವದಿಲ್ಲ. ಮುಂಬಯಿ ಜರಾ ಮಾರ್ಕೆಟಿನಿಂದ ಹೊರಬೀಳುವ ಪರದೇಶೀ ಜವಳಿ ಗಂಟು ಹೇರಿದ ಮೋಟರ ಲೋರಿಯ ಮುಂದೆ ೧೬ ಮಂದಿ ಸ್ವಯಂಸೇವಕರು ಅಡ್ಡಮಲಗಿದ ಬಗ್ಗೆ ಇಬ್ಬರು ಸ್ವಯಂಸೇವಕರಿಗೆ ೬-೬ ತಿಂಗಳ ಶಿಕ್ಷೆಯಾಗಿದೆ. ಪೋಲೀಸರು ತಮಗೆ ಹೊಡೆದು ರಕ್ತ ತೆಗೆದರಾಗಿ ಸ್ವಯಂಸೇವಕರು ಮೆಜಿಸ್ಟ್ರೇಟರಿಗೆ ತಿಳಿಸಿದರು, ಆ ಕಡೆ ಮೆಜಿಸ್ಟ್ರೇಟರು ಲಕ್ಷ್ಯಗೊಡಲಿಲ್ಲ. ಬಾಬುಗೇನುವಿನ ಮರಣದ ಬಗ್ಗೆ ಸರಕಾರ ತರ್ಫೆ ನಡೆದ ಉತ್ತರ ಚೌಕಶಿಯ ಕೆಲಸ ಗುರುವಾರ ಮುಗಿಯಿತು. ಜ್ಯೂರಿ ೧೧ ಮಂದಿ ಪಂಚರಿದ್ದರು. ಒಂಬತ್ತು ಜನರು ಅದು ಅಪಘಾತವೆಂದು ಅಭಿಪ್ರಾಯಪಟ್ಟರು, ಇಬ್ಬರು ಅಭಿಪ್ರಾಯ ಕೊಡಲಿಲ್ಲ; ಉಳಿದವರೊಬ್ಬರ, ಡ್ರೈವ್ಹರನ ಹಾಗು ಅವರ ಬಳಿ ಕುಳಿತ ಇನ್ನೊಬ್ಬರ ದುರ್ಲಕ್ಷ್ಯದಿಂದ ಬಾಬು ಗೇನುವಿನ ಪ್ರಾಣಹಾನಿಯಾಯಿತೆಂದು ಅಭಿಪ್ರಾಯಪಟ್ಟರು. ವಿಚಾರ ಮಾಡುತ್ತಿದ್ದ ಕೊರೋನರ ನ್ಯಾಯಮೂರ್ತಿಗಳು ಅಪಘಾತವೆಂದು ಅಭಿಪ್ರಾಯಪಟ್ಟರು. ಅಂತೂ ಸರಕಾರದ ಪಟ್ಟಿಗೆ ಈ ಪ್ರಕರಣದ ನಿಕಾಲೆಯಾಯಿತು. ಒಂದು ಸಂಗತಿ ನಮೂದಿಸತಕ್ಕದ್ದಿದೆ. 'ಫ್ರೀ ಪ್ರೆಸ್ ಜರ್ನಲ್' ಪತ್ರಿಕೆಯ ಖಟ್ಲೆಯಲ್ಲಿ ಗುಪ್ತ ಪೋಲೀಸ ಖಾತೆಯ ವಿ| ಕೋಠಾರಿಯವರ ಕಡೆಯಿಂದ 'ಕಾಂಗ್ರೆಸ ಬುಲೆಟಿನ್' ಪತ್ರಿಕೆ ಹಾಜರಪಡಿಸಿಕೊಳ್ಳಲಾಯಿತು. ಅದು ಎಲ್ಲಿ ಅಚ್ಚಾಗುತ್ತಿದೆ, ಯಾರು ಬರೆಯುತ್ತಾರೆ; ಎಂಬ ಸಂಗತಿ ತಮಗೆ ಗೊತ್ತಿಲ್ಲವಾಗಿ ಅವರು ನುಡಿದರು. ನಿತ್ಯವೂ ಅದು ಪ್ರಕಟ ಹೊಂದುತ್ತಿದೆ; ದಿನಾ ೨೫ ಸಾವಿರ ಪ್ರತಿಗಳು ಖರ್ಚಾಗುತ್ತಿವೆ, ಎಲ್ಲ ಕಾರಭಾರ ಗುಪ್ತವಾಗಿ ನಡೆದಿದೆ, ಹೀಗೆ ಮೆಜಿಸ್ಟ್ರೇಟರು ರಾ| ಕೋಠಾರಿಯವರ ಸಾಕ್ಷಿಯ ಮೇಲಿಂದ ಅಭಿಪ್ರಾಯ ಬರೆದಿದ್ದಾರೆ.

[illegible] ವಿಲೆಪಾರ್ಲೆ ಮೊದಲಾದ ಕಡೆಗಳಲ್ಲಿ ಸಾ [illegible] ನಡೆದಿವೆ [illegible] ಳಾದ ವಿ ಪ್ರಿ. ಜೋಂದಳೆಯವರ ಖಟ್ಲೆಯ ವಿಚಾರ ನಡೆದಾಗ ಪ್ರಾಂತ್ರೀಯ ಮೆಜಿಸ್ಟ್ರೇಟರ ಕಡೆ, ಪೋಲೀಸರು ತಮಗೆ ಹೊಡೆದರು, ಬಡಿದರು ರಾತ್ರಿ ಊಟಕ್ಕೆ ತಕ್ಕ ಆಹಾರ ಕೊಡಲಿಲ್ಲ, ಆ ಘಂಟೆಗೆ ಕೊಟ್ಟ ಆಹಾರ ಮಾಂಸಮಿಶ್ರಿತವಾಗಿತ್ತು, ಬ್ರಾಹ್ಮಣನಿದ್ದದರಿಂದ ತಾನದನ್ನು ಕೊಳ್ಳಲಿಲ್ಲ, ಹೀಗೆ ಅವರು ದೂರಿಕೊಂಡರು. ಕೂಡಲೆ ಯಾಕೆ ತಕ್ರಾರು ಮಾಡಲಿಲ್ಲವೆಂದು ಕೇಳಲು, ಸತ್ಯಾಗ್ರಹಿಯಾದ್ದರಿಂದ ದೂರಿಕೊಳ್ಳಲಿಲ್ಲವಾಗಿ ಅವರು ಮೆಜಿಸ್ಟ್ರೇಟರ ಬಳಿ ಹೇಳಿದರು. ಅವರ ಪ್ರಾಯ ೧೭ ವರ್ಷ.

ಕರ್ನಾಟಕದೊಳಗೆ.

ಗದಗಿನಲ್ಲಿ ಸ್ವದೇಶೀ ಪ್ರಚಾರದ ಚಳವಳಿ ಭರದಿಂದ ನಡೆದಿದೆ. ಸ್ವದೇಶೀ ಮಂಡಳದ ಸ್ಥಾಪನೆಯಾಗಿದೆ. ಆ ಮಂಡಳದವರು ಅಲ್ಲಲ್ಲಿ ಹೋಗಿ ನೇಕಾರರಿಗೆ ಸ್ವದೇಶೀ ನೂಲನ್ನೇ ಉಪಯೋಗಿಸಲು ಮನವೊಲಿಸಿ ಪ್ರತಿಜ್ಞಾಪತ್ರಗಳನ್ನು ಬರೆಸಿಕೊಳ್ಳುತ್ತಿದ್ದಾರೆ. ಗದಗಿನ ಉಲ್ಲಾಳ ಪತ್ರಿ ಮಕ್ಕಳು ಎಂಬ ಜವಳಿ ಅಂಗಡಿಯ ಮೇಲೆ ಪಿಕೆಟಿಂಗ ನಡೆದಿದೆ. ಮಾಮಲೇದಾರರು ಪರದೇಶೀ ಅರಿವೆ ಕೊಳ್ಳ ಹೋಗಿದ್ದರು. ಸ್ವಯಂಸೇವಕರು ಪರದೇಶೀ ಅರಿವೆ ಕೊಳ್ಳಬಾರದಾಗಿ ಅವರಿಗೆ ಬಿನ್ನವಿಸಿಕೊಂಡರು. ಮಾಮಲೇದಾರರು ಕೇಳಲಿಲ್ಲ. ಸ್ವಯಂಸೇವಕರ ಹೆಸರು ಬರೆಕೊಂಡು ಹೋಗಿರುತ್ತಾರೆ. ಬೆಳಗಾವಿ ಜಿಲ್ಲೆಯ ಕಿತ್ತೂರಿನಲ್ಲಿ ಸೆರೆಹಿಡಿಯುವ ಸುಗ್ಗಿ ನಡೆದಿದೆ. ಹಿಂದೇಗಡಿದು [illegible] ಕದ್ದುಕೊಂಡು ಹೋದ ಆರೋಪದ ಮೇಲೆ ರಾ| ಗುರುಸಿದ್ಧಯ್ಯ ಹಿರೇಮಠಪುರದವರಿಗೆ ಸೆರೆಹಿಡಿದಿದ್ದಾರೆ. ಶ್ರೀ| ಶಾಂತಿನಾಥ ಇಂಗಳೇರವರು ಪೆರೋಲ ಮೇಲೆ ತಿರುಗಿ ಬಂದರು. ಅದಕ್ಕಾಗಿ ಜನರು ದೊಡ್ಡ ವಾದ್ಯದಿಂದ ಅವರಿಗೆ ಸ್ವಾಗತ ಮಾಡಿದರು. ಡಂಗುರ ವಾದ್ಯ ಬಾರಿಸಿದ ಬಗ್ಗೆ ಪೋಲೀಸ ಆಕ್ಟಿನಂತೆ ಖಟ್ಲೆಯಾಗಿ ೧೦ ರೂಪಾಯಿ ದಂಡ. ಬೈಲಹೊಂಗಲದ ಮುಕುಂದ ಗೌಡ [illegible] ಸಾಹೇಬರು ನಮಾಜಕ್ಕಾಗಿ ಮಸೀದಿಗೆ ಹೊರಟಿದ್ದರು. ಪೋಲೀಸರು ಚಿಟ್ಟಿಯ ವಂಚನೆಯಂತೆ ಅವರಿಗೆ ಕರೆದರು. ನಮಾಜಕ್ಕೆ ಹೊರಟಿದ್ದರಿಂದ ಬರಲಾರೆನೆಂದು ಹೇಳಿದ್ದಕ್ಕೆ, ವಂಚಿಸಿರಾಗಲು ಧಿಕ್ಕರಿಸಿದ ಆರೋಪದ ಮೇಲೆ ಸಮನ್ಸುಗಳು ಹೊರಟಿವೆ. ಬೈಲಹೊಂಗಲ-ಮೇಗೇಹಳ್ಳಿ ಕೆರೆಬಂಗಡಿಗಳಿಗಾಗಿ ಹಿಂದಿ [illegible] ದ ಪಡಾಲಿ [illegible] ಕುದುರೆ ದಾಯವಾಗಿದೆ. ಬೆಂಡಿಗೇರಿ ಸೀಮೆಯಲ್ಲಿ ಶಿಂದೀ ಪಡಾಲಿಗಳನ್ನು [illegible] ಕಡಿದು ಜನರು ಜನರು ಮಾಡಿದರೆಂದು ಗೊತ್ತಿಲ್ಲವಾಗಿ [illegible] ಹುಡಿಯ ಮಾಮೂಲ [illegible] ಹಿರೇಬಾಗೇವಾಡಿಯ ಪೋಲೀಸ ಪಟೇಲರು ರಾಜೀನಾಮೆ ಕೊಟ್ಟರು. ಧಾರವಾಡದಲ್ಲಿ ಶ್ರೀ| ಮ ಸವೀಡು ಕೃಷ್ಣರಾಯರು ಮುಖ ಬಂದಿಯ ಹುಕುಮು ಅವಮಾನ್ಯ ಮಾಡಿ ಭಾಷಣ ಮಾಡಿದ ಬಗ್ಗೆ ಅವರ ಮೇಲೆ ಸಮನ್ಸುಗಳು ಹೊರಟಿವೆ. ಮುಳಗುಂದದ ಶ್ರೀಮತಿ ಇಂದಿರಾಬಾಯಿ ಹರಪನಹಳ್ಳಿಯವರು ಕರನಿರಾಕರಣೆಯ ಬೋಧ ಮಾಡುತ್ತಿದ್ದಾರೆ. ಅವರಿಗೆ ಭೂಮಿಯುಂಟು ತಾವು ಕರನಿರಾಕರಣ ಮಾಡುವೆವಾಗಿ ಹೇಳಿ ಅವರು ಮುಂದಾಗಿದ್ದಾರೆ. ಹುಬ್ಬಳ್ಳಿ ತಾಲೂಕಿನ ಸರ್ವಾಧಿಕಾರಿಗಳಾದ ಶ್ರೀ ಪೋದ್ದಾರರವರಿಗೆ ಕಾಂಗ್ರೆಸ [illegible]

[illegible] ದಿದ್ದಾರೆ. ಕನ್ನಾನೂರ ಜೈಲಿನಲ್ಲಿದ್ದ ಕೆಂಡದ [illegible] ಗಳ ಒಳಗೊಳಗಿನ ಸತ್ಯಾಗ್ರಹಿಗಳು ಆಹಾರ ಸಿಗುವದಿಲ್ಲವಾಗಿ ಉಪವಾಸ ಮಾಡಿದ್ದಾರೆ. [illegible] ರೊಳಗೆ ಮುಂಬಯಿಯ ಸತ್ಯಾಗ್ರಹಿಗಳೂ [illegible] ಅಂತೂ ೧೨ ಸತ್ಯಾಗ್ರಹಿಗಳು ಉಪವಾಸ ಕೈಕೊಂಡಿದ್ದಾರೆ.

ಗದಗಿನಲ್ಲಿ ಡಾ| ಹುಯಿಲಗೋಳರವರ [illegible] ಸ್ಟ್ರೇಟರು ಕೊಟ್ಟ ಹುಕುಮನ್ನು ಮುರಿದ ಬಗ್ಗೆ [illegible] ಗಳ ಶಿಕ್ಷೆ, ರೂ ೩೦೦ ದಂಡ, ದಂಡ ಕೊಡದಿದ್ದರೆ [illegible] ೩ ವಾರಗಳ ಶಿಕ್ಷೆ ವಿಧಿಸಲಾಗಿತ್ತು. ಡಾ| [illegible] ಲಗೋಳರು ೩|| ತಿಂಗಳು ಶಿಕ್ಷೆಯನ್ನನುಭವಿಸಿ [illegible] ಸಿಬಂದಿ ಪೋಲೀಸರು ೩೦೦ ರೂಪಾಯಿ [illegible] ವಸೂಲಿಗಾಗಿ ಅವರಿಗೆ ವಾರಂಟ ತಂದರು [illegible] ರು ದೇಶಾದ ಸಾಮಾನು ಜಪ್ತ ಮಾಡಿಕೊಳ್ಳ [illegible] ಬಹುದಾಗಿ ಹೇಳಿದರು. ಆದರೆ, ಜಪ್ತಿಗೆ ಯೋಗ್ಯ [illegible] ದ ಚೀಜು ಸಿಗಲಿಲ್ಲ

ಇತರ ಕಡೆಗಳಲ್ಲಿ

ಜಳಗಾಂವ ಮ್ಯುನಿಸಿಪಾಲಿಟಿಗೂ, ಸರಕಾರಕ್ಕೂ ಹಿಂದು ವಾದ ನಡೆದಿದೆ. ಗಾಂಧಿ ಉದ್ಯಾನ [illegible] ಸ್ಥಳ ಸರಕಾರವು ಮ್ಯುನಿಸಿಪಾಲಿಟಿಗೆ ಕೊಟ್ಟಿದೆ, [illegible] ರೆ, ಉದ್ಯಾನದ ಒಡೆತನ ಮ್ಯುನಿಸಿಪಾಲಿಟಿಯದ್ದು. ಅದರ ಮೇಲೆ ಮ್ಯುನಿಸಿಪಾಲಿಟಿಯವರು ರಾಷ್ಟ್ರಧ್ವಜ ಹಚ್ಚಿದರು. ಅದನ್ನು ತೆಗೆಯಬೇಕಾಗಿ ಕಮಿಶನರರ ಹುಕುಮು. ತೆಗೆಯದಿದ್ದರೆ, ಉದ್ಯಾನವು ಸರಕಾರ ಜಪ್ತಿಗುವದಾಗಿಯೂ ಮೇಲಷ್ಟೆ. ರಾಷ್ಟ್ರಧ್ವಜ ಹಚ್ಚುವದು ನಾಗರಿಕರ ಹಕ್ಕು, ಎಂಬದಾಗಿ ಮ್ಯುನಿಸಿಪಾಲಿಟಿಯವರು ಸಾಧಿಸಿದರು. ಸರಕಾರವು ಪ್ರತಿಬಂಧಕ ಹುಕುಮನ್ನು ಹೊರಡಿಸಿ, ಅಲ್ಲಿ ಧ್ವಜ ಹಚ್ಚಬಾರದಾಗಿ ವಿಧಿಸಿದರು. ಅದು ಅಪಮಾನ್ಯವಾಯಿತು. ಜನರು ಧ್ವಜ ಕೊಂಡು ಈ ಉದ್ಯಾನವನ್ನು ಸೇರುತ್ತಲಿದ್ದಾರೆ. ಪೋಲೀಸರು ಕೆಲವರಿಗೆ ಸೆರೆಹಿಡಿದು ಸಂಜೆಯ ತನಕ ಇಟ್ಟುಕೊಂಡು ಬಿಡುತ್ತಾರೆ. ಮ್ಯಾಜಿಸ್ಟ್ರೇಟರ ಮೇಲೆ ಸಪ್ತಶತಕ ದಾವೀನ ಪ್ರಕರಣ ನಡೆದು ಅವರಿಗೆ ೩-೩ ತಿಂಗಳ ಶಿಕ್ಷೆಯಾಯಿತು. ಮ್ಯುನಿಸಿಪಾಲಿಟಿಯ ಉದ್ಯಾನದ ಹೆಸರು 'ಗಾಂಧಿ ಉದ್ಯಾನ'ವೆಂದು. ಈ ಉದ್ಯಾನದಲ್ಲಿ ಸಭೆ ಸೇರಿದರೆ, ರಹದಾರಿಗೆ ತೊಂದರೆಯಾಗುತ್ತದಾಗಿ ಪೋಲೀಸ ಆಕ್ಟಿನನ್ವಯ ಹುಕುಮು. ಅದನ್ನು ಮುರಿದ ಬಗ್ಗೆ ಇಬ್ಬರ ಮೇಲೆ ಖಟ್ಲೆ. ಅವರು ಹುಕುಮು ಮುರಿದವರಲ್ಲ. ಪೋಲೀಸ ಹುಕುಮಿನಂತೆ ಜನರಿಗೆ ಚದರಹೇಳಲು ಅವರು ಎದ್ದುನಿಂತಿದ್ದರು, ಅಷ್ಟರಲ್ಲಿ ಅವರಿಗೆ ಸೆರೆಹಿಡಿದು ಖಟ್ಲೆ. ಬಂದಿವಾಸದಲ್ಲಿದ್ದಾಗ, ಹೊಟ್ಟೆತುಂಬ ಆಹಾರ ಕೊಡಲ್ಪಡದಕ್ಕಾಗಿ ಅವರಿಗೆ ದಿವಾಣಿ [illegible] ಭಕ್ತಿ ಕೊಡಲಾಯಿತು. ಕರಾಚಿಯಲ್ಲಿ ಉಪ್ಪಿನ ಸತ್ಯಾಗ್ರಹ ಭರದಿಂದ ನಡೆದಿದೆ. ಉಪ್ಪಿನ ಕಾಯಿದೆಭಂಗ ಮಾಡಲು ಪ್ರೇರೇಪಿಸಿದ ಬಗ್ಗೆ ಅಲ್ಲಿಯ ಒಬ್ಬ ಮ್ಯುನಿಸಿಪಾಲಿಟಿಯ ಸಭಾಸದರಿಗೆ ೬ ತಿಂಗಳ ಶಿಕ್ಷೆ ಕೊಟ್ಟು [illegible] ವರ್ಗದಲ್ಲಿಟ್ಟಿದ್ದಾರೆ. ಶಿಕಾರಪುರ ಜೈಲಿನಲ್ಲಿದ್ದ ರಾಜಕೀಯ ಕೈದಿಗಳೆಲ್ಲ [illegible] ಕೊಟ್ಟ ಬಗ್ಗೆ ೨ ದಿವಸಗಳ ತನಕ ಉಪವಾಸ ಕೈಕೊಂಡರು. ಊರವರು ಅಧಿಕಾರಿಗಳ ಬಳಿ ದೂರಿಕೊಂಡರು. ನಿರ್ಭೀಕವಾಯಿತು. ಜನರೂ ಉಪವಾಸ ಮಾಡಿ ಶೋಕ [illegible] ಮೆರವಣಿಗೆ ಹೊರಡಿಸಿದರು. ಜೊತೆಯ [illegible]

ಅಲ್ಲಿಲ್ಲಿ ಇಷ್ಟಿಷ್ಟು.

ಹೊಸ ವರ್ಷಾರಂಭದ ಉತ್ಸವವು. ಕಾಂಗ್ರೆಸ ಕಮೀಟಿ [illegible] ಸಂಘದವರಿಗೆ [illegible] ಒಂದು ವರ್ಷದ ಶಿಕ್ಷೆಯಾಯಿತು. [illegible] ಜೈಲಿನಲ್ಲಿಟ್ಟು ಅಲ್ಲಿ ಇನ್ನೇ ತಂಗಡಿಯು [illegible] ನೋಡಲಿಲ್ಲ. ಅವರು ಪ್ರಸಿದ್ಧರಾದರು; [illegible] ಹಿಂಡಲಗೆ [illegible] ಅವರಿಗೆ [illegible] ತಾರೀಖಿಗೆ [illegible] ಇದ್ದರು. [illegible]

* * *

[illegible] ತೋರಿಯು [illegible] ಆದರಿಂದ ಅವರಿಗೆ [illegible] ವದಿಲ್ಲ, [illegible]

* * *

[illegible] ಕೋರ್ಟಿನಲ್ಲಿ [illegible] ಒಂದು [illegible] ಜನರಿಗೆ [illegible] ಸ್ಥಳವಿತ್ತು; ಅವರೊಳಗೆ [illegible] ಜನರಿಗೆ [illegible] ರಾಮಚಂದ್ರ [illegible] ಎಂಬ ಪ್ರಮೋಶಕರು [illegible] ಎಳೆದರು, [illegible] ಜನರಿಗೆ [illegible] ಸಿಕ್ಕುವ [illegible] ರಾ। ಮುಸ್ತಫಿಯವರು [illegible] ಮೇಲೆ ಹೋಗಿ [illegible] ಹೀಗೆ [illegible] ಬಗ್ಗೆ [illegible] ಮೆಜಿಸ್ಟ್ರೇಟರ [illegible] ಮುಸ್ತಫಿಯವರಿಗೆ ೬ ತಿಂಗಳ ಶಿಕ್ಷೆ ವಿಧಿಸಲ್ಪಟ್ಟಿದೆ. ಸೆಶನ್ಸ ಜಜ್ಜರಲ್ಲಿ ಅಪೀಲಾಯಿತು. ಸೆಶನ್ಸ ಜಜ್ಜರು ರಾ। ಮುಸ್ತಫಿಯವರಿಗೆ [illegible] ಮಾಡುವಾಗ ನುಡಿದದ್ದೇನಂದರೆ.— [illegible] [illegible] ಕೊಡುವ [illegible] ಮೇಲೆ [illegible] ಕೊಡುತ್ತಾರೆ. ಹೀಗೆ [illegible] ಜನರಿಗೆ [illegible] ರಕ್ಷಣ. ಇದರ ಮೇಲೆ ಸರಕಾರದವ್ರು [illegible] ಕೋರ್ಟಿಗೆ ಅಪೀಲು ಮಾಡಿತು. ರಾ। ಮುಸ್ತಫಿಯವರ ನಡತೆಯು ಅಯೋಗ್ಯವಾದದ್ದಲ್ಲ, ಆದರೆ, [illegible] ಕಾಯಿದೆಯಂತೆ ಅಪರಾಧವಾಗುತ್ತದೆ; ಹೀಗೆ ಬರೆದು, ಈ ಹಿಂದೆ ಅನುಭವಿಸಿದ ೧ ದಿನದ ಶಿಕ್ಷೆ ಈ ಅಪರಾಧಕ್ಕೆ ಸಾಕೆಂದು, ಅಪೀಲನ್ನು ತಿರಸ್ಕರಿಸಿದ್ದಾರೆ.

* * *

[illegible] ಪ್ರದೇಶದಲ್ಲಿ ದೊಂಬಿ ಇದಿನ್ನೂ ಸಂಪೂರ್ಣವಾಗಿ ಶಾಂತವಾಗಿಲ್ಲ. ಸರಕಾರದವ್ರು ಸೈನಿಕರನ್ನು [illegible] ದೊಂಬಿಗಾರರಿಗೆ [illegible] ದೊಂಬಿಗಾರರ [illegible] ಇನ್ನೂ [illegible] ದೊಂಬಿಗಾರರ [illegible] ದೊಂಬಿಗಾರ ಪ್ರಮುಖನು ಕೊಲ್ಲಲ್ಪಟ್ಟನಾಗಿ ಒಂದು ವಾರ್ತೆ ಹಬ್ಬಿತ್ತು; ಅದು ಸುಳ್ಳೆಂದು ಪ್ರಕಟವಾದ [illegible] ದೊಂಬಿಗಾರರು [illegible] ಈ ಸರಕಾರವನ್ನು [illegible] ರಾಜ್ಯ ಸ್ಥಾಪಿಸುವದಾಗಿದೆ. ದೊಂಬಿಗಾರ ಪ್ರಮುಖರು [illegible] ಜಾಹೀರನಾಮೆಯೊಂದು ಪ್ರಕಟಗೊಂಡಿದೆ; [illegible] ಅಪ್ಪರ್ ಜಿಲ್ಲೆಯ [illegible] ಗೆಲನ್ ರಾಜಾ ಎಂಬ [illegible] ಬರೆದಿದ್ದಾರೆ [illegible] ಹಿತಸಾಧುವದಕ್ಕಾಗಿ ಈ ಸಂಗ್ರಾಮ [illegible] ಪ್ರದೇಶದಲ್ಲಿರುವ "ಅಂಗ್ಲೀಕ" [illegible] ಸೈನಿಗಳು, [illegible] ಹಿಂದೀಯರೂ ಕಾಟೆನ್, [illegible] ಸೈನಿಗಳಲ್ಲಿ ಇಂಗಲೀಶರ [illegible] ಕರ್ತ್ರವನ್ನು [illegible] ಸೇರಿಕೊಂಡರೆ, ಅವರಿಗೆ ಕೊಲ್ಲುವದಿಲ್ಲ, [illegible] ಸ್ಪಷ್ಟವಾಗಿ [illegible] ಗ್ರಾಮದವರು [illegible] ಗ್ರಾಮಗಳಿಗೆ [illegible] ಹೀಗೆ ಬರೆದದ ಇವರ [illegible] ಎಲ್ಲ ಗ್ರಾಮದವರು ದೊಂಬಿಗಾರರ ಸೈನಿಕರ [illegible] ಗ್ರಾಮಗಳ ಮೇಲೆ [illegible] ಸೇನಾಪತಿಗಳಾಗಿ [illegible] ದೊಂಬಿಗಾರರ [illegible] ಪ್ರಯತ್ನ ಮಾಡುತ್ತಿದೆ

* * *

ಬೆಳಗಾವಿಯಲ್ಲಿ [illegible] ತಲವಿ [illegible] ಜನರು [illegible] ಬೆಳಗಾವಿಯವರ [illegible] ಸಂಬಂಧದವರು [illegible] ಕೋರ್ಟ [illegible] ಗಳನ್ನು [illegible] "ಈ ಬೆಳ್ಳಗಿನ ಟೊಪ್ಪಿಗೆಗಳ [illegible] ಉಪದ್ರವಾಗುವ [illegible]?" ಎಂದು ಮೆಜಿಸ್ಟ್ರೇಟರು ಬೆಳವಿಯವರಿಗೆ ಕೇಳಲು [illegible] ದರು. 'ಹುಕುಮು [illegible] ನ್ನು ಕೇಳಿ [illegible] ಹುಕುಮು [illegible] ತಮ್ಮ [illegible] ಜನರನ್ನು [illegible] ಕೇಳುವದಿಲ್ಲ, [illegible] ಗಳನ್ನು [illegible] ಮಾಡಿಲ್ಲ;" ಹೀಗೆಂದರು [illegible] ಹೇಳಿದರು [illegible] ತೊಂದರೆಯಾಗುತ್ತದೆಂಬ [illegible] ಕೋರ್ಟ [illegible] ಅದನ್ನು ಪ್ರಕಟಿಸಬಾರದಿಲ್ಲ. [illegible] ನನಗೆ [illegible] ಹೇಳಲಿಲ್ಲ," ಹೀಗೆ ಮೆಜಿಸ್ಟ್ರೇಟರು ನುಡಿದರು " ಬೆಳಗಾವಿಯವರ ಹಿತಕ್ಕಾಗಿ ತಾವ್ರು ಈ ಹುಕುಮು ಹೊರಡಿಸಿ [illegible]?" ಎಂಬ [illegible] ಕೇಳಲು, ' [illegible] ಹಿಂದುಸ್ಥಾನದ ದೃಷ್ಟಿಯಿಂದ, [illegible] ಪ್ರಭಾತ ಫೇರಿಗೆ [illegible]; ನನ್ನ ಹುಕುಮುಗಳನ್ನು [illegible] ಹಿಂತೆಗೆದುಕೊಳ್ಳುವದಿಲ್ಲ; [illegible] ಸಿಟ್ಟು ಪ್ರಕಟಣ ಮಾಡಬಹುದು;" ಹೀಗೆ ಮೆಜಿಸ್ಟ್ರೇಟರು [illegible] "ಸಿಟಿ [illegible] ರಾಜ್ಯಪದ್ಧತಿಗೆ ಇಂಥ ಕ್ರಮ ಶೋಭಿಸುತ್ತದಾಗಿ" ರಾ। ಬೆಳವಿಯವರು ಉದ್ಗರಿಸಿದರು. ' ಹುಕುಮು ಅನ್ಯಾಯದ್ದಿದ್ದಾಗ್ಯೂ, ಅದನ್ನು ಕಾಯಿದೆಯಂತೆ ತಿದ್ದುಪಡಿ ಮಾಡಿಕೊಳ್ಳದೆ ಅದನ್ನು ಮುರಿದದ್ದು ತಪ್ಪು." ಎಂಬದಾಗಿ ಮೆಜಿಸ್ಟ್ರೇಟರು ಸಿಟ್ಟು [illegible] ಬೆಳಗಾವಿಯ ಡಿ। ಮೆಜಿಸ್ಟ್ರೇಟರು ಮಿ। [illegible]; ನಮ್ಮ ಜಿಲ್ಲೆಯಲ್ಲಿ ಕಲೆಕ್ಟರರಿದ್ದವರು.

* * *

ಪಂಡಿತ ಮೋತಿಲಾಲರು ಕಲಕತ್ತೆಯಿಂದ ಪ್ರಯಾಗಕ್ಕೆ ಬಂದಿದ್ದಾರೆ. ಅವರ ಪ್ರಕೃತಿ ಇನ್ನೂ ಚೆನ್ನಾಗಿ ಸುಧಾರಿಸಿಲ್ಲ; ಹಸಿವಾಗುತ್ತದೆ; ಜೀರ್ಣಶಕ್ತಿ ಬೆಳವಿ [illegible] ಚೈತನ್ಯ ಪ್ರಾಪ್ತಿಯಾಗಿದೆ. ಕಲಕತ್ತೆಯ ಕವಿರಾಜ [illegible] ದಾಸ [illegible] ಪಂಡಿತ ಮೋತಿಲಾಲರ ಉಪಚಾರ ನಡಿಸಿದರು, ಆಯುರ್ವೇದ ಪದ್ಧತಿಯಂತೆ ಉಪಚಾರವಾಯಿತು. ಇನ್ನು ೧—೨ ತಿಂಗಳಲ್ಲಿ ಅವರು ಸಂಪೂರ್ಣವಾಗಿ ಗುಣಹೊಂದುವರು. ಪಂಡಿತ ಮೋತಿಲಾಲರು ಅಶಕ್ತ ಪ್ರಕೃತಿಯವರಾದಾಗ್ಯೂ ಬಂಗಾಲದಲ್ಲಿ ಅವರು ನೆರವೇರಿಸಿದ ಒಂದು ಮಹತ್ವದ ಕೆಲಸವನ್ನು ಉಲ್ಲೇಖಿಸಲೇಬೇಕು. ಬಂಗಾಲದ ರಾಷ್ಟ್ರಸೇವಕರಲ್ಲಿ ಇಬ್ಬಾಗವಾಗಿತ್ತು; ಶ್ರೀ। ಸುಭಾಷಚಂದ್ರ ಬೋಸರವರದೊಂದು ಪಕ್ಷ, ಶ್ರೀ। ಯತೀಂದ್ರ ಮೋಹನ ಸೇನಗುಪ್ತರದೊಂದು ಪಕ್ಷ, ಹೀಗೆ ಪಕ್ಷಭೇದಗಳಾಗಿದ್ದವು. ಪಂಡಿತ ಮೋತಿಲಾಲರು ಇತ್ತಕ್ಕಿನವರೊಳಗೂ ಸಂಧಿ ಮಾಡಿ, ರಾಷ್ಟ್ರಕಾರ್ಯ ನಡಿಸಲು ಸಂಯುಕ್ತ ಮಂಡಳವನ್ನೊಂದು ನೇಮಿಸಿದ್ದಾರೆ. ಪಂಡಿತ ಮೋತಿಲಾಲರ ಮನೆಯಲ್ಲಿ ಸದಿಮನೆ ಸೇರದೆ ಉಳಿದವರಿಷ್ಟಲು, ಮೋತಿಲಾಲರ ಪತ್ನಿಯರಾದ ಸ್ವರೂಪರಾಣಿಯವರು, ಮೊಮ್ಮಗಳಾದ [illegible] ಬಂದುವಾತಿ [illegible] ಪಂಡಿತ ಜವಾಹಿರಲಾಲರ ಮಗಳು. ರಾಷ್ಟ್ರಕಾರ್ಯಕ್ಕಾಗಿ ವೃದ್ಧಾಪ್ಯದಲ್ಲಿಯೂ ಈ ತರದ ಸ್ವಾರ್ಥತ್ಯಾಗವನ್ನು ಸಂತೋಷದಿಂದ ಮಾಡಿದ್ದನ್ನು ನೋಡಿ ಪಂಡಿತ ಮೋತಿಲಾಲರಿಗೆ ಎಲ್ಲರೂ ಹರಸುತ್ತಾರೆ

* * *

[illegible] ವಿದ್ಯಾಖಾತೆಯ [illegible] ತಮ್ಮ ಖಾತೆಯ ೫ ವರ್ಷಗಳ ರಿಪೋರ್ಟನ್ನು ಸಾದರಪಡಿಸಿದ್ದಾರೆ. ಅದರೊಳಗೆ ಅವರು ಬರೆದ ಒಂದು ಅಭಿಪ್ರಾಯ ವಿಚಾರಾರ್ಹವಿದೆ. ಜಾತಿವಾರ ಮತದಾರ ಮಂಡಳಗಳನ್ನೇ [illegible] ಜಾತಿ ಪದ್ಧತಿಯ ಮೇಲೆ ಪ್ರತಿನಿಧಿಗಳನ್ನು ಆರಿಸುವ ಪರಿಪಾಟದಿಂದ ಪ್ರಾಥಮಿಕ ಶಿಕ್ಷಣದ ಆಡಳಿತದಲ್ಲಿ ಸ್ವಜಾತಿಯ ದುರಭಿಮಾನವು ಹೆಚ್ಚಿದೆ. ಇಷ್ಟು ಉಂಟಾಗಿದೆ [illegible], ಹೀಗೆ ಅವರು ಬರೆದಿದ್ದಾರೆ. ಜಾತಿಗೊಂದು ಮತದಾರ ಮಂಡಳವಿರಬೇಕೆಂಬ ಸಿದ್ಧಾಂತವಾದಿಗಳು ಇದನ್ನು ಪರಾಂಬರಿಸಬೇಕು, ಅಧಿಕಾರಿಗಳು ಆಲೋಚಿಸಬೇಕು.

* * *

ಬೆಳಗಾವಿ-ವಿಜಾಪೂರ ಜಿಲ್ಲೆಗಳಲ್ಲಿ [illegible] ಮಳೆ ಬೀಳದೆ ಬೆಳೆಯಿಲ್ಲ. ಆದರಿಂದ ಅಲ್ಲಿಯವರು ಸರಕಾರಕ್ಕೆ ತೀರ್ವೆ ಸೂಟಬಿಡುವದಕ್ಕಾಗಿ ಅರ್ಜಿ ಮಾಡಿಕೊಳ್ಳಹತ್ತಿದ್ದಾರೆ. ಹುಟ್ಟಿದ ಬೆಳೆಗೆ ದರವಿಲ್ಲ. ಅಂತು ಕಠಿಣ ಸ್ಥಿತಿ.

* * *

ಶ್ರೀ। ವಿಠ್ಠಲಭಾಯಿ ಪಟೇಲರವರು ಬಹಳ ಸೊರಗಿದ್ದಾರೆ. ಅವರ ತೂಕ ೧೯ ರತ್ತಲು ಕಡಿಮೆಯಾಗಿದೆ. 'ಮುಂಚೆ ನಾನು ಪ್ರಕೃತಿ ನೋಡಿಕೊಳ್ಳುತ್ತೇನೆ; ಆ ಮೇಲೆ ನಿಯೋಜಿತ ಕಾರ್ಯ ಕೈಕೊಳ್ಳುವೆನು. ಆತ್ಮಬಲದಿಂದ ಸ್ವಾತಂತ್ರ್ಯ ಪ್ರಾಪ್ತಿಯಾಗುತ್ತದೆಂದು ನನಗೀಗ ಮನವರಿಕೆಯಾಗಿದೆ. ಕಳೆದ ೮ ತಿಂಗಳಲ್ಲಿ ರಾಷ್ಟ್ರವು ಅಪಾರವಾದ ಸ್ವಾರ್ಥತ್ಯಾಗ ಮಾಡಿದೆ. ಪ್ರಕೃತಿ ನೆಟ್ಟಗಾದ ಕೂಡಲೆ ಈ ೮ ತಿಂಗಳ ಜೈಲಿನ ಅನುಭವಗಳನ್ನು ವಿವರಿಸಿ ಮುಂದಿನ ಕಾರ್ಯದ ಸ್ವರೂಪ ಹೇಳುವೆನು." ಹೀಗೆ ಬಿಡುಗಡೆ ಹೊಂದಿದೊಡನೆ ಪ್ರಕಟಣೆ ಹೊರಡಿಸಿದ್ದಾರೆ. "ಸ್ವತಂತ್ರ ಹಿಂದುಸ್ಥಾನವನ್ನು ನಾನು ಈ ಕಣ್ಣಿನಿಂದ ನೋಡುವೆ; ನನ್ನ ಪ್ರಕೃತಿಯ ಬಗ್ಗೆ ಜನರು ವ್ಯಥೆಪಡುವ ಕಾರಣವಿಲ್ಲ ಹೀಗೆ ಜನರಿಗೆ ಹೇಳಿ" ಎಂಬದಾಗಿ [illegible] ವಿದ್ಯಾಪೀಠ'ಯ ಪ್ರತಿನಿಧಿಗಳ ಬಳಿ ಶ್ರೀ। ವಿಠ್ಠಲಭಾಯಿಯವರು ಉದ್ಗರಿಸಿದರು

* * *

ಪಂಜಾಬ ಗವರ್ನರರ ಮೇಲೆ ಗುಂಡು [illegible] ಯುಗಹರಿಸಿದ [illegible] ವಿದೆ. ಗುಂಡು ಹೊಡೆದ [illegible]

ಮಾಡಿ, ಹರಿಕಿಸನನವರಿಗೆ [illegible] ಕೇಳಲು, "ಗವರ್ನರರಿಗೆ ಕೊಲ್ಲಲಿಕ್ಕೆ ನಾನು ಲಾಹೋರಿಗೆ ಬಂದೆ; ಪಿಸ್ತೂಲಿಯಿಂದ ಅಂತು ೬ ಗುಂಡು ಹೊಡೆದೆ; ೨ ಗುಂಡು ಗವ್ಹರ್ನರರ ಮೇಲೆ; ೪ ಗುಂಡು ಆತ್ಮ ಸಂರಕ್ಷಣೆಗಾಗಿ" ಎಂದನು. "ಕೊಲ್ಲಲಿಕ್ಕೆ ನಾನು ಯಾಕೆ ಬಯಸ್ತಿದ್ದೆ?" ಎಂಬ ಸಂಗತಿ ಹೇಳಬಯಸುವದಿಲ್ಲ. ಪಿಸ್ತೂಲಿಯ ಲೈಸನ್ಸನ್ನು ನಾನು ಪಡೆಯಲಿಲ್ಲ. ನಮ್ಮ ಗ್ರಾಮದೊಳಗಿನ ಒಬ್ಬ ಅಫ್ರಿದಿಯಿಂದ ಈ ಪಿಸ್ತೂಲಿಯನ್ನು ಕೊಂಡುಕೊಂಡೆ. ಮುಂದಾದಪ್ಟ್ಟೆ ಬುಧಸಿಂಗ ಫೌಜದಾರರ ಮೇಲೆ ನಾನು ಗುಂಡು ಹೊಡೆಯಲಿಲ್ಲ. ವಿಶ್ವವಿದ್ಯಾಲಯದ ಸಮಾರಂಭದ ಒಳಸೇರಲು ಯಾರಿಂದ ನಾನು ಪಡೆದೆನೆಂಬುದನ್ನು ಹೇಳುವದಿಲ್ಲ. ಆ ದಿನ ನಾನು ಎಲ್ಲಿ ಉಳಕೊಂಡೆ, ಎಂಬುದನ್ನು ಹೇಳುವದಿಲ್ಲ. ನಾನು ಉಪವಾಸ ಮಾಡುತ್ತಿದ್ದೇನೆ; ಕಾರಣ ನನ್ನ ಖಟ್ಲೆಯ ಕೆಲಸವನ್ನು ಬೇಗನೇ ಮುಗಿಸಬೇಕು. ಖಟ್ಲೆಯ ವಿಚಾರದಲ್ಲಿ ನಾನು ಸೇರುವದಿಲ್ಲ." ಹೀಗೆ ಅವರು ನುಡಿದರು. ಮೆಜಿಸ್ಟ್ರೇಟರು ಹರಿಕಿಸನ್‌ರ ಮೇಲೆ ಖೂನಿಯ ಆರೋಪ ಹೊರಿಸಿ ಸೆಶನ್ಸ ಕೋರ್ಟಿಗೆ ಖಟ್ಲೆ ವಿಚಾರಕ್ಕೆ ಕಳುಹಿದ್ದಾರೆ.

⁂

ಕೊಯಿಮುತ್ತೂರಿನಲ್ಲಿ ಸ್ವಾತಂತ್ರ್ಯ ದಿನೋತ್ಸವವಾಯಿತು. ಆ ಸಮಯಕ್ಕೆ ಶ್ರೀ ವಿದ್ಯಾರ್ಥಿಯೊಬ್ಬನವರೆಗೆ ನೋಡಿಕೊಂಡ ಡಾ. ಪಟೇಲರು ಧ್ವಜ ರಕ್ಷಿಸುವ ಬಗೆಯನ್ನು ವಿವರಿಸಿದರು. ಇಸ್ಲಾಮ ಧರ್ಮದ ಧ್ವಜವನ್ನು ರಸೂಲ ಹುಸೇನ ಪ್ರಾಣಾತ್ಮನು ರಕ್ಷಿಸಿದ ಉದಾಹರಣೆಯನ್ನು ಹೇಳಿದರು. ರಸೂಲ ಹುಸೇನನು ಇಸ್ಲಾಮ ಧರ್ಮಧ್ವಜವನ್ನು ಬಲಗೈಯಲ್ಲಿ ಹಿಡಿದಿದ್ದನು; ವೈರಿಗಳು ಆ ಕೈಯನ್ನು ಕಡಿದರು; ಕೂಡಲೆ ಅವನು ಎಡಗೈಯಿಂದ ಧ್ವಜ ಹಿಡಿದನು; ವೈರಿಗಳು ಎಡಗೈಯನ್ನು ಕಡಿದರು; ರಸೂಲನು ಬಾಯಲ್ಲಿ ಧ್ವಜ ಹಿಡಿದನು, ಕುತ್ತಿಗೆ ಕೊಯ್ದರು, ರಸೂಲನು ರಣಾಂಗಣದಲ್ಲಿ ಮಡಿದನು. ಸುತ್ತುಮುತ್ತಲಿದ್ದ ಅನುಯಾಯಿಗಳಿಗೆ ವೀರಶ್ರೀ ತುಂಬಿತು, ಎಲ್ಲರೂ ಅದನ್ನು ಎತ್ತಿ ಹಿಡಿದರು; ಧ್ವಜವನ್ನು ರಕ್ಷಿಸಿದರು; ಅಂತು ಧ್ವಜವನ್ನು ವೈರಿಗಳ ಸ್ವಾಧೀನವಾಗಗೊಡಲಿಲ್ಲ! ಹೀಗೆ ಆತ್ಮಬಲಿದಾನದಿಂದ, ಪ್ರಾಣಾರ್ಪಣದಿಂದ ಧ್ವಜವನ್ನು ರಕ್ಷಿಸತಕ್ಕದ್ದಾಗಿ ಡಾ. ಪಟೇಲರು ನುಡಿದರು.

⁂

ಪುಣೆಯ ಲೋಕಮಾನ್ಯ ತಿಲಕರು ಸ್ಥಾಪಿಸಿದ "ಕೇಸರಿ" "ಮರಾಠಾ" ಪತ್ರಿಕೆಗೆ ೫೦ ವರ್ಷಗಳಾಗಿ ೫೧ನೇ ವರ್ಷ ಹುಟ್ಟಿದೆ. ಇದಕ್ಕಾಗಿ ಸಂಸ್ಥೆಯವರು "ಕೇಸರಿ" ಪತ್ರಿಕೆಯ ಸುವರ್ಣ ಮಹೋತ್ಸವ ವಿಶೇಷ ಸಂಚಿಕೆಯನ್ನು ಹೊರಡಿಸಿ ಈ ಉತ್ಸವವನ್ನು ಸಾಂಗಗೊಳಿಸಿದರು. ೫೧ನೇ ವರ್ಷ ಹುಟ್ಟಿದ ಬಗ್ಗೆ "ಕೇಸರಿ" ಪತ್ರಿಕೆಗೆ ದೇಶದ ಮಹಾರಾಷ್ಟ್ರ [illegible] ಪತ್ರಿಕಾ ಸಂಪಾದಕರುಗಳಿಂದ ಅಭಿನಂದನವಾಗುತ್ತಿದೆ. ಲೋಕಮಾನ್ಯರು ಸ್ವೀಕರಿಸಿದ ದೇಶಸೇವೆಯ ವ್ರತವನ್ನು ನಡೆಸಲು ಅನುಕೂಲವಾಗಲೆಂದು ಎಲ್ಲರೂ ಅಭೀಷ್ಟಚಿಂತನ ಮಾಡಿದರು. ಕಳೆದ ಮಂಗಳವಾರ "ಕೇಸರಿ" ಪತ್ರಿಕೆಯ ಮುದ್ರಕ ಪ್ರಕಾಶಕರಾಗಿ ಶ್ರೀ ಜನಾರ್ದನ ಬಾಪೂರಾವ ಕರಂದೀಕರರವರು ಪುಣೆಯ ಮೆಜಿಸ್ಟ್ರೇಟರಿಂದ ಡಿಕ್ಲೇರೇಶನ್ ಪಡೆದರು; ಆಗ 'ಕೇಸರಿ' ಆಫೀಸಿನಿಂದ ರೂ. ೧೦೦೦ಗಳ ಜಾಮೀನು ಕೇಳಲ್ಪಟ್ಟಿದ್ದಿತು. [illegible] ಈ ಹುಕುಮು. ಇಷ್ಟು ದಿವಸಗಳವರೆಗೆ ಶ್ರೀ ಪರಸೋತ್ತಮ ಕೇಳಕರರವರು ಮುದ್ರಕ-ಪ್ರಕಾಶಕರಾಗಿದ್ದರು.

⁂

ಹಿಗ್ಗಿಯ ಪೈಕಿ ಕೋಳಂಬರಕೇರಿಯ ಪಟೇಲರ [illegible] ಆನಮನ ಹುಟ್ಟಿತು. ಸೊಂಡಿ, ೩೨. ರಾಂ [illegible] ಕರು ಹುಟ್ಟಿದ ಸಮಾನ ದಿವ ತೀರಿತು



ಓಗಲೇ ಗ್ಲಾಸ ವರ್ಕ್ಸ, ಲಿಮಿಟೆಡ್.

(ಔಂಧ ಸ್ಟೇಟ) ಓಗಲೇವಾಡಿ.
ಜಿಲ್ಲಾ ಸಾತಾರಾ. (ಇಂಡಿಯಾ.)

ಈ ಕಾರಖಾನೆಯೊಳಗೆ ಪ್ರಭಾಕರ ಹಿತ್ತಾಳೀ ಕಂದೀಲು, ಪ್ರಭಾಕರ ಟಿನ್ ಕಂದೀಲು, ಅನೇಕ ತರದ ಹಿತ್ತಾಳೀಯ ಟೇಬಲ್ ಲ್ಯಾಂಪ್, ಹಂಗಿಂಗ್ ಲ್ಯಾಂಪ್, ಕಾಜಿನ ಭರಣಿಗಳು, ಮಂಗಳೂರ ನಮೂನೆಯ ಕಾಜಿನ ಹಂಚುಗಳು, ಗ್ಯಾಸ ದೀಪಕ್ಕೆ ಹಚ್ಚುವ ಅನೇಕ ತರದ ಗ್ಲೋಬುಗಳು, ಪೇಪರ ವೇಟ್ (ಗಾಳಿಯಿಂದ ಹಾರಿಹೋಗಬಾರದೆಂದು ಕಾಗದದ ಮೇಲಿಡುವ ಕಾಜಿನ ಗುಂಡು) ಮಸಿದೌತಿಗಳು, ದೀಪಕ್ಕೆ ಹಚ್ಚುವ ಎಲ್ಲ ತರದ ಗ್ಲಾಸ ನಳಿಗೆಗಳು, ಅನೇಕ ತರದ ಕಾಜಿನ ತಂಬಿಗೆ, ನೀರು ಕುಡಿಯುವ ಗ್ಲಾಸು, ಜೆಲ್ಲಿ ಉಪ್ಪು ಉಪ್ಪಿನಕಾಯಿ ಇಡುವ ಪಾತ್ರೆ, ಮೊದಲಾದ ತರತರದ ಒಳ್ಳೆ ಸಾಮಾನುಗಳನ್ನು ದೊಡ್ಡ ಪ್ರಮಾಣದಿಂದ ತಯಾರಿಸುತ್ತ ವ್ಯಾಪಾರಸ್ಥರಿಗೆ ಅವರವರ ಆರ್ಡರುಗಳಂತೆ ಯೋಗ್ಯ ದರದಿಂದ ಪೂರೈಸಿಕೊಡಲ್ಪಡುವವು.

ಏಜಂಟ, ಖಾದಿ ಮುಲ್ಲಾ,
ಕಾರವಾರ.

ಸ್ವದೇಶೀ ಕಾರಖಾನೆದಾರರಿಗೆ—

ನಿಮ್ಮ ತಯಾರಿಸಿದ ಸರಕಿನ ಮೇಲೆ ಜಾಹೀರಾತು, ದಲಾಲಿ ಮೊದಲಾದ ಖರ್ಚು ಬರದೆ, ಗಿರಾಕರಿಗೆ ಯೋಗ್ಯ ಬೆಲೆಗೆ ಸರಕು ವಿಕಬೇಕೆಂದು ನಿಮಗೆ ತೋರುತ್ತಿದ್ದರೆ,
"ದಿ ಆಲ್-ಇಂಡಿಯಾ ಸ್ವದೇಶೀ ಮೆನ್ಯುಫೆಕ್ಚರರ್ಸ ಓನ ಸ್ಟೋರ್ಸ" ಮುಂಬಯಿ ನಂ. ೮.
ಇವರ ಕಡೆ ಹೆಸರುಗಳನ್ನು ನೋಂದ ಮಾಡಿರಿ. ಮತ್ತು
ಹೆಚ್ಚಿನ ಮಾಹಿತಿಬಗ್ಗೆ ಇಂಗ್ಲಿಷಿನಿಂದ ಯಾ ಮರಾಠಿಯಿಂದ ಪತ್ರವ್ಯವಹಾರ ನಡೆಸಿರಿ.

ದಿ ಬೊಂಬೆ ಲ್ಯಾಫ್ ಎಶ್ಯೂರೆನ್ಸ ಕಂಪೆನಿ ಲಿಮಿಟೆಡ್.

ಸ್ಥಾಪನೆ: 1908.

ಈ ಕಂಪನಿಯು [illegible]

ಕಂಪನಿಯ ಹಣವು ಸರಕಾರಿ ಪ್ರೊ. ನೋಟುಗಳಲ್ಲಿಯೂ, ಇಂಡಿಯನ್ ಟ್ರಸ್ಟ್ ಎಕ್ಟಿನ ನಿಯಮಗಳಂತೆ [illegible] ಇಡಲ್ಪಟ್ಟಿದೆ.

ಮಲ್ಟಿಪಲ್ ಬೆನಿಫಿಟ್ ಎಂಬ ಪಾಲಿಸಿ ವಿಮೆದಾರರಿಗೆ ಅತಿಶಯ ಲಾಭಕರವಾಗಿದೆ

ಹೆಚ್ಚಿನ [illegible] ಕೆಳಗಿನ ವಿಳಾಸಕ್ಕೆ ಬರೆಯಿರಿ.

Kumta Agent:-
D.K NAYAK Esq
Honavar Agent.-
R. V. PRABHU Esq.

K. Padmanabha Rao & Sons,
BELGAUM
Chief Agents for
Karnatak Districts & S. M. States.

Tel Address— "OMNIBUS." ತಂತಿ ಪತ್ತೆ. – "OMNIBUS."

ಟಿ. ಎಸ್. ಮೋಟರ ಸರ್ವಿಸ, ಶಿವಮೊಗ್ಗಾ.

ಗವ್ಹರ್ನಮೆಂಟ ಮೇಲ್ ಕಂಟ್ರಾಕ್ಟರ್ಸ

☞ ಶಿವರಾತ್ರಿ ಸಮಯ ಗೋಕರ್ಣಕ್ಕೆ ಸ್ಪೆಶಲ್ ಲಾರಿಗಳು ಬಿಡುತ್ತವೆ!

ಸರ್ವೀಸುಗಳು:-

(೧) ಹುಬ್ಬಳ್ಳಿ-ಯಲ್ಲಾಪುರ-ಅಂಕೋಲಾ ಮೇಲ್ ಬ್ಯಾಸ, (೨) ಹುಬ್ಬಳ್ಳಿ-ಮುಂಡಗೋಡ-ಶಿರಸಿ, (೩) ಹಾವೇರಿ-ಹಾನಗಲ್-ಶಿರಸಿ ಮೇಲ್ ಬ್ಯಾಸ. (೪) ಅಂಕೋಲಾ ಕುಮಟಾ, ಅಂಕೋಲಾ-ಕಾರವಾರ-ಇತ್ಯಾದಿಗಳಲ್ಲಿ ರೆಗ್ಯುಲರ್ ಸರ್ವಿಸ್ ನಡೆಯುತ್ತದೆ. ಪ್ರಯಾಣಿಕರಿಗೆ ಉಳಕೊಳ್ಳುವದಕ್ಕೆ ಎಲ್ಲಾ ಸ್ಟೇಶನುಗಳಲ್ಲಿ ವ್ಯವಸ್ಥೆ ಮಾಡಿದೆ ವಿಶೇಷ ಮಾಹಿತಿ ಆಫೀಸಿನಲ್ಲಿ ತಿಳಿದುಕೊಳ್ಳಬಹುದು.

M. Manjappa.
PROPRIETOR

ಹುಬ್ಬಳ್ಳಿ (ಜಿಲ್ಲಾ ಧಾರವಾಡ.)

[illegible]

Siromani Udipi Narayanacharya,
CHAUKHAMBA, BENARES CITY.

[illegible] 108 [illegible] 10 [illegible] 32 [illegible] 100 [illegible] 380 [illegible] 35 [illegible]

ಶಿರೋಮಣಿ ನಾರಾಯಣಾಚಾರ್ಯ
ಚೌಖಂಬಾ, ಕಾಶೀ ಕ್ಷೇತ್ರ

ಪ್ರಜಾಪರಿಪಾಲಕರಿಗೆ—

ರೈತರ ದೈನ್ಯ: ಕೆಲವು ಅಂಕಿಗಳು

[illegible]

[illegible]

[illegible]

ರೂಪಾಯಿ ೧೫ ಇಷ್ಟರಿಂದ ಸಿಗುವದಿಲ್ಲ, ಅದರೂ, ಇಷ್ಟೇ ಖರ್ಚು ಹಿಡಿದಾಗ್ಯೂ ಅಂದರೆ ೩ ಎಕ್ರೆಗೆ ೫೧೩ ರೂಪಾಯಿ ಖರ್ಚಾಯಿತು ೩ ಎಕ್ರೆ ತೋಟಕ್ಕೆ ತೀರ್ವೆ ಎಕ್ರೆ ೧ಕ್ಕೆ ೧೧॥ ರೂಪಾಯಿಗಳಂತೆ ರೂ ೩೪, ಹೀಗೆ ಒಟ್ಟು ರೂ ೫೪೭ ಖರ್ಚಾಗಬೇಕು ಹುಲ್ಲುಗದ್ದೆಯ ಒಗ್ಗೆ ೩॥ ಎಕರೆಯಂತೆ ತೀರ್ವೆ ತೆರಬೇಕು, ಈ ಲೆಕ್ಕ ಹೋಗಲಿ, ಹೀಗಲ್ಲ ಪ್ರ-ಪ್ರ ಲೆಕ್ಕ ಮಾಡಿದರೆ, ಕೊಡುವವರ್ಯಾರ ? ಒಟ್ಟಿನ ೩ ಎಕ್ರೆಗೆ ೫೦ ರೂಪಾಯಿ ಖರ್ಚು ಬರುತ್ತದೆ ಉತ್ಪನ್ನವೆಷ್ಟು ಬರುತ್ತದೆ ನೋಡುವಾ ತೆಂಗು ಗುಂಡಿದೆ ಉಂಟು ಕಡಿವೆಯದಾಗುವದೇ ಉಂಟು ಪಿಡಾಕೆ ೧೨೦ ಮಣ ಅಡಿಕೆ ೬ ಮಣ ಬೆ ೧೫ ೩ ವರ್ಷಯಾದಕ್ಕೆ ಹೀಗೆ ೩ ಎಕ್ರೆ ತೋಟದಿಂದ ಉತ್ಪನ್ನ ೪೫ ಕ್ಕಿದೆ ಅಡಿಕೆ ೫೦ ಮಣಕ್ಕೆ ರೂ ೩೦, ವೆ ೧೫ ರೂ ೮, ಯಾಕ್ಕೆ ಮಣಕ್ಕೆ ರೂ ೨೫ ಹೀಗೆ ಈಗ ಇದ್ದ ಈ ಲೆಕ್ಕದಂತೆ ರೂ ೪೨೬ ೧೨೦ ಉತ್ಪನ್ನವಾಯಿತು ಕೊಳೆಯಾಗಳನ್ನೆಲ್ಲ ಸಂಗ್ರಹಿಸಿಕೊಂಡು ಅಂತವರ—ಒಣಗಿದವರ ಕೈ—ಕಾಲು ಹಿಡಿದು ತೋಟ ಸಾಗುವಳಿ ಮಾಡಿ ಪಡೆದವರೆನಿಸಿಕೊಳ್ಳುವ ಬೆಚ್ಚ್ರಕ್ಕೆ ೬ಕ್ಕೆ ಲಾಭವೆ ದರೆ ರೂ ೧೨೧–೮–೦ ನಷ್ಟ ತೋಟ ಸಾಗುವಳಿ ಮಾಡಿದ ಕಷ್ಟಿಗೆ ರೂ ೧೨೧॥ ಗಳನ್ನು ಕೈಯೊಳಗಿಂದ ತೆತ್ತ ಹಾಗಾಯಿತು—ಹುಕ್ಕೆಗೆ ಕಟ್ಟಿಕೊಂಡು ಸಂಸಾರದ ವ್ಯಥೆ ಪಡುತ್ತ ಉಳಿದಾಯಿತು ಗಂಡ-ಹೆಂಡರಿಗೆ ಕನಿಷ್ಟ ೧೦೦ ರೂಪಾಯಿಯಾದರೂ ಖರ್ಚಿಗೆ ಬೇಕು, ಒಟ್ಟಿನ ಮಕ್ಕಳಿದ್ದರಂತೂ ೨೦೦ ರೂಪಾಯಿ ಬೇಕಾಗುವದು. ಎರಡರಿದ್ದರೆ, ಹೋಗುವವರಿದ್ದರೆ ಅಂಥ ಸ್ಥಿತಿಯಲ್ಲಿ ರೈತರು ಉಣ್ಣುವದೇನು ಸಾಲಗಾರರಿಗೆ ಕೊಡುವದೇನ ತೀರ್ವೆ ಕೊಡುವ ಬಗೆ ಹೇಗೆ? ಹಿಂದೆ ವರವಿದ್ದಾಗ ಗಳಿಸಿಟ್ಟ ಸಂಗ್ರಹದೊಳಗಿಂದ ಏನಾದರೊಂದು ಕೊಡುವಾ ಕೇಳದೆ ಅಗತ್ಯದ್ದು ಸಾಗುವಳಿ ಖರ್ಚು ತಗೆದು ರೂ ೨೦೦–೩೦೦ ತಗಲುವದು ಅದು ಸಂಸಾರದ ಖರ್ಚಿಗೇ ಹೋಯಿತು, ಸಾಹುಕಾರರ ಬಡ್ಡಿಗೇ ಹೋಯಿತು ನರೆ ಕಟ್ಟಿದ ನೀರು ನೆರೆ ಅಳಿದ ಕೊಡಲಿ ಬಯಲಾಗುವಂತೆ ವ್ಯವಸ್ಥೆಯಾಗಿ ಹೋಗಿದೆ ಈ ಕಾಲದಲ್ಲಿ ಬೆಳೆದ ಸಂಸಾರ ಖರ್ಚಿಗೆ ಈಗ ಸಿಗ್ಗದು ಸಾಂತವನ್ನು ಕೈ ಅಲ್ಲದೇ ಇಷ್ಟು, ಸಾಲವಂತೂ ಬೆನ್ನಿಗಿದೆ ಕೊಳೆತ ಸಾವುಕಾರರೊಟ್ಟಿಗೇ ಅದಕ್ಕೆ ಸಾಕ್ಷಿ ಅಗ ಗಳಿಸಿ ಸಂಗಾವರ ಕೊಡಹೇಳಲಿಕ್ಕಾಗಲಿ ಕೊಡಲಿಕ್ಕಾಗಲಿ ನ್ಯಾಯನೀತಿಯಾಗು ತಲಯಲ್ಲಿದೆ? ಹೀಗಿದ್ದರೆ ಸಾಲ ಯಾಕೆ ಆಗಿಯುತ್ತವೆ? ಸಾಹುಕಾರರು ಸಾಲ ಯಾಕೆ ಕೊಡುತ್ತಾರೇನು

ಇದನ್ನೆಲ್ಲ ಪರಾಂಬರಿಸಿ ಮಧ್ಯಾಧಿಕಾರಿಗಳು ಕೈಕರಿಗೆ ಬಿಡುವಾಗಬೇಕು ತೀರ್ವೆ ವಸೂಲಿಯು ಕ್ರಿಯಾಕ್ಕೆ ಮುಂಚೆ ತತ್ಕಾಲ ಮುಂದೆ ಸಾಗುವಳಿಗೆ ಅನುಕೂಲವಾಗುಅಂತೆ ತಗಾವಿ ಸಾಲಗಳನ್ನು ಕೊಟ್ಟು ರೈತರಿಗೆ ಕಾಪಾಡಿಕೊಳ್ಳಬೇಕಾಗಿ ಇದೆ

* * *

—ಬೆಳಗಾಂವ ಲೋಕಮಾನ್ಯದ ಹಿಂದೇ ಮಾತರಂ ಪತ್ರಿಕೆಯಿಂದ ೧೨೦೦೦ ರೂಪಾಯಿಗಳ ಜಾಮೀನುಗೊಂಡೆಗಳಿವ 'ಸ್ವರಾಜ್ಯ' ಪತ್ರಿಕೆಯಿಂದ ೧೦೦೦೦ ರೂಪಾಯಿಗಳ ಜಾಗು ಮುಂಬಯಿಯ 'ಫ್ರೀ ಪ್ರೆಸ್ ಜನರಲ್' ಪತ್ರಿಕೆಯಿಂದ ೪೦೦೦ ರೂ ಜಾಮೀನನ್ನು ಸರಕಾರವು ಬೇಡಿದ ಪರಾಧಿಪತಿಗಳ. ಹೊರಡಿಸಿದ ವರ್ತಮಾನಪತ್ರಗಳ ಶಾಸನದಂತೆ ಈ ವಾರದಲ್ಲಿ ಪ್ರಾರಂಭವಾದ ಕರ್ನಾಟಕದ ಕಾನ್ನಡದಲ್ಲಿ ವರ್ತಮಾನಪತ್ರಗಳ ಕಾಯಿದೆಯಾಗುವದರ ಈ ಕಾಯಿದೆ ೩ ವರ್ಷಗಳ ವರೆಗೆ ಇರುವದು [illegible]ದ ಕೆಲಸಮಾಡುವ ಜೋಧಿಸುವವರಿಗೆ ತಂಗಿಸುವ [illegible] ಪರಾಧಿಪತಿಗಳು ಹೊರಡಿಸಿದ ಶಾಸನದಂತೆ [illegible]ಯಾಗಲಿಕ್ಕಿದೆ

ಸತ್ಯಾಗ್ರಹದ ವಾರ್ತೆ.

ಗುಜರಾಥದೊಳಗೆ

ಖೇಡಾ ಜಿಲ್ಲೆಯ ಕಲೆಕ್ಟರರಿಗೆ ಬದಲಿಯಾಯಿತು, ಬೋರಸದ ತಾಲೂಕಿನ ಮಾಮಲೇದಾರರಿಗೂ ಬದಲಿಯಾಯಿತು ಹೊಸ ಮಾಮಲೇದಾರರಾದ ಮಿ| ಬೆಂಜಾಮಿನ್‌ರವರ ತೀರ್ವೆ ವಸೂಲಿಯ ಕ್ರಮ ಕೇಳರದಿದೆ ಇವರ ಜನವರಿ ೯ನೇ ತಾರೀಖಿಗೆ ೨೫ ಮಂದಿ ಪೋಲೀಸರನ್ನು ಕಟ್ಟಿಕೊಂಡು ತೀರ್ವೆ ವಸೂಲಿಗೆ ಹೊರಟರು ಜೊತೆಗೆ ಹಲವು ಸಾಗ್ರಾಣಿಗಳಿದ್ದರು ಮಾಮಲೇದಾರರು ದಂಡಿಸಿ ಗ್ರಾಮಕ್ಕೆ ಹೋದರು. ಜನರು ಬಿಟ್ಟು ಹೋಗದಂತೆ ಮನೆ ಮುಚ್ಚಿ ಮಾರ್ಗಗಳ ವೆರೆ ಪೋಲೀಸರನ್ನಿಟ್ಟು ಮಿ| ಬೇಂಜಾಮಿನ್‌ರವರು ಗ್ರಾಮ ಸೇರಿದರು ರಾಜನಾಮೆ ಕೊಟ್ಟ ಶ್ರೀ| ಮೋಹನಭಾಯಿ ವಾಘೇಶಭಾಯಿ ಪಟೇಲರವರ ಮನೆ ಕೆಡವ್ಹಿಗಲಿಲ್ಲವೂ ಹಿಂದೆ ಪೋಲೀಸ ಶಿಪಾಯಿಗೆ ನಿಕ್ಕಸಿ ಮಾಮಾಲೇದಾರರು ಹೊಲಗಳ ವೇಳೆ ಯಾಗಿದದ, ಅಲ್ಲಿ ಸತ್ಯಾಗ್ರಹಿಗಳಿಗೂ ಮಾಮಲೇದಾರರಿಗೂ ಬೆಕ್ಕನ್ನೇಡದ ಸಂಭಾಷಣ ನಡೆಯಿತು

ಮಾಮಲೇದಾರ ನಿರ್ಧಾರವಾಗಿ ನೀವು ಹೀಗೆ ಯಾಕೆ ಕಷ್ಟಪಡುತ್ತೀರಿ? ಈ ಜನರು (ಕೊಂಗ್ರೆಸಿನವರು) ನಿಮಗೆ ದುಬೋಧನೆ ಮಾಡುತ್ತಾರೆ, ಇವರು ನಿಮ್ಮ ಕಷ್ಟ ಕಾಣರು, ತೀರ್ವೆ ಕೊಟ್ಟು ಸುಖಿಯಾಗಿರ್ರಿ."

ಸತ್ಯಾಗ್ರಹಿಗಳು ಸರಕಾರಕ್ಕೆ ತೆರಲಿ ತೀರ್ವೆ ಕೊಡಲು ಅದು ಸಮ್ಮತವಾಗದ ಮಾತು ಹೊಟ್ಟೆಯಲ್ಲಿ ಉಣ್ಣಲು ಸಮ್ಮ ಬಳಿ ಏನೂ ಉಳಿಯುವದಿಲ್ಲ ಈ ಅನರ್ಥ ಸರಕಾರವು ನಮಗೆ ಸುಲಿಯಿತು ಈ ರಾಜ್ಯದಲ್ಲಿ ನಮಗೆ ಸುಖವಿಲ್ಲ ಸಮಾಧಾನವಿಲ್ಲ

ಮಾ (ವಿಷಯಾಂತರ ಮಾಡಿ) ನೀವು ಇಲ್ಲಿಯ ಸ್ವಸ್ಥ ಮಾಡಿದರೆ ಈ ಮುಖ್ಯವಾನ ನಿಷೇಧಕ್ಕಾಗಿ ದುಡಿಯ ಬಹುದು, ಅದರೆ, ಆರಭಿರಿಗೆ ಸೇರಬೇಡಿ ಇದರಿಂದ ನಿಮ್ಮ ಹಾನಿ ನಾಶವಾಗುವದು

ಸ ರಂಗರೇ ಈ ಪ್ರವಚನವೆಲ್ಲ ನಿಮ್ಮ ಹೊಟ್ಟೆ ತುಂಬಿಕೊಳ್ಳುವದಕ್ಕಾಗಿ ನೀವು ಕೊಡದ ಶ್ರೀರಿ ದೇಶದ ವೇಳೆ ನಿಮಗೆ ಎಲ್ಲಿದ್ದಾದರೂ ಪ್ರೇಮವಿದ್ದರೆ, ನೌಕರಿಗೆ ರಾಜೀ ಕೊಟ್ಟು ನಮಗೆ ಬಂದು ಕೂಡಿಕೊಳ್ಳಿ ದಾಲು ಭಟಭಾಯಿ ವಿಠಲಭಾಯಿಯು ನಿರು ತೊಟ್ಟಂತೆ ನೀವು ರಾಜೆ ಕೊಡಿರಿ

ಹೀಗೆ ಹೊಸ ಮಾಮಲೇದಾರರ ಹೊಸ ಪ್ರಯತ್ನಗಳ ನಿಷ್ಫಲವಾದವು ಮಾಮಲೇದಾರರ ಗಾಡಿ ಎತ್ತು ಕಳಗಿನೊಪ್ಪಗಳನ್ನು ಒಪ್ಪಿಸಿ ಇಟ್ಟರಿಗೆ ಪರೆಹಿಡಿದ ಬೋಸನ ಗ್ರಾಮದ ಕತೆಗೆ ಕೇಳಿರಿ ಬೋಸನಾ ಗ್ರಾಮದಲ್ಲಿ ಎಷ್ಟರೂ ಮನೆಟ್ಟು ಹೋಗಿದ್ದಾರೆ ಅಲ್ಲಿ ಎತ್ತುಗಳನ್ನು ಜಪ್ತಮಾಡಿ ಬೋರಸದಕ್ಕೆ ಹೊಡ್ದರು ಆಶಾಭಾಯಿಯವರ ಸಾಗ್ರಾಣದಲ್ಲಿದ್ದ ೩೦೦ ಮಣ ಹೊಗೆಸೊಪ್ಪನ್ನು ಜಪ್ತ ಮಾಡಿ ಹಿಡ್ದರ ದೇಶಾಂತರ ಮಾಡಿದ ಸತ್ಯಾಗ್ರಹಿಗಳಿಗೆ ಬ್ರಿಟಿಶ ಸೀಮೆಯಲ್ಲಿ ಬಂದು ತಮ್ಮ ಕಡೆ ಮಾತನಾಡಿಕೋಗದೆಕಾಗಿ ಮಾಮಲೇದಾರರು ಹೇಳಿ ಕಳಿಸಿದರು ಅವರು ಬರಲೊಪ್ಪಲಿಲ್ಲ ಹೋದ ತಾದಿಗೆ ೫ ಎಕರೆಲ್ಲ ಬಿಂತೆ ಮಾಮಲೇದಾರರು ಮರಳಿಹೋದರು ಸರ್ಕಾರ್‌ ಇನ್ನುಮೇಕ್ಕೆ [illegible] ರಾವ ರಾ| ಕೃಷ್ಣ ಶಂಕರ ವ್ಯಾಸರವರು ವಿರಸದ ಗ್ರಾಮದ ಮೇಲೆ ಸಾಗಿದರು ಹೋಗುವಾಗ ಬೂನಾವ ಗ್ರಾಮದಲ್ಲಿ ಒಬ್ಬರ ಹೊಗೆಸೊಪ್ಪನ್ನು ಜಪ್ತಮಾಡಿದರು "ಈ ಗದ್ದೆ ಯಾರದು? ಉದಯಭಾಯಿಯವರ ಗದ್ದೆ ಯಾರದು? ಈಗೆಲ್ಲಾದರೂ ನಿಮ್ಮ ತೀರ್ವೆ ಕೊಡಬಹುದೋ ಇಲ್ಲವೋ?" ಹೀಗೆ ಕೇಳಲು, ಎಲ್ಲರೂ 'ಇಲ್ಲ' ವೆಂದು ಉತ್ತರ ಕೊಟ್ಟರು "ನೋಡಿ, ನಿಮ್ಮ ಗ್ರಾಮದಲ್ಲಿ ರೂ ೩॥ ಸಾವಿರ ತೀರ್ವೆ ಬಾಕಿ ಇದೆ, ನೀವು ಕೊಡದಿದ್ದರೆ, ಕಷ್ಟ ಹೋಗುವಿರಿ" 'ಬಿಡ್ದು ಬಿಡಲಿ, ನಾವು ೧ ಪೈ ತೀರ್ವೆ ಕೊಡೆವು, ಹೀಗೆ ಒಕ್ಕಲಿಗರು ಉತ್ತರ ಕೊಡಲು, ರಾ| ಕೃಷ್ಣ ಶಂಕರರವರು ನುಡಿದದ್ದೇನಂದರೆ – 'ನೋಡಿರಿ ಹಕ್ಕಿ ನಿಮಗೆ ಸರಿಹಿಡಿದಿದ್ದೇನೆ ಪೋಲೀಸ ಪೇದೆಗಳೇ, ಈ ಗದ್ದೆಯೊಳಗಿಂದ ಹೊಗೆಸೊಪ್ಪನ್ನು ಒಟ್ಟ ಮಾಡಿ ' (ಸರಿಹಿಡಿದು ೩ ತಾಸಾದ ಬಳಿಕ, ಒಕ್ಕಲಿಗನು) '' ಸಿವೆಯಾಗಿ, ಊಟ ತಾಕಿ" ಎಂದು ಹೇಳಿದನು. "ಇಲ್ಲ ನಿಮಗೆ ಊಟ ಸಿಗದು ನಿಮ್ಮ ಮನೆಗೆ ಹೋಗಿ ಊಟ ಮಾಡಿ ತಿರುಗಿ ಬನ್ನಿ, ಯಾವಲ್ಲಿಯ ತನಕ ನೀವು ತೀರ್ವೆ ಕೆರದಿರುವಿರೆಂದು ನಾನು ನೋಡುತ್ತೇನೆ ಇಕೋ ನೋಡಿ ಎಷ್ಟು ಜನರು ತೀರ್ವೆ ಕೊಟ್ಟರು ನಿಮಗೆ ಬೇಕಾದರೆ ರಶೀದಿ ತೋರಿಸುತ್ತೇನೆ ಒಕ್ಕಲಿಗನು ನುಡಿದದ್ದೇನಂದರೆ "ನನಗೆ ರಶೀದಿ ನಾ ಬೇಡ ಹೀದು ಪೈ ೩ ಕೊಡುವದಿಲ್ಲ" ಈ ಕೊಕ್ಕಿನ ಮೇಲೆ ಆತನಿಗೆ ಬಿಟ್ಟು ನಡೆದರು. ಮಾಮಲೇದಾರರ ಜಪ್ತಿಯ ಹುಕುಮುಗಳನ್ನು ಹೊರಡಿಸಿದ್ದಾರೆ ೧ ದಿನದೊಳಗೆ ತೀರ್ವೆ ಕೊಡದಿದ್ದರೆ ಭೂಮಿ ಸರಕಾರ ಜಪ್ತಾಗುವದಾಗಿ ಜಪ್ತಿ ಅಧಿಕಾರರಿಗೆ ಯಾವದೇ ತರದ ಆತಂಕ ಮಾಡತಕ್ಕದ್ದು ಬಾಗಿಲ ಬೀಗ ಮುರಿದು ಯಾ ಬಾಗಿಲು ಒಡೆದು ಜಪ್ತಿ ಮಾಡಬಹುದಾಗಿ ಆತಂಕ ಮಾಡತಕ್ಕದ್ದು ಆತಂಕ ಮಾಡಲಿ ಆತಂಕ ಕೊಡುವವರ ಮೇಲೆ ಕಾಯಿದೆ ರಂ ೩ ಇಲ ಜು ನಡೆಸಲ್ಪಡುವದು ತೆ ಜಪ್ತಿಯ ಕ್ರಮ ನಡೆದಿದೆ ಸರಿಹಿಡಿದು ಶಿಕ್ಷೆಯ ಕ್ರಮವೂ ನಡೆದಿದೆ ಬೆಳೆ ಲೂಟಿಯಾಗುತ್ತಿದೆ ಪುಸ್ತಕ, ಐಶಿವೆ ಈ ಜಪ್ತಿಗಳು ಜಪ್ತಿಯಾಗುತ್ತಿವೆ ಹೊಗೆಸೊಪ್ಪಿನ ಕಳವುಗಳಾಗುತ್ತಿವೆ ಬೋರಸದಲ್ಲಿ ॥ ಎಕ್ರೆಯ ೩ ದ ಹೊಲ ಲಿಲಾವಾಗಿ ೧೯ ರೂಪಾಯಿ ಬಂತು ಇದರ ವೇಳೆ ಬೆಳೆದ ಪೈರಿತ್ತು ೧೫ ೬ ರೂಪಾಯಿ ದೊರೆಯಾದೀತು ಇನ್ನೊಂದು ೫ ಎಕರೆ ಭೂಮಿ ೬ ರೂಪಾಯಿಗೆ ಲಿಲಾವಾಯಿತು ಇದಗಲ್ಲಿ ೫೦ ಮಣ ಹೊಗೆಸೊಪ್ಪಿನ ಬೆಳೆ ನಿಂತಿತ್ತು. ಇದಕ್ಕೆ ಅನಿಸ ೩೦ ರೂಪಾಯಿಯಾದರೂ ಕೊಡಬೇಕು ರಾಸ ಗ್ರಾಮದ ಹೊಸ ಪಟೇಲರೂ ಸಾಗ್ರಾಣಿಗಳೂ ಕಳೇಗ [illegible] ಬರಕೊಳ್ಳುತ್ತಿದ್ದರು ೩ ಎಂಗಳ ಮಾರ್ಗ ಒಂದು ಕೆ ಇವರಿಗೆ ನೋಡಿದೊಡನೆ ಮಾಮಲೇದಾರರು ನ ಹಿಡಿದ್ದೇನಂದ್ "ನಿಮ್ಮ ಲಿಕಾವೋಕ್ಕಿ ಆಯಾಗಿಯಿತೇ? ಬಾಸೇಸುವಾರಿಯು ಕೆಲಸವಾದ್ದಾಯಿತು ಎಷ್ಟು ತೀರ್ವೆ ವಸೂಲ ಮಾಡಿದಿರಿ? ಹೋಗಿರಿ ಮುಂದೆ ನಿಮ್ಮ ಕೆಲಸ ಮಾಡಿರಿ, ಇನ್ನೇಳೆ ಮಗಾ ಕೇಳದನ್ನು ನಡೆ ಸಾಗ್ರಾಣಿಗಳು ಕೆಲಸಾದಿ ಮರನೆ ಸಿಂತು ಮರಳಿದರ ಖೇಡಾ ಜಿಲ್ಲೆಯ ಬೋರಾಸನ್ ಗ್ರಾಮದ ದೇಸಾಯರ ಮಾಡಿದ ಒಕ್ಕಲಿಗ

(೭ನೆ ಪಾನದಮೇಲೆ ಮುಂದರಿಸಿದೆ)